ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 34


ರೂ. 5/-

ಆಗಸ್ಟ್ 23, 2009

ಕನ್ನಡ ವಾರಪತ್ರಿಕೆ



ಭೀಕರ ಬರ : ಸರ್ಕಾರಗಳ ತಾತ್ಸಾರ



ಸ್ವಾತಂತ್ರ್ಯ : ನಿರಂತರವೇ ? ನಿರಾತಂಕವೇ?

ಕೃಷಿಕೂಲಿಕಾರರ ಆಂದೋಲನದ ಘೋಷಣೆ



.ವಿ. ಲೋಕ :



ಯಥಾಸ್ಥಿತಿವಾದ !?



ಹಂದಿಜ್ವರ : ಭೀತಿ ಮೂಡಿಸುತ್ತಿರುವುದೇಕೆ ?

ಸಂದರ್ಶನ

ಅಸಂಘಟಿತ ಕಾರ್ಮಿಕರಿಗೆ ಗೌರವಯುತ ಜೀವನ ನಡೆಸಲು ಸಾಧ್ಯವಾಗುವಂತಹ ಕನಿಷ್ಟ ಕೂಲಿ, ಸೇವಾ ಭದ್ರತೆಗಳಿಗಾಗಿ ಒತ್ತಾಯಿಸಿ ಸಿಐಟಿಯು ಸಂಘಟನೆ ಸೆಪ್ಟೆಂಬರ್ ತಿಂಗಳಿನಲ್ಲಿ ಬೃಹತ್ ಆಂದೋಲನ ಹಮ್ಮಿಕೊಂಡಿದೆ. ಅಂಗನವಾಡಿ, ಬಿಸಿಯೂಟ ನೌಕರರೂ ವೇತನ, ಸೇವಾ ಭದ್ರತೆಯ ಪ್ರಶ್ನೆಗಳ ಆಧಾರದಲ್ಲಿ ಈ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ. ನೌಕರರ ಸಮಸ್ಯೆ ಹಾಗೂ ಬೇಡಿಕೆ, ಹೋರಾಟದ ಕುರಿತು ವಿವರಿಸಿದ್ದಾರೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ ಹಾಗೂ ಅಕ್ಷರ ದಾಸೋಹ ನೌಕರರ ಸಂಘದ ಮುಖಂಡರಾದ ಎಸ್.ವರಲಕ್ಷ್ಮಿ



ಅಂಗನವಾಡಿ -ಬಿಸಿಯೂಟ ನೌಕರರು 'ಸೆಪ್ಟೆಂಬರ್ ಹೋರಾಟ'ದ ಕಣಕ್ಕೆ

ಸಂದರ್ಶನ ನಡೆಸಿದವರು : ಆರ್.ರಾಮಕೃಷ್ಣ

ಜನಶಕ್ತಿ: ಅಕ್ಷರ ದಾಸೋಹ ಯೋಜನೆಯ ಖಾಸಗೀಕರಣ ಎಲ್ಲಿಗೆ ಬಂದಿದೆ? ಸಂಘಟನೆಯ ಮುಂದಿನ ಹೋರಾಟ, ಕಾರ್ಯತಂತ್ರ ಏನು?

ವರಲಕ್ಷ್ಮಿ: ಖಾಸಗೀಕರಣ ನಿಂತಿಲ್ಲ. ಕೇಂದ್ರ ಸರ್ಕಾರ ಮಾರ್ಗದರ್ಶಿ ಸೂತ್ರಗಳಲ್ಲೇ ಖಾಸಗೀಕರಣದ ಅಂಶ ಇದೆ. ಖಾಸಗೀಕರಣಕ್ಕೆ ಹಾಗೂ ಸ್ವಯಂ ಸೇವಾ ಸಂಘಟನೆಗಳಿಗೆ ಪ್ರೋತ್ಸಾಹಿಸಬೇಕೆಂಬ ಅಂಶ ಅಲ್ಲೇ ಇರುವುದರಿಂದ ಅಷ್ಟು ಸುಲಭವಲ್ಲ. ರಾಜ್ಯ ಸರ್ಕಾರ ಕೂಡ ಖಾಸಗೀಕರಣದ ಉತ್ಸಾಹದಲ್ಲಿದೆ.

ಕರ್ನಾಟಕದಲ್ಲಿ ಬಿಸಿಯೂಟ ಯೋಜನೆಯ ಖಾಸಗೀಕರಣದ ಪ್ರಯತ್ನ ನಡೆದಿದೆ.

ರಾಜ್ಯದಲ್ಲಿ ಬಿಸಿಯೂಟದ ಹೆಸರಿನಲ್ಲಿ ಹಗರಣಗಳು ನಡೆಯುತ್ತಿವೆ. ಶಾಲಾ ಮಕ್ಕಳಿಗೆ ಮಧ್ಯಾಹ್ನ ಪೌಷ್ಟಿಕವಾದ ಊಟ ನೀಡುವುದಲ್ಲದೇ, ಸಹ ಪಂಕ್ತಿ ಭೋಜನದ ಮೂಲಕ ಸಾಮಾಜಿಕ ನ್ಯಾಯಕ್ಕೆ ಸಹ ಪೂರಕವಾದದ್ದು ಈ ಬಿಸಿಯೂಟದ ಯೋಜನೆ. ಇಂತಹ ಯೋಜನೆಯನ್ನು ಖಾಸಗೀಕರಿಸುವ ಪ್ರಯತ್ನ ನಡೆದಿದೆ. ಆದರೆ ಹೋರಾಟಗಳಿಂದಾಗಿ ಇದಕ್ಕೆ ಕಡಿವಾಣ ಹಾಕಿದಂತಾಗಿದೆ. ಇಸ್ಕಾನ್ ಸಂಸ್ಥೆಯು ಬಿಸಿಯೂಟದ ಹೆಸರಿನಲ್ಲಿ ನಡೆಸುತ್ತಿರುವ ವಂಚನೆ ಮತ್ತು ಹಗರಣವು ಬಯಲಿಗೆ ಬರಲು ವಿಧಾನಸಭೆಯಲ್ಲಿ ಈ ಕುರಿತು ಚರ್ಚಿಸುವಂತಾಗಿದ್ದಕ್ಕೆ ಸಂಘಟನೆಯ ಹೋರಾಟ ಸಹ ಕಾರಣ. 2004-05ರಿಂದಲೇ ನಮ್ಮ ಸಂಘಟನೆ ಈ ಹಗರಣದ ಬಗೆಗೆ ಹೇಳುತ್ತಾ ಬಂದಿದೆ.

2009ರಲ್ಲಿ ಬಿಸಿಯೂಟ ಯೋಜನೆಯನ್ನು ಖಾಸಗೀಕರಣ ಮಾಡಲು ಬಿಟ್ಟಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಇನಷ್ಟು ಶಾಲೆಗಳಿಗೆ ಬಿಸಿಯೂಟ ಪೂರೈಸುವುದನ್ನು ಇಸ್ಕಾನ್‌ಗೆ ನೀಡುವ ಪ್ರಸ್ತಾಪವಿತ್ತು. ಅದನ್ನು ವಾಪಸ್ ಪಡೆಯಲಾಗಿದೆ. ಇದು ಹೋರಾಟಕ್ಕೆ ಸಿಕ್ಕ ಯಶಸ್ಸು. ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇಸ್ಕಾನ್‌ಗೆ ಯೋಜನೆ ನೀಡಬಾರದೆಂಬ ಬೇಡಿಕೆಗೆ ಸಮ್ಮತಿ ಸೂಚಿಸಿದಾರೆ.

ಇದುವರೆಗೆ ಬಿಸಿಯೂಟ ಖಾಸಗೀಕರಣ ಯೋಜನೆಯಿಂದ ಸುಮಾರು 20,000 ಜನರು ಕೆಲಸ ಕಳೆದುಕೊಂಡಿದ್ದಾರೆ. ಈ ವರ್ಷ ಈ ಸಂಖ್ಯೆಯನ್ನು 400ಕ್ಕೆ ಸೀಮಿತಗೊಳಿಸುವುದು ಸಾಧ್ಯವಾಗಿದೆ. ಶಿರಟ್ಟಿ, ಬೆಳಗಾವಿ, ತುಮಕೂರು ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಬಾಗಲಕೋಟೆ ಇತ್ಯಾದಿಗಳಲ್ಲಿ ಬಿಸಿಯೂಟ ಯೋಜನೆ ಖಾಸಗೀಕರಣವನ್ನು ತಡೆಯುವುದು ಸಾಧ್ಯವಾಗಿದೆ.



ಜನಶಕ್ತಿ: ಅಂಗನವಾಡಿ ಹಾಗೂ ಬಿಸಿ ಊಟದ ನೌಕರರ ಇತರ ಪ್ರಮುಖ ಸಮಸ್ಯೆಗಳೇನು?

ವರಲಕ್ಷ್ಮಿ : ದಿನಕ್ಕೆ 11.20 ಪೈಸೆ ಆದಾಯವಿರುವವರಿಗೆ ಬಿಪಿಎಲ್ ರೇಷನ್ ಕೊಡಬಾರದೆಂಬುದು ಸರ್ಕಾರದ ಮಾನದಂಡವಾಗಿದೆ. ಇದು ಅತ್ಯಂತ ಅವೈಜ್ಞಾನಿಕವೂ, ಅತ್ಯಂತ ಕ್ರೂರವೂ ಆದ ನೀತಿಯಾಗಿದೆ. ಸಿಐಟಿಯು ಸಂಘಟನೆಯು ಅಂಗನವಾಡಿ ಮತ್ತು ಬಿಸಿಯೂಟದ ಎಲ್ಲ ನೌಕರರಿಗೂ ಬಿಪಿಎಲ್ ಕಾರ್ಡ್ ಕೊಡಬೇಕೆಂದು ಒತ್ತಾಯಿಸುತ್ತಿದೆ. ಅದೇ ರೀತಿ ಅಂಗನವಾಡಿ ನೌಕರರಿಗೆ 'ಆಶಾಕಿರಣ' ಯೋಜನೆಯ ಅಡಿಯಲ್ಲಿ ಉಚಿತ ಸೈಟು ನೀಡುವ ಯೋಜನೆ ನಿಂತು ಹೋಗಿದೆ. ಅದನ್ನು ತತ್‌ಕ್ಷಣ ಜಾರಿಗೊಳಿಸಬೇಕಾದ ಅಗತ್ಯವಿದೆ. ಈ ನೌಕರರಿಗೆ ಸೇವಾ ನಿಯಮ ಮತ್ತು ಸಾಮಾಜಿಕ ಭದ್ರತೆಗಳಿಲ್ಲ. ಪಶ್ಚಿಮ ಬಂಗಾಳದಲ್ಲಿ ನೌಕರರಿಗೆ ಬೋನಸ್ ದೊರೆಯುತ್ತದೆ.

ತಮಿಳುನಾಡಿನಲ್ಲಿ ನೌಕರರಿಗೆ ಹೆಚ್ಚು ಸೌಲಭ್ಯಗಳು ಹಾಗೂ ಪರಿಹಾರ, ತುಟ್ಟಿ ಭತ್ಯೆ ದೊರೆಯುತ್ತಿದೆ. ಆಂಧ್ರಪ್ರದೇಶದಲ್ಲಿ ವೇತನವನ್ನು ಇತ್ತೀಚಿಗೆ ರೂ.200 ಹೆಚ್ಚಳ ಮಾಡಲಾಗಿದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ಅಸಂಘಟಿತ ಕಾರ್ಮಿಕರ ಬೃಹತ್ ಹೋರಾಟ ನಡೆಯಲಿದೆ. ಈ ಹೋರಾಟದಲ್ಲಿ ಅಂಗನವಾಡಿ ನೌಕರರು, ಬಿಸಿಯೂಟದ ನೌಕರರು ಸಕ್ರಿಯವಾಗಿ ತೊಡಗಿಕೊಳ್ಳಲಿದ್ದಾರೆ. ಅಕ್ಟೋಬರ್ 2-3ರಂದು ಬಿಸಿಯೂಟ ನೌಕರರು ಬೃಹತ್ ರ್‍ಯಾಲಿ ನಡೆಸಲು ಯೋಜಿಸಲಾಗಿದ್ದು ಹೋರಾಟದ ರೂಪುರೇಷೆ ಸಿದ್ಧಗೊಳ್ಳುತ್ತಿದೆ.

ಜನಶಕ್ತಿ : ಅಂಗನವಾಡಿ ನೌಕರರಿಗೆ ನಿವೃತ್ತಿ ವೇತನ ಬೇಡಿಕೆ ಎಲ್ಲಿಯವರೆಗೆ ಬಂದಿದೆ?

ವರಲಕ್ಷ್ಮಿ : ಅಂಗನವಾಡಿ ನೌಕರರಿಗೆ ಪೆನ್ಷನ್ - ನಿವೃತ್ತಿ ವೇತನ ಮುಖ್ಯವಾದ ಪ್ರಶ್ನೆ. ಈ ನೌಕರರಿಗೆ ಕೊಡುವುದು ಗೌರವಧನ, ನಿವೃತ್ತಿ ವೇತನ ಇಲ್ಲ ಎಂಬುದು ಸರ್ಕಾರದ ವಾದ. ಬಹಳಷ್ಟು ಹೋರಾಟ ಆದ ಮೇಲೆ 1997 ರಿಂದ ಪಿಂಚಣಿ ಪರಿಹಾರ, ನಿವೃತ್ತಿಗೆ ವಯಸ್ಸಿನ ನಿಗದಿ ಆಗಿದೆ. 2004ರಲ್ಲಿ ಕೇಂದ್ರ ಸರ್ಕಾರದ ಸುತ್ತೋಲೆ ಹೊರಬಂದಿದೆ. ನಿವೃತ್ತಿ ವೇತನ ಎಷ್ಟು ಏನು, ಯಾವಾಗ ಎಂದು ನಿಗದಿಪಡಿಸುವುದು ರಾಜ್ಯ ಸರ್ಕಾರದ ಕೆಲಸ ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಅದರ ಜಾರಿಗಾಗಿ ಹೋರಾಟ ಶುರುವಾಗಿದೆ. ನಿವೃತ್ತಿ ಯೋಜನೆಯ ಸೂಚನೆಯನ್ನು ಭವಿಷ್ಯನಿಧಿ (ಪಿಎಫ್) ತ್ರಿಪಕ್ಷೀಯ ಸಮಿತಿಯಲ್ಲಿ ತಿರಸ್ಕರಿಸಲಾಗಿದೆ. ಕೈಗಾರಿಕಾ ಕಾಯ್ದೆ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳಲಾಗುತ್ತಿದೆ. ಅಂಗನವಾಡಿ ನೌಕರರು ಮಾಸಿಕ 150 ರೂ. ನೀಡಿ, ಸರ್ಕಾರವೂ ಸಮಾನವಾಗಿ 150 ಕೊಡುಗೆ ನೀಡಿ ಈ ಮೊತ್ತವನ್ನು ವಿಮಾ ಸಂಸ್ಥೆಯಲ್ಲಿ ಇಡುವುದು, ನಿವೃತ್ತಿಯ ಸಂದರ್ಭದಲ್ಲಿ 1 ಲಕ್ಷ ನಿವೃತ್ತಿ ಪರಿಹಾರ ನೀಡುವುದು. ಅದೇ ರೀತಿಯಲ್ಲಿ ಸಹಾಯಕರು ಮಾಸಿಕ ರೂ.75 ನೀಡುವುದು. ಸಮಾನವಾ[...] ಸರ್ಕಾರವೂ ರೂ.75 ನೀಡುವುದ[...] ಹಾಗೂ ಸಹಾಯಕಿಯ[...] ನಿವೃತ್ತಿಯಾಗುವ ಸಂದರ್ಭಕ್ಕೆ [...] ಸಾವಿರ ರೂಪಾಯಿ ನಿವೃತ್ತಿ ಪರಿಹಾ[...] ನೀಡುವುದು.

ಇಂತಹ ಸೂಚನೆಯನ್ನು ಸಂಘ[...] ಸರ್ಕಾರದ ಮುಂದಿಟ್ಟಿದೆ. ಇದ[...] ವಾರ್ಷಿಕ ಸರ್ಕಾರ 50 ಕೋಟಿ ಬೇಕಾಗಲಿದೆ ಎಂ[...] ಅಂದಾಜಿದೆ. ಇಲಾಖೆಯ ಮಟ್ಟದಲ್ಲಿ ಈ ಸೂಚನೆ[...] ಸಮ್ಮತಿ ದೊರೆತಿದೆ. ಆದರೆ ಇದನ್ನು ಒಪ್ಪಿ ಜಾ[...] ಮಾಡುವಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಇಚ್ಛಾಶಕ್ತಿ[...] ಕೊರತೆ ಕಾಣುತ್ತಿದೆ.

ನಿವೃತ್ತಿ ಯೋಜನೆಯ ಜಾರಿಗಾಗಿ ಫೆಬ್ರ[...] 26,2009 ರಂದು ರಾಜ್ಯದ ರಾಜಧಾನಿ ಬೆಂಗಳೂರ[...] ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ತೀವ್ರ ಪ್ರತಿಭಟ[...] ನಡೆಯಿತು. 500 ಜನರನ್ನು ಬಂಧಿಸಲಾಯಿತ[...] ಇಷ್ಟಾದರೂ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಹ[...] ಒದಗಿಸಲಿಲ್ಲ. ಇತ್ತೀಚಿಗೆ ಪಾಂಡೀಚೆರಿಯಲ್ಲಿ ನಿವ[...] ಯೋಜನೆ ಜಾರಿಯಾಗಿದೆ. ತಮಿಳುನಾಡಿನಲ್ಲಿ 1 ಲ[...] ಪರಿಹಾರ ನೀಡಲಾಗುತ್ತಿದೆ. ಹಿಮಾಚಲ ಪ್ರದೇಶದ[...] ಸಹ ನಿವೃತ್ತಿ ಪರಿಹಾರ ನೀಡಲಾಗುತ್ತಿದೆ.

ಸೆಪ್ಟೆಂಬರ್ ಹೋರಾಟದ ಮೂಲಕ ರಾ[...] ಕೇಂದ್ರ ಸರ್ಕಾರಗಳಿಗೆ ನೌಕರರು ಎಚ್ಚರ[...] ನೀಡಲಿದ್ದಾರೆ.

ಜನಶಕ್ತಿ: ಅಂಗನವಾಡಿ ನೌಕರರು ಅಕ್ಷರದಾಸೋಹ ನೌಕರರು, ಸೆಪ್ಟೆಂಬರ್ ತಿಂಗಳ ಹೋರಾಟದಲ್ಲಿ ಪಾಲ್ಗೊಳ್ಳುವುದರ ಮಹತ್ವವೇನು?

ವರಲಕ್ಷ್ಮಿ: ಅಂಗನವಾಡಿ ನೌಕರರಿಗೆ ನಾವು ಇಲ್ಲಿಯವರೆಗೆ ನೌಕರರಿಗೆ ಮಾಸಿಕ 3000 ರೂ. ಸಹಾಯಕಿಯರಿಗೆ 2000 ರೂ. ವೇತನ ಕೇಳುತ್ತಿದ್ದೆವು. ನೌಕರರಿಗೆ 2500 ರೂವರೆಗೆ ವೇತನ ಪಡೆಯುವುದು ಸಾಧ್ಯವಾಗಿತ್ತು. ಆದರೆ ಇಂದಿನ ಬೆಲೆ ಏರಿಕೆ, ದುಬಾರಿ ಜೀವನ ವೆಚ್ಚಗಳಲ್ಲಿ ಈ ವೇತನವೂ ಸಾಲದಾಗುತ್ತಿದೆ.

ಸಿಐಟಿಯು ಸಂಘಟನೆಯು ಎಲ್ಲಾ ನೌಕರರಿಗೆ ಕನಿಷ್ಠ ದಿನಕ್ಕೆ 231.00 ರೂಪಾಯಿ ವೇತನ ನೀಡಬೇಕೆಂದು ಒತ್ತಾಯಿಸಿ ಸೆಪ್ಟೆಂಬರ್ ಬೆಂಗಳೂರಿನಲ್ಲಿ ತೀವ್ರವಾದ ಆಂದೋಲನವನ್ನು ಹಮ್ಮಿಕೊಂಡಿದೆ. ಸಿಐಟಿಯು ಬೇಡಿಕೆಯು ನ್ಯಾಯಸಮ್ಮತವಾಗಿದೆ ಮತ್ತು ವೈಜ್ಞಾನಿಕವಾಗಿದೆ. ಈ ಬೇಡಿಕೆಗಾಗಿ ಅಂಗನವಾಡಿ ನೌಕರರು ಹಾಗೂ ಅಕ್ಷರ ದಾಸೋಹ ನೌಕರರು ಈ ಸೆಪ್ಟೆಂಬರ್ ಮುಷ್ಕರದಲ್ಲಿ ಪಾಲ್ಗೊಂಡು ಅದರ ಯಶಸ್ವಿಗಾಗಿ ಶ್ರಮಿಸಲಿದ್ದಾರೆ.

ಸೆಪ್ಟೆಂಬರ್ ಹೋರಾಟ [...] ಏನು? ಹೇಗೆ?

ಸೆಪ್ಟೆಂಬರ್ 7,8,9,10 ಮತ್ತು 11 ರಂದು ಪ್ರತಿ[...] ತಾಲ್ಲೂಕು ಕಛೇರಿಯ ಮುಂದೆ ಧರಣಿ, ಪ್ರತಿದಿನ[...] ಧರಣಿಗಳನ್ನು ಗ್ರಾಮ ಪಂಚಾಯಿತಿ ನೌಕರರು, ಅಂಗನವಾಡಿ ನೌಕರರು, ಬಿಸಿಊಟದ ನೌಕರರು, ಹಮಾಲಿಗಳು, ಬೀಡಿ ಕಾರ್ಮಿಕರು, ತೋಟ[...] ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಕಟ್ಟಡ[...] ಕಾರ್ಮಿಕರು, ಸಾರಿಗೆ ಕಾರ್ಮಿಕರು, ನಗರ ಸಭಾ[...] ಕಾರ್ಮಿಕರು ಮುಂತಾದವರ ವಿಭಿನ್ನ ಸಂಘಗಳಿಂದ ಮತ್ತು ಮಧ್ಯಮ ವರ್ಗದ ನೌಕರರ ಬೆಂಬಲದಿಂದ ಸಂಘಟಿಸಬೇಕು.

ಈ ಕಾರ್ಯಕ್ರಮದ ಎರಡನೇ ಹಂತವೆಂದರೆ ಪ್ರತಿಯೊಂದು ಜಿಲ್ಲೆಯಲ್ಲಿ ಡೆಪ್ಯೂಟಿ ಕಮೀಷನರ್ (ಡಿಸಿ) ಗಳ ಬಳಿ ಸಾಮೂಹಿಕ ನಿಯೋಗ. ಇದು ಸೆಪ್ಟೆಂಬರ್ ಪೂರ್ಣಗೊಳ್ಳುವವರೆಗೆ ನಡೆಯಬೇಕು. ಇದರೊಂದಿಗೆ ಬೆಂಗಳೂರಿನಲ್ಲಿ ರಾಜ್ಯಮಟ್ಟದಲ್ಲಿಯೂ ಮಾತುಕತೆಗಳನ್ನು ನಡೆಸಲಾಗುತ್ತದೆ.

ಉಪ ಚುನಾವಣೆಗಳು

ಜನತೆಯ ಹಿತದ ಪ್ರಶ್ನೆಗಳೇನು?

ಜಿ.ಎನ್.ನಾಗರಾಜ್

ಈಗ್ಗೆ ಒಂದು ತಿಂಗಳಿಂದ 5 ಕ್ಷೇತ್ರಗಳ ಉಪ ಚುನಾವಣೆಗಳ ಪ್ರಚಾರಕ್ಕಿಂತಲೂ ಅಪಪ್ರಚಾರದ್ದೇ ಸುದ್ದಿ. ವಿವಿಧ ಪಕ್ಷಗಳ ನೀತಿ ಧೋರಣೆಗಳ ಪ್ರಚಾರ, ಟೀಕೆಗಳಿಗಿಂತ ವೈಯಕ್ತಿಕ ನಿಂದನೆ, ಅಪಹಾಸ್ಯಗಳೇ ಹೆಚ್ಚು. ಈ ಉಪಚುನಾವಣೆಗಳಲ್ಲಿ 2 ಆಪರೇಷನ್ ಕಮಲ ಅಥವಾ ಬಿಜೆಪಿಯ ಅಧಿಕಾರ ದಾಹದ ಫಲ. ಮತ್ತೆ ಮೂರು ನಮ್ಮ ಚುನಾವಣೆ ವ್ಯವಸ್ಥೆಯಲ್ಲಿ ಪಕ್ಷ ಮತ್ತು ಅದರ ಧೋರಣೆಗಳಿಗಿಂತ ಅಭ್ಯರ್ಥಿಗಳು, ಅವರ ಜಾತಿ, ಸಾಮರ್ಥ್ಯಕ್ಕೆ ...ವ ಅನವಶ್ಯಕ ಪ್ರಾಮುಖ್ಯತೆಯ ಕಾರಣವಾಗಿ



...ಸಂಭವಿಸಿದ್ದು, ಕಾಂಗ್ರೆಸ್ ಎರಡು ಕ್ಷೇತ್ರಗಳಲ್ಲಿ ಜೆಡಿ(ಎಸ್), ಒಂದು ಕ್ಷೇತ್ರದಲ್ಲಿ ಗೆಲ್ಲುವ ಸಾಮರ್ಥ್ಯವಿರುವ ಅಭ್ಯರ್ಥಿಗಳು ಲಭ್ಯವಿಲ್ಲದೆ ವಿಧಾನಸಭಾ ಸದಸ್ಯರನ್ನೇ ಲೋಕಸಭಾ ಅಭ್ಯರ್ಥಿಗಳನ್ನಾಗಿ ಮಾಡಿದ್ದು.

ಈ ಕ್ಷೇತ್ರಗಳಲ್ಲಿ ಹಿಂದೆ ಕಾಂಗ್ರೆಸ್ ನಾಲ್ಕು ಕ್ಷೇತ್ರಗಳಲ್ಲಿ ಜೆಡಿ(ಎಸ್) ಒಂದು ಕ್ಷೇತ್ರದಲ್ಲಿ ಗೆದ್ದ ಸ್ಥಾನಗಳು. ಹೀಗಾಗಿ ಈ ಉಪ ಚುನಾವಣೆಗಳು ಕಾಂಗ್ರೆಸ್ ಪಕ್ಷಕ್ಕೆ ಒಂದು ಸವಾಲು. ಬಿಜೆಪಿ ಸರ್ಕಾರಕ್ಕೆ ಬಂದ ಮೇಲೆ ನಡೆದ 5 ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ನಂತರ ಬಂದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ...ದು ಪಕ್ಷವಾಗಿ ಚುನಾವಣೆಗಳನ್ನು ಎದುರಿಸಲೂ ...ಲ್ಲ, ಜೆಡಿ(ಎಸ್) ಪಕ್ಷ ಈ ಎರಡು ಚುನಾವಣೆಗಳಲ್ಲಿ ತನ್ನೆಲ್ಲಾ ಶಕ್ತಿಯನ್ನು ಬಳಸಿ ತನ್ನ ...ತ್ವವನ್ನು ಉಳಿಸಿಕೊಂಡರೆ ಕಾಂಗ್ರೆಸ್ ಪಕ್ಷ ತನ್ನದೇ ಸ್ಥಾನಗಳನ್ನು ಉಳಿಸಿಕೊಳ್ಳಲೂ, ಕಳೆದುಕೊಂಡವುಗಳನ್ನು ಮರಳಿಗಳಿಸಿ ಕೊಳ್ಳಲು, ಬಿಜೆಪಿಯ ಅನೈತಿಕ ರಾಜಕೀಯವನ್ನು ಹಿಮ್ಮೆಟ್ಟಿಸಲೂ ರಾಜಕೀಯ ಇಚ್ಛೆಯನ್ನು ಪ್ರದರ್ಶಿಸಲಿಲ್ಲ.

ಆದ್ದರಿಂದ ಈಗ ಕೇಂದ್ರದಲ್ಲಿ ಮರಳಿ ಅಧಿಕಾರವನ್ನು ಹಾಗೂ ಲೋಕಸಭೆಯಲ್ಲಿ 61 ಸ್ಥಾನಗಳನ್ನು ಹೆಚ್ಚಿಸಿಕೊಂಡ ಮೇಲೆ ರಾಜ್ಯ ನಾಯಕತ್ವಕ್ಕೆ ಪ್ರಬಲ ಸವಾಲು ಎದುರಾಗಿದೆ. ಹೀಗಾಗಿ ಉಪಚುನಾವಣೆಗಳು ಕಾಂಗ್ರೆಸ್ ರಾಜ್ಯ ನಾಯಕತ್ವಕ್ಕೆ ಒಂದು ಪರೀಕ್ಷೆಯೇ ಆಗಿದೆ. ಬಿಜೆಪಿಗೆ ತನ್ನ ಆಪರೇಷನ್ ಕಾ-ಮಲ, ಅಬಾರ್ಷನ್ ಕಮಲವಾಗದಿರಲು ಎರಡು ಸ್ಥಾನಗಳನ್ನು ಬೆಂಗಳೂರು ನಗರದ ಗೋವಿಂದರಾಜನಗರ, ಬೆಂಗಳೂರಿನ ಹೊರವಲಯದ ಚನ್ನಪಟ್ಟಣವನ್ನು ಗಳಿಸಿಕೊಳ್ಳುವ ಅಗತ್ಯ ಬಿಟ್ಟರೆ ಯಾವ ಸವಾಲೂ ಇಲ್ಲ. ರಾಜ್ಯ ಸರ್ಕಾರದ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ. ಎರಡಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಪಡೆದುಕೊಂಡು ಕಾಂಗ್ರೆಸ್‌ನ ದೌರ್ಬಲ್ಯವನ್ನೂ ಮತ್ತೆ ಸಾಬೀತುಪಡಿಸಿದರೆ ಅದು ಬಿಜೆಪಿಯ ರಾಜ್ಯ ನಾಯಕತ್ವಕ್ಕೆ ಒಂದು ಬೋನಸ್ ಅಷ್ಟೇ. ಇನ್ನು ಜಾತ್ಯಾತೀತ ಜನತಾದಳಕ್ಕೆ ಕುಮಾರಸ್ವಾಮಿಯವರ ಸ್ಥಾನ ರಾಮನಗರವನ್ನು ಉಳಿಸಿಕೊಂಡು ಚನ್ನಪಟ್ಟಣ ಅಥವಾ ಕೊಳ್ಳೇಗಾಲವನ್ನು ಗಳಿಸಿಕೊಂಡರೆ ಅದೊಂದು ದೊಡ್ಡ ಲಾಭ.

ಈ ಚುನಾವಣೆಗಳಲ್ಲಿ ಬೆಲೆ ಏರಿಕೆ, ಬರಗಾಲ ಸಮಸ್ಯೆಗಳು ರಾಜಕೀಯ ಪಕ್ಷಗಳ ಪ್ರಚಾರದಲ್ಲಿ ಇಣುಕಿದರೂ ಕೂಡ ಸಮಸ್ಯೆಗಳ ಪರಿಹಾರದಲ್ಲಿ ಕೇಂದ್ರ ಸರ್ಕಾರದ ಪಾಲೆಷ್ಟು ರಾಜ್ಯ ಸರ್ಕಾರದ ಪಾಲೆಷ್ಟು? ತಮ್ಮ ಪಾತ್ರವನ್ನು ಆಳುವ ಪಕ್ಷಗಳು ನಿರ್ವಹಿಸಿವೆಯೇ? ಮತ್ತು ರಾಜಕೀಯ ಪಕ್ಷಗಳು ಕೇವಲ ಸಭೆ, ಭರವಸೆ, ಹೇಳಿಕೆಗಳ ಸುರಿಮಳೆ ಸುರಿಸುತ್ತಾ ಹೇಗೆ ಜನರ ಸಂಕಷ್ಟವನ್ನು ಲಾಭಕೋರರು, ಬಂಡವಾಳಶಾಹಿಗಳ ಶೋಷಣೆಯ ಸಾಧನವನ್ನಾಗಿಸಿದ್ದಾರೆ? ಎಂಬ ಬಗ್ಗೆ ಯಾವ ಬೆಳಕು ಚೆಲ್ಲಲಿಲ್ಲ.

ಲೋಕಸಭಾ ಚುನಾವಣೆಯ ನಂತರ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಭೂ ಮಾಫಿಯಾಕ್ಕೆ ಅಪಾರ ಲಾಭ ತಂದುಕೊಡುವ ಭೂ ಸಂಬಂಧಗಳಲ್ಲಿ ಮಾರ್ಪಾಡು ತರುವ ಕೆಲಸಕ್ಕೆ ಕೈ ಹಾಕಿದೆ. ಇದು ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರೈತರ ಮೇಲೆ ಬಹಳ ದೊಡ್ಡ ಪರಿಣಾಮವನ್ನು ಬೀರುತ್ತದೆ. ಇಂತಹ ದುರ್ನೀತಿ ಯಾವ ಪಕ್ಷಕ್ಕೂ ಚುನಾವಣೆ ವಿಷಯವೇ ಆಗಲಿಲ್ಲ ಎಂಬುದು ರಾಜ್ಯದ ಮೂರು ಪ್ರಮುಖ ಪಕ್ಷಗಳ ಭೂಮಾಲಕ-ಬಂಡವಾಳಶಾಹಿ ಸಮಾರೋಪಕ್ಕೆ ಹಾಗೂ ಭೂ ಮಾಫಿಯಾದ ಹಿಡಿತದಲ್ಲಿರುವ ಪಕ್ಷಗಳೇ ಎಂಬುದನ್ನು ಸಾಬೀತುಪಡಿಸಿದೆ.

ಉಪಚುನಾವಣೆಗಳಲ್ಲಿ ವಿವಿಧ ರಾಜಕೀಯ ಪಕ್ಷಗಳ ಲಾಭ ನಷ್ಟದ ಮಾತು ಇದು. ಆದರೆ ಜನತೆಯ ದೃಷ್ಟಿಯಿಂದ ಈ ಚುನಾವಣೆಗಳಿಗೆ ಏನು ಪ್ರಾಮುಖ್ಯತೆ?

- ಬಿಜೆಪಿಯ ಅನೈತಿಕ ರಾಜಕೀಯ-ಆಪರೇಷನ್ ಕಮಲಕ್ಕೆ ಪೆಟ್ಟು ಬೀಳುತ್ತದೆಯೇ?
- ಬಿಜೆಪಿಯ ಯಡ್ಡಿಯೂರಪ್ಪನವರಿಗೆ ಸೋಲುಂಟಾಗಿ ಅವರ ಕೋಮುವಾದಿ ಹಾಗೂ ಜನವಿರೋಧಿ ನೀತಿಗಳಿಗೆ ಹಿನ್ನಡೆಯಾಗುತ್ತದೆಯೇ?
- ಬೆಲೆ ಏರಿಕೆ ಬರಗಾಲ, ಪಡಿತರ ಕಾರ್ಡುಗಳು ಮತ್ತಿತರ ಸಮಸ್ಯೆಗೆ ಮತದಾರರು ತೀವ್ರ ಪ್ರತಿಕ್ರಿಯೆ ನೀಡುತ್ತಾರೆಯೇ? ಬೆಲೆ ಏರಿಕೆಯ ಹೊಣೆಯನ್ನು ಮತದಾರರು ಯಾವ ಪಕ್ಷದ ಮೇಲೆ ಹೊರಿಸುತ್ತಾರೆ.

ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ನೀತಿಗಳು ಅಥವಾ ರಾಜ್ಯದ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳು ಸ್ವಲ್ಪವಾದರೂ ಬದಲಾಗುವ ಸಂದರ್ಭ ಒದಗುತ್ತದೆಯೇ?

ಜನತೆ ಈ ಪ್ರಶ್ನೆಗಳಿಗೆ ಯಾವ ಉತ್ತರ ನೀಡುತ್ತಾರೆ ಎಂಬುದನ್ನು ಕಾದು ನೋಡಬೇಕು.



ಬರ : 'ಒಪ್ಪಿಕೊಂಡ' ಸರ್ಕಾರ

ಬೀದರ್, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ತೀವ್ರ ಆಂದೋಲನಗಳು, ವಿರೋಧ ಪಕ್ಷಗಳ ಹಾಗೂ ಜನರ ಕಟುಟೀಕೆಗಳ ನಂತರ ಕಡೆಗೂ ಸರ್ಕಾರ ಸ್ವಲ್ಪ ಕಣ್ತೆರೆದಿದೆ. ಕರ್ನಾಟಕ ರಾಜ್ಯದ 86 ತಾಲ್ಲೂಕುಗಳ 308 ಹೋಬಳಿಗಳನ್ನು ಬರ ಪೀಡಿತ ಪ್ರದೇಶ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಸರಾಸರಿ ಶೇ.20 ರಷ್ಟು ಮಳೆ ಕೊರತೆ ಎಂದು ಗುರುತಿಸಿರುವ ಸರ್ಕಾರ, ಬರ ಪರಿಹಾರ ಕಾಮಗಾರಿಗಳಿಗಾಗಿ 242 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಪ್ರಕಟಿಸಿದೆ. ಮತ್ತೆ ಬರ ಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ಒಂದು ವಾರದಲ್ಲಿ ನೆರವು ನೀಡುವಂತೆ ಕೇಂದ್ರಸರ್ಕಾರಕ್ಕೆ ಮನವಿ ಸಲ್ಲಿಸಲು ಸಹ ರಾಜ್ಯ ಸರ್ಕಾರ ನೇಮಿಸಿದೆ.

ರಾಜ್ಯದಲ್ಲಿ 72 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆ ನಡೆಯಬೇಕೆಂಬ ಗುರಿ ಇತ್ತು. ಆದರೆ ಇದುವರೆಗೆ 52 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ನಡೆದಿದೆ ಎಂದು ಸರ್ಕಾರ ಗುರುತಿಸಿದೆ. ಇದರಲ್ಲಿ 5,87,705 ಹೆಕ್ಟೇರ್ ಬೆಳೆಯಲು ಒಣ ಹವೆಯಿಂದ ತೊಂದರೆಗೊಳಗಾಗಿದೆಯೆಂದು ಸರ್ಕಾರದ ಅಂಕಿಸಂಖ್ಯೆಗಳು ಹೇಳುತ್ತಿವೆ.

ಪರಿಹಾರ ಪ್ಯಾಕೇಜ್ ಘೋಷಣೆ ಮಾಡುವುದು ಮುಖ್ಯವಲ್ಲ, ಪರಿಹಾರ - ಸಮಸ್ಯೆಯ ತೀವ್ರತೆಗೆ ತಕ್ಕಂತಿರಬೇಕು. ಅದರ ಜೊತೆಗೆ ಪರಿಹಾರ ನಿಜವಾಗಿಯೂ ಜನರನ್ನು ತಲುಪಿಸಬೇಕು. ಕಳೆದು ಕೆಲವು ವರ್ಷಗಳ ಹಿಂದೆ ತೀವ್ರ ಬರಗಾಲದ ಪರಿಸ್ಥಿತಿಯಲ್ಲಿ 'ಕೂಲಿಗಾಗಿ ಕಾಳು' ಯೋಜನೆ ಜಾರಿಯಾಗುವುದರ ನಡುವೆಯೆ ಕುಷ್ಟಗಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ರೈತ ಕುಟುಂಬದ ಆರು ಜನ ಬೆಳೆ ಹಾಳಾಗಿ, ಉದ್ಯೋಗವಿಲ್ಲದೆ, ಕಡೆಗೆ ಆಸ್ಪತ್ರೆಗೆ ತಲುಪಲು ಕಾಸೂ ಇಲ್ಲದೆ ಕಂಗೆಟ್ಟು ಎಲ್ಲರೂ ಕ್ರಿಮಿನಾಶಕ ಕುಡಿದು ಸಾವಿಗೆ ಶರಣಾದ ದಾರುಣ ಘಟನೆ ಘಟಿಸಿತ್ತು. ಇಂತಹ ದುರಂತಗಳು ಮರುಕಳಿಸದಂತೆ ಎಚ್ಚರ ವಹಿಸಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿದೆ. ದೇಶವ್ಯಾಪಿ ಸಮಸ್ಯೆಯ ಆಗಾಧತೆಗೆ ತಕ್ಕಂತೆ ಕೇಂದ್ರ ಸರ್ಕಾರವೂ ತುರ್ತಾಗಿ ಸ್ಪಂದಿಸಬೇಕಿದೆ. ○

ಆದಾಯ ಕುಸಿಯುತ್ತಿದೆ, ಬೆಲೆ ಏರ್ತಾ ಇದೆ...

ಜನವಾದಿ ಮಹಿಳಾ ಸಂಘಟನೆಯ ಜಾಥಾ ವರದಿ

ಒಂದೆಡೆ ಏರುತ್ತಿರುವ ಬೆಲೆಗಳು, ಮತ್ತೊಂದೆಡೆ ಕಣ್ಣುಮುಚ್ಚಿ ಕುಳಿತ ರಾಜ್ಯ - ಕೇಂದ್ರ ಸರ್ಕಾರಗಳ ಧೋರಣೆ. ಆದಾಯ ಕುಸಿಯುತ್ತಿದೆ. ಕೂಲಿ ಕಡಿತ ಆದರೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಪೆಟ್ರೋಲ್ -ಡಿಸೇಲ್ ಬೆಲೆ ಏರಿಕೆ, ನೀರಿನ, ಹಾಲಿನ ದರ ಏರಿಕೆ, ತರಕಾರಿ ಹಣ್ಣು, ಟೀ, ಕಾಫಿ, ಪೌಡರ್‌ಗಳ ಬೆಲೆ ಗಗನಕ್ಕೆ ಜನ ಸಾಮಾನ್ಯರ ಬದುಕು ದುರ್ಬರ.

ಹಿಂದೆಂದೂ ಇಲ್ಲದ ಬೆಲೆ ಏರಿಕೆ ಜನತೆಗೆ ಬಿಸಿಯಾದರೆ, ಬಿಸಿ ಮುಟ್ಟಿಸುವವರಿಗೆ ಸಂಭ್ರಮವೋ ಸಂಭ್ರಮ. ಬೆಲೆ ಏರಿಕೆ ಬಗೆಗೆ ಜುಲೈ 30, 2009 ರಂದು ಜನ ಜಾಗೃತಿ ಜಾಥಾ ಉದ್ಘಾಟನೆ ಬೆಂಗಳೂರಿನ ಸಿಟಿ ಮಾರುಕಟ್ಟೆ ಬಳಿ ಇರುವ 'ಅಪ್ಸರ ಥಿಯೇಟರ್' ಮುಂದೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ. ಈ ವಿಶಿಷ್ಟ ಜಾಥಾಕ್ಕೆ ಮಾತಿನ ಭಾಷ್ಯ ಬರೆದವರು ಜನವಾದಿಯ ರಾಜ್ಯ ಉಪಾಧ್ಯಕ್ಷೆ ಎಸ್.ವರಲಕ್ಷ್ಮಿ ಯುವಜನ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಭರತ್‌ರಾಜ್, ಜನವಾದಿಯ ರಾಜ್ಯ ಸಹ ಕಾರ್ಯದರ್ಶಿ ಸಿ.ಕುಮಾರಿ, ಕೃಷಿ ಕೂಲಿಕಾರ ಸಂಘಟನೆಯ ಮುಖಂಡರಾದ ಶ್ರೀನಿವಾಸ್, ಜನವಾದಿಯ ಜಿಲ್ಲಾ ಕಾರ್ಯದರ್ಶಿ ಗೌರಮ್ಮ, ಸಹ ಕಾರ್ಯದರ್ಶಿ ಸುಬ್ಬಲಕ್ಷ್ಮಿ ಇನ್ನೂ ಹಲವರು.

ಜನಸಾಮಾನ್ಯರಿಗೆ ಅಂಬಲಿಯನ್ನು ವಿತರಿಸುವುದರ ಮೂಲಕ ಉದ್ಘಾಟನಾ ಸಮಾರಂಭವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ಆಗಸ್ಟ್ ಒಂದರಿಂದ 6ನೇ ತಾರೀಖಿನವರೆಗೆ ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಜನ ಜಾಗೃತಿ ಜಾಥಾ ಸಂಚರಿಸಿತು. ಜಾಥಾದ ಸಂದರ್ಭದಲ್ಲಿ ಜನರ ತೀವ್ರ ಅಸಮಾಧಾನ, ಆಕ್ರೋಶ, ಕೋಪತಾಪಗಳು ವ್ಯಕ್ತವಾದವು. ಅವುಗಳ ಕೆಲವು ತುಣುಕುಗಳು ಹೀಗಿವೆ.

ಜನ ಹೇಳಿದ್ದು

"ಜನರ ಹಣದಿಂದ ಐಷಾರಾಮಿ ಜೀವನ ನಡೆಸುವ ಶಾಸಕರಿಗೆ, ಸಚಿವರಿಗೆ ಜನರ ನೋವು



ಸಂಕಟ ಮುಟ್ಟುವುದೇ ಇಲ್ಲ. 12 ಲಕ್ಷ ಖರ್ಚು ಮಾಡಿ ಶೌಚಾಲಯ ಕಟ್ಟಿಸಿಕೊಳ್ಳುವವರು ಒಬ್ಬರಾದರೆ, 32 ಲಕ್ಷದಲ್ಲಿ ಬ ಮನೆ ರಿಪೇರಿ ಮಾಡಿಸಿಕೊಳ್ಳುವ ಮುಖ್ಯಮಂತ್ರಿ. ರಾಜ್ಯಕ್ಕೆ ನೀರಿಲ್ಲ, ಶೌಚಾಲಯ ಇಲ್ಲ, ರೇಷನ್ ಕಾರ್ಡ್ ಇಲ್ಲ, ಮನೆ ಇಲ್ಲ ಕೊಡಿ ಅಂದ್ರೆ ಬೆಲೆ ಏರಿಸಿ ಜನರಿಗೆ ಬೆಲೆ ಏರಿಕೆ ಬಿಸಿ ಮುಟ್ಟಿಸುತ್ತಾರೆ"

- ನಾಗರೀಕರೊಬ್ಬರ ನೋವು

ಯಡಿಯೂರಪ್ಪ ಬಡವರನ್ನ ಸಾಯಿಸ್ತಾನೆ

- 'ನಾವು ಬಡವರು ತಾಯಿ, ಒಂದೊತ್ತಿಗಿದ್ದರೆ, ಒಂದೊತ್ತಿಗಿಲ್ಲ. ಹಿಂಗೆ ಬೆಲೆ ಏರಿಸಿದ್ರೆ, ಹೇಗ್ ಬದುಕೋದು'.

- ಮಹಿಳೆಯೊಬ್ಬರ ದುಗುಡ

- "ನನಗೆ ಗಂಡ ಇಲ್ಲ, ತಾಯಿ, 3 ಮಕ್ಕಳು, ಈ ಪಾಟಿ ಬೆಲೆ ಏರಿದ್ರೆ ಏನುಗತಿ, ನಾವು ಜೀವನ ಮಾಡೋದಾದ್ರು ಹೇಗೆ"

- ದಿಲ್‌ಶಾದ್

- "ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡ್ತೀನಿ, 3500 ಸಂಬಳ, ಬಾಡಿಗೆ ಮನೆ, ಬರುವ ಸಂಬಳದಲ್ಲಿ ಬಾಡಿಗೆ ಕಟ್ಟೋದಾ, ಹೊಟ್ಟೆಗೆ ತಿನ್ನೋದಾ"

- ಶಶಿಕಲಾ

- "ಶಾಸಕರಿಗೆ ಸಂಬಳ ಜಾಸ್ತಿ ಮಾಡ್ತಾರೆ, ಬಡಜನರಿಗೆ ಕೂಲಿ ಇಲ್ಲ, ಅದರ ಬಗ್ಗೆ ಹೇಳಿ, ಚೆನ್ನಾಗಿ ಉಗೀರಿ ಮೇಡಂ"

- ನಾಗರೀಕರೊಬ್ಬರು

- "ಇಷ್ಟು ವರ್ಷ ಆಡಳಿತ ಮಾಡಿದ ಯಾವ ಸರ್ಕಾರನೂ ಇಷ್ಟೊಂದು ಬೆಲೆ ಏರಿಸಿಲ್ಲ. ಬಿಜೆಪಿ ಸರ್ಕಾರ ಬಂದಿದ್ದೋ ಬಂದಿದ್ದು, ಬೆಲೆ ಏರಿಕೆ ವಿಪರೀತ ಆಗಿದೆ"

- ಮತ್ತೊಬ್ಬ ನಾಗರೀಕರು

- "ಇಷ್ಟೊಂದು ಬೆಲೆ ಏರಿಕೆ ಆಗ್ತಿದೆಯಲ್ಲ, ಯಾರಾರೂ ಕೇಳೋವ್ರಿಲ್ಲವಲ್ಲ ಅಂತ ಚಡಪಡಿಸ್ತಿದ್ದೀವಿ. ನೀವು ಹೋರಾಟ ಮಾಡ್ತಿದ್ದೀರಾ ಬಹಳ ಥ್ಯಾಂಕ್ಸ್ ಮೇಡಂ ನಿಮಗೆ ನಾವು ನಿಮ್ಮ ಜೊತೆ ಬರ್ತಿವಿ"

- ಹಿರಿಯರೊಬ

- "ಗಂಡಸರ್‍ಯಾರೂ ಬೆಲೆ ಏರಿಕೆ ವಿ ಹೋರಾಟ ಮಾಡ್ತಿಲ್ಲ. ಈ ಹೆಣ್ಣು ಮ ಮಾಡ್ತಾವ್ರೆ ನೋಡಿ. ಮಾಡಿ ತಾಯಿ, ದೇ ನಿಮಗೆ ಒಳ್ಳೇದು ಮಾಡ್ಲಿ"

- ವಯೋವೃದ್ಧರೊಬ

- "ಎಫ್‌ಸಿಐ ಗೋದಾಮಕ್ಕೆ ಮುತ್ತಿಗೆ ಹ ನಾವು ನಿಮ್ಮ ಜೊತೆ ಬರ್ತಿವಿ".

ಒಟ್ಟು ಜಾಥಾಗೆ ಸಿಕ್ಕ ಸ್ಪಂದನ ಇದು. ಏರಿಕೆಯಿಂದಾಗಿ ಜನರಲ್ಲಿ ಆಕ್ರೋಶ ಇದೆ. ಅ ಸ್ಪಂದಿಸಿದರೆ ಪುಟಿದೇಳುತ್ತದೆ ಜನ ಚಳು ಮಹಿಳೆಯರೇ ನಡೆಸಿದ ಈ ಜನ ಜಾಗೃತಿ ಜಾ ಮಹಿಳಾ ಕಾರ್ಯಕರ್ತರಿಗೆ ಒಂದು ಹೊಸ ಅನು ನೀಡಿದೆ. ಇದು ಇಲ್ಲಿಗೆ ನಿಲ್ಲುವುದಿ ಮುಂದುರೆಯುತ್ತದೆ.

ಕೆ.ಎಸ್.ಶಾರ

ಜನ ದುಡ್ಡು ಕೊಟ್ಟರು

ಜಾಥಾವು ಬೆಂಗಳೂರು ನಗರದ ವಿ ಬಡಾವಣೆಗಳಲ್ಲಿ ಸಂಚರಿಸಿ ಸುಮಾರು 60 ಕ ಹೆಚ್ಚು ಬೀದಿ ಬದಿ ಸಭೆಗಳನ್ನು ನಡೆಸಿತು. ಜ ಸ್ಪಂದನ ಉತ್ತಮವಾಗಿತ್ತು. ಸಾರ್ವಜನಿಕರಿ ಹೋರಾಟಕ್ಕೆ ನಿಧಿ ಸಂಗ್ರಹಿಸಲಾಯಿತ ಬಡವರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಕೊಟ್ಟ 5,10, ರೂ.ಗ ಮೂಲಕ 3050 ರೂಪಾಯಿ ಹ ಸಂಗ್ರಹಿಸಲಾಯಿತು.

ಜಾಥಾವು ನಗರ ಕೇಂದ್ರವಾದ ಸಿ ಮಾರುಕಟ್ಟೆ ಶಿವಾಜಿನಗರ, ಕೆ.ಆರ್.ಪುರ ಮಹದೇವಪುರ ಸುತ್ತಮುತ್ತ, ಕೆಂಗೇ ರಾಜರಾಜೇಶ್ವರಿ ನಗರದ ಸುತ್ತಮುತ್ತ ಜಯನಗರ, ಬನಶಂಕರಿ ಸುತ್ತಮುತ್ತ ಮಡಿವಾಳ, ಬೊಮ್ಮನಹಳ್ಳಿ ಸುತ್ತಮುತ್ತ, ಪೀ ದಾಸರಹಳ್ಳಿ ಸುತ್ತಮುತ್ತ, ಆರ್.ಟಿ.ನಗ ಮತ್ತಿತರ ಕಡೆ ಸಂಚರಿಸಿತು.

'ಮಂತ್ರಿಗಳಾಡುವ ಮಾತುಗಳೆಲ್ಲ ಒಂದೂ ನಿಜವಲ್ಲ....'

ಕ್ಯಾತೆ

ಶ್ರೀ

"ಏನಯ್ಯ, ಕ(ವಿ)ಪಿ ಶ್ರೇಷ್ಠ, ಏನೋ ಕೆತ್ತುತ್ತಿದ್ದೀಯಲ್ಲ" ಎಂದು ಕ್ಯಾತೆ ಕುವರ ಕೇಳಿದ.

"ನೋಡಪ್ಪ ಇಂಥ ಮಹಾನ್ ಸರಕಾರ ಹಿಂದೆ ಬಂದಿಲ್ಲ ಮುಂದೆ ಬರೋದಿಲ್ಲ. ಇಂಥ ಅದ್ಭುತ ಯೋಚನೆಗಳು ನಮ್ಮ ಸನ್ಮಾನ್ಯ ಮು.ಮಂ.ಗಳಿಗಲ್ಲದೆ ಬೇರೆ ಯಾರಿಗೂ ಹೊಳೆಯೊಲ್ಲ," ಎಂದ ಕ(ವಿ)ಪಿ ಶ್ರೇಷ್ಠ.

"ನೀನು ನಿನ್ನ ಅರ್ಥವಾಗದ ಕವಿತೆಯ ಹಾಗೇ ಮಾತಾಡ್ತಿದಿಯಲ್ಲ, ಸ್ವಲ್ಪ ನಮಗೆ ಅರ್ಥವಾಗೋ ಗದ್ಯದಲ್ಲಿ ಹೇಳಯ್ಯ!"

"ನಿನಗೆ ವಿಚಾರ ಗೊತ್ತಿಲ್ಲವೇನೋ. ರೈತರಿಗಾಗಿ ನಮ್ಮ ಘನ ಸರಕಾರ 'ರೈತ ಗೀತೆ' ಮಾಡಿದೆಯಂತೆ.

"ಅದೆಂತಾ ಗೀತೇನೋ?"

"ಬೀಜವು ಇಲ್ಲದೆ, ಗೊಬ್ಬರವಿಲ್ಲದೆ,
ಅಳುವಾ ರೈತನ ನೋಡಲ್ಲೀ.....,
ಮಳೆಯೂ ಬಾರದೆ, ಬೆಳೆಯೂ ಇಲ್ಲದೆ,
ಅಳುವಾ ರೈತನ ನೋಡಲ್ಲೀ.....,
ಬೆಲೆಯೂ ಇಲ್ಲದೆ ಸಾಲವೂ ತೀರದೆ,
ನರಳುವಾ ರೈತನ ನೋಡಲ್ಲೀ.....,

ಅಂತ ಏನೇನೋ ಹೇಳ್ತಿದ್ರಪ್ಪ.

"ಥೂ, ಥೂ.., ಥೂ, ಸುಮ್ನಿರಪ್ಪ. ಅದು ರಾಷ್ಟ್ರಕವಿ ಕುವೆಂಪು ಅವರ ಗೀತೆ "ಉಳುವಾ ಯೋಗಿಯ ನೋಡಲ್ಲಿ" ಅಂತ. ಅದನ್ನ ಏನೇನೋ ಅಪಭ್ರಂಶ ಮಾಡಬೇಡ."

"ಅದಿರಲಿ, ಹೀಗೆ ರೈತರಿಗೋಸ್ಕರ ಗೀತೆ ಮಾಡಿದ ಸರಕಾರ ಇನ್ನು ಮುಂದೆ ಕಾರ್ಮಿಕರು, ವ್ಯಾಪಾರಿಗಳು, ಉದ್ಯಮಿಗಳು, ಆಟೋ ಚಾಲಕರು, ರಾಜಕಾರಣಿಗಳು, ಹೀಗೇ ವಿವಿಧ ಕ್ಷೇತ್ರಗಳಿಗೋಸ್ಕರ ಗೀತೆಗಳನ್ನು ಆರಂಭಿಸಬಹುದು. ಅದಕ್ಕೆ ನಾನು ವಿವಿಧ ಕ್ಷೇತ್ರಗಳ ಬಗ್ಗೆ ಪದ್ಯ ಬರೆಯುತ್ತಿದ್ದೇನೆ" ಎಂದ ಕ(ವಿ)ಪಿ ಶ್ರೇಷ್ಠ.

'ಓಹೋ ಬಹಳ ಒಳ್ಳೆಯ ಯೋಚನೆ, ಎಲ್ಲಿ ಒಂದೆರಡು ಕವಿತೆಗಳನ್ನು ವಗಿ ನೋಡೋಣ"

"ನಮ್ಮ ಮು.ಮಂ ಗಳ ಸಿಸ್ಯ ಅಥವಾ ಪರಮ ಭಕ್ತ ಕೃಷ್ಣಯ್ಯ ಸೆಟ್ಟರಂಥ ವ್ಯಾಪಾರಿಗಳಿಗಾಗಿ ಬರೆದಿರುವ ಗೀತೆ ಕೇಳು:

"ಟೋಪಿಯನ್ನಾದರು ಹಾಕು,
ನಾಮವನ್ನಾದರು ಹಾಕು,
ಎಂದೆದಿಗೂ ನೀ ವ್ಯಾಪಾರಿಯಾಗಿರು.
ಟೋಪಿಯೊಂದೇ ಸತ್ಯ....,
ನಾಮವೊಂದೇ ಸತ್ಯ."

"ಇದಕ್ಕೂ ಕುವೆಂಪು ಹಾಡನ್ನೇ ಹಾಳುಗೆಡವಿದ್ದಿಯಲ್ಲೋ ಪಾಪಿ! ಬೇರೆ ಏನೂ ಸಿಗಲಿಲ್ಲವ ನಿನಗೆ?"

"ಯಾಕಿಲ್ಲ? ಈ ಲೋಕಾಯುಕ್ತ ಗೀತೆ ಕೇಳು:

"ಅಪಾರ ಲಂಚ, ವಂಚನೆಯ ಭವ್ಯ ನಾಡಿದು.
ಭ್ರಷ್ಟಾಚಾರ ತುಂಬಿ ತುಳುಕೋ ದಿವ್ಯ ಬೀಡಿದು."

"ಓಹೋ, ಇಷ್ಟೇನೋ ಇನ್ನೂ ಇದೆಯೋ?"

"ಇದೆ ಇದೆ. ಇನ್ನೂ ಇದೆ. ವಿಧಾನ ಸಭೆ ಗ ಬರೆದಿದ್ದೀನಿ ಕೇಳು:

"ಶಾಸಕರೆಲ್ಲ ಜಾಣರಲ್ಲ.
ಜನಗಳು ಎಂದೂ ಕೋಣರಲ್ಲ.
ಮಂತ್ರಿಗಳಾಡುವ ಮಾತುಗಳೆಲ್ಲ
ಒಂದು ನಿಜವಲ್ಲ.
ಗೆಳೆಯ ಒಂದೂ ನಿಜವಲ್ಲ."

"ವಾ, ವಾ..., ಚನ್ನಾಗಿದೆ. ಆಮೇಲೆ?"

"ಈ ಗಣಿ ಗೀತೆ ಕೇಳು:

"ಅರೆರೆರೆ ಗಣೀ ರಾಮ.
ಹೇ, ಪಂಚರಂಗೀ ರಾಮ.
- ಚೆಲ್ಲಾಡೋ ನಿನ್ನ ದುಡ್ಡು ರಾಮ..,
ಬಾಚ್ಕೋಳೋ ಎಲ್ಲ ದುಡ್ಡು ರಾಮ."

"ಹೀಗೇ ಬರೀತಾ ಕೂತಿದ್ರೆ ಆಗಲ್ಲ, ಬೇ ಮು.ಮಂ ಗಳ ಬಳಿಗೆ ಹೋಗು. ಅವರು ಆಸ್ಥಾ ಕವಿಗಳನ್ನು, ಹಾಡುಗಾರರನ್ನೂ ಸೇರಿಸಿಕೊಳ್ತಾರಂ ಅಲ್ಲಾಗಲೇ ದೊಡ್ಡ ಕ್ಯೂ ಇದೆಯಂತೆ.

ವಿಶ್ವದ ಚರಿತ್ರೆ ಕಲಿಸುವ ಪಾಠ


ಸ್ವಾತಂತ್ರ್ಯ: ಜನತೆಯ ನಿರಂತರ ಎಚ್ಚರ ಸಂಘರ್ಷವೇ ಸಂರಕ್ಷೆ

ಜಿ.ಎನ್.ನಾಗರಾಜ್

'ಸ್ವಾತಂತ್ರ್ಯ, ನಮ್ಮ ಸ್ವಾತಂತ್ರ್ಯ, ನಿನಗೆ ಅರವತ್ತೆರಡು ತುಂಬಿದೆಯಮ್ಮ ಸ್ವಾತಂತ್ರ್ಯ' ಇದು ನಮ್ಮ ಚಳುವಳಿಕಾರರಿಗೆ ಚೆನ್ನಾಗಿ ಗೊತ್ತಿರುವ ಹಾಡು. ಆಗಸ್ಟ್ 15 ರಂದು ಇಡೀ ದೇಶವೇ ಸ್ವಾತಂತ್ರ್ಯ ದಿನಾಚರಣೆಯಂದು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತದೆ. ನಾವು ಸ್ವಾತಂತ್ರ್ಯ ವನ್ನು 1947ರ ಆಗಸ್ಟ್ 15 ರಂದು ಗಳಿಸಿದ್ದೇವೆ. ಆ ಸ್ವಾತಂತ್ರ್ಯ ನಿರಂತರ, ಶಾಶ್ವತ ಎಂಬ ...ಯಲ್ಲಿ ದೇಶವೆಲ್ಲಾ ತೇಲಾಡುತ್ತದೆ. ಸ್ವಾತಂತ್ರ್ಯವೆಂಬುದನ್ನು ಕೇವಲ ನಮ್ಮ ದೇಶಕ್ಕೆ ಮಾತ್ರ ಸಂಬಂಧಿಸಿದ್ದು, ನಮಗೆ ಮಾತ್ರ ಸೀಮಿತವಾದದ್ದು ಎಂದಷ್ಟೇ ನೋಡಿದರೆ ಹಾಗೆಯೇ ಕಾಣುತ್ತದೆ. ಸ್ವಾತಂತ್ರ್ಯವೆಂಬುದು ಕೇವಲ ನಮ್ಮನ್ನು ನಾವೇ ಆಳಿಕೊಳ್ಳುವುದು ಎಂದು ಮಾತ್ರ ಅರ್ಥವಲ್ಲ ಅದರೊಂದಿಗೆ ಅನೇಕ ಆಶಯಗಳು ಬೆಸೆದುಕೊಂಡಿವೆ.

ಸ್ವಾತಂತ್ರ್ಯವೆಂದರೆ ವಸಾಹತುಶಾಹಿಯಿಂದ ಬಿಡುಗಡೆ

ಸ್ವಾತಂತ್ರ್ಯವೆಂದ ಕೂಡಲೇ ಅದು ಭಾರತ ದೇಶದ ಜನತೆ ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಪಡೆದಿದ್ದು ಎಂದು ಎಲ್ಲರಿಗೂ ಗೊತ್ತಿರುವ ಸಂಗತಿ. ಬ್ರಿಟಿಷರು ಭಾರತವನ್ನು ಮಾತ್ರ ಆಳುತ್ತಿರಲಿಲ್ಲ. 'ಸೂರ್ಯ ಮುಳುಗಿದ ಸಾಮ್ರಾಜ್ಯ' ವೆಂದು ಹೆಸರು ಪಡೆದ ಬ್ರಿಟಿಷರ ಆಳ್ವಿಕೆಗೆ ಏಷ್ಯಾ ಆಫ್ರಿಕಾ ಮತ್ತು ಅಮೇರಿಕಾ ಖಂಡದ ಅನೇಕ ದೇಶಗಳು, ಪ್ರದೇಶಗಳು ಸೇರಿದ್ದವು. ಭಾರತವನ್ನು ಕೇವಲ ಬ್ರಿಟಿಷರು ಮಾತ್ರ ಆಳುತ್ತಿರಲಿಲ್ಲ,



ಸ್ವಾತಂತ್ರ್ಯ ಕಸಿಯಬಯಸುವ ಸಾಮ್ರಾಜ್ಯಶಾಹಿ ಶಕ್ತಿಗಳ ದೈತ್ಯ ಬಲ

...ಚರು, ಪೋರ್ಚುಗೀಸರು ಭಾರತವನ್ನು ವಿಶ್ವದ ...ಕ ದೇಶಗಳನ್ನು ಆಳುತ್ತಿದ್ದರು. ಹೀಗೆ ಬ್ರಿಟಿಷರು ...ಚರು, ಬ್ರಿಟಿಷರು, ಡಚ್ಚರು, ಇಟಲಿ, ಜರ್ಮನಿ, ...ನ್, ಅಮೇರಿಕಾಗಳು ಜಗತ್ತಿನ ಶೇ.95-96 ...ವನ್ನು ವಶಪಡಿಸಿಕೊಂಡು ಆಳುತ್ತಿದ್ದರು. ಈ ...ತಿ ಬಂಡವಾಳಶಾಹಿಗಳು ಜಗತ್ತನ್ನೆಲ್ಲಾ ...ಮಿಸಿಕೊಂಡು ಶೋಷಿಸುತ್ತಿದ್ದ ವಸಾಹತು ಶಾಹಿ ಶೋಷಣೆಯಿಂದ ಈ ಎಲ್ಲಾ ದೇಶಗಳ ಜನತೆ ನಲುಗಿ ಹೋಗಿದ್ದಾರೆ. ನಮ್ಮ ದೇಶಗಳಿಂದ ಕಚ್ಚಾವಸ್ತುಗಳನ್ನು-ಖನಿಜ ಸಂಪತ್ತು, ಅರಣ್ಯ ಸಂಪತ್ತು, ಕೃಷಿ ಫಸಲು ಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಅಗ್ಗವಾಗಿ ಬಲವಂತದಿಂದ ಕೊಂಡೊಯ್ಯುವ ಮೂಲಕ ಜನತೆಯನ್ನು ಬಡತನ, ಹಸಿವೆ, ನಿರುದ್ಯೋಗಗಳ ದವಡೆಗೆ ನೂಕಿದ್ದರು. ಈ ಶೋಷಣೆಯ ವಿರುದ್ಧ ತಿರುಗಿಬಿದ್ದು ವಸಾಹತುಶಾಹಿಗಳಿಂದ ಬಿಡುಗಡೆ ಪಡೆಯುವ ಸ್ವಾತಂತ್ರ್ಯ ಎಂಬ ಪ್ರಕ್ರಿಯೆ ಭಾರತದಲ್ಲಿ ಮಾತ್ರವೇ ಅಲ್ಲದೇ ವಿಶ್ವದ ಉದ್ದಗಲಕ್ಕೂ ನಡೆಯಿತು. ದಕ್ಷಿಣ ಅಮೇರಿಕಾದಲ್ಲಿ ಈ ಕ್ರಿಯೆ ಸ್ವಲ್ಪ ಮೊದಲಾಗಿ ಆರಂಭವಾದರೂ ಜಗತ್ತಿನ ಬಹುಭಾಗದಲ್ಲಿ 1945ರಿಂದ ಆರಂಭವಾಗಿ 1965 ರವರೆಗೂ ಎರಡು ದಶಕಗಳ ಕಾಲ ಮುಂದುವರೆಯಿತು. ಈ ಎಲ್ಲಾ ದೇಶಗಳ ಸ್ವಾತಂತ್ರ್ಯದ ಭಾಗವಾಗಿಯೇ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. **ಹೀಗೆ ಸ್ವಾತಂತ್ರ್ಯವೆಂಬುದು ಜಾಗತಿಕ ಪ್ರಕ್ರಿಯೆ. ಜಗತ್ತಿನ ಇತಿಹಾಸದ ಚಲನೆಯ ಭಾಗವಾಗಿ ದೊರೆತ ಸಂಭ್ರಮ.**

ವಿವಿಧ ದೇಶಗಳ ಸ್ವಾತಂತ್ರ್ಯಕ್ಕೆ ಏನಾಗಿದೆ?

ಹೀಗೆ ವಿಶ್ವದ ಅನೇಕ ದೇಶಗಳ ಜನತೆಯ ವಿವಿಧವಾದ, ವಿಧ ವಿಧವಾದ ಹೋರಾಟದ ಫಲವಾಗಿ ಆಯಾ ದೇಶಗಳು ಪಡೆದ ಸ್ವಾತಂತ್ರ್ಯ ಇಂದು ಏನಾಗಿದೆ, ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಭಾರತದ ಜನತೆ ತಿಳಿದುಕೊಳ್ಳಬೇಕಾಗಿದೆ. ನಮ್ಮ ಜೊತೆ ಜೊತೆಗೆ ಸ್ವಾತಂತ್ರ್ಯ ಪಡೆದ ನಮ್ಮ ನೆರೆಹೊರೆಯ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಇಂಡೋನೇಷ್ಯಾ ಇತ್ಯಾದಿ ಏಷ್ಯಾದ ದೇಶಗಳು ಆಫ್ರಿಕಾ, ದಕ್ಷಿಣ ಅಮೇರಿಕಾದ ದೇಶಗಳ ಜನತೆಯ ಬಗ್ಗೆ ಯೋಚಿಸಬೇಕಾಗಿದೆ.

ಹೊಸದಾಗಿ ಸ್ವಾತಂತ್ರ್ಯ ಪಡೆದ ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವ ನಾಶವಾಗಿ ಸರ್ವಾಧಿಕಾರಗಳು ನೆಲೆಗೊಂಡಿವೆ ಅಥವಾ ದೀರ್ಘಕಾಲ ಸರ್ವಾಧಿಕಾರಿಗಳ ಹಿಡಿತದಲ್ಲಿ ನರಳಿವೆ. ಈ ಸರ್ವಾಧಿಕಾರಿಗಳ ಹಿಂದೆ ಆಯಾ ರಾಷ್ಟ್ರದ ಚುನಾಯಿತ ಸರ್ಕಾರಗಳನ್ನು ಮಿಲಿಟರಿ ದಂಗೆಗಳ ಮೂಲಕ ಕಿತ್ತು ಹಾಕಲಾಗಿದೆ. (ಇತ್ತೀಚೆಗೆ ತಾನೇ ಹಾಂಡುರಾಸ್ ದೇಶದ ಚುನಾಯಿತ ಅಧ್ಯಕ್ಷನನ್ನು ಮಿಲಿಟರಿ ದಂಗೆಯ ಮೂಲಕ ಕಿತ್ತು ಹಾಕಲಾಗಿದೆ.) ಅಧ್ಯಕ್ಷ ಅಥವಾ ಪ್ರಧಾನಿಗಳನ್ನು ಕೊಲ್ಲಿಸಿ ಮಿಲಿಟರಿ ಆಡಳಿತಗಳನ್ನು ಹೇರಲಾಗಿದೆ. ಕೆಲವು ದೇಶಗಳನ್ನು ಯುಗೋಸ್ಲಾವಿಯಾದ ರೀತಿ ಚಿದ್ರ-ವಿಚ್ಛಿದ್ರಗೊಳಿಸಿ ನಾಲ್ಕಾರು ತುಂಡುಗಳನ್ನಾಗಿ ಮಾಡಲಾಗಿದೆ. ಇಂತಹ ಸರ್ವಾಧಿಕಾರಿಗಳ,



ವಿಯಟ್ನಾಂ ದೇಶದ ಮೇಲೆ ನೇರ ನಗ್ನ ಆಕ್ರಮಣ ನಡೆಸಿದ ಅಮೆರಿಕ ಸೈನ್ಯ

ಮಿಲಿಟರಿ ದಂಗೆಗಳ ಹಿಂದೆ ಹಿಂದಿನ ವಸಾಹತುಶಾಹಿ ದೇಶಗಳ ಜಾಗವನ್ನು ಆಕ್ರಮಿಸಿರುವ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳ ಕೂಟದ ಕೈ ಇದೆ. ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳು ಅಭಿವೃದ್ಧಿ ಶೀಲ ದೇಶಗಳಿಗೆ ನೆರವುಗಳನ್ನು ನೀಡುವುದು. ಆಯಾ ದೇಶಗಳ ಒಳಗೆ ವಿಚ್ಛಿದ್ರಕಾರಿ ಚಳುವಳಿಗಳನ್ನು ಬೆಳೆಸುವುದು. ಮಿಲಿಟರಿ ನೆರವು ನೀಡುವುದು, ಅಮೆರಿಕಾ ಮತ್ತು ಅಭಿವೃದ್ಧಿಶೀಲ ದೇಶಗಳ ಮಿಲಿಟರಿ ದಂಡನಾಯಕರು, ಬೇಹುಗಾರ ಸಂಸ್ಥೆಗಳು, ಅಧಿಕಾರಿಗಳು ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಪತ್ರಿಕೆ-ಮಾಧ್ಯಮಗಳು ಇವುಗಳ ನಡುವೆ ಹೆಚ್ಚು ಹೆಚ್ಚು ಸಂಪರ್ಕ, ಹತ್ತಿರದ ಸಂಬಂಧಗಳನ್ನು ಏರ್ಪಡಿಸುವುದು ಇಂತಹ ಕ್ರಮಗಳಿಂದ ಈ ಮಿಲಿಟರಿ ದಂಗೆಗಳಿಗೆ ಸರ್ವಾಧಿಕಾರಿಗಳಿಗೆ ರಂಗವನ್ನು ಸಜ್ಜುಗೊಳಿಸುವುದು ಇದು ಪ್ರಮುಖ ವಿಧಾನ. 1950ರ ದಶಕ ಇರಾನ್‌ನಿಂದ ಆರಂಭಿಸಿ ಇತ್ತೀಚಿನ ಹಾಂಡುರಾಸ್‌ವರೆಗೆ 80ಕ್ಕೂ ಹೆಚ್ಚು ದೇಶಗಳಲ್ಲಿ ಇಂತಹ ಕ್ರೌರ್ಯ, ಕೊಲೆ, ದಮನಗಳ ರಕ್ತ ಪಿಪಾಸು ಮಾರ್ಗವನ್ನು ಬಳಸಿ ಪ್ರಜಾಪ್ರಭುತ್ವವನ್ನು ಪಲ್ಲಟಗೊಳಿಸಲಾಗಿದೆ. ಸರ್ವಾಧಿಕಾರಿ ಆಡಳಿತಗಳ ಮೂಲಕ ಸ್ವಾತಂತ್ರ್ಯವನ್ನು ವಿವಿಧ ಪ್ರಮಾಣದಲ್ಲಿ ಪಲ್ಲಟಗೊಳಿಸಲಾಗಿದೆ.

ಜೊತೆಗೆ ಅಮೇರಿಕಾ ತಾನೇ ಅಥವಾ ಇತರ

ಪುಟ 6 ಕ್ಕೆ

ಅಮೇರಿಕಾ-ಭಾರತ ನಡುವಣ ಮಿಲಿಟರಿ ಮೈತ್ರಿ

ಇಂದಿನ ಸಂದರ್ಭದಲ್ಲಿ 2005 ಆಗಸ್ಟ್‌ನಲ್ಲಿ ಮನಮೋಹನ್‌ಸಿಂಗ್ ಮತ್ತು ಭಾರತದ ನಡುವಣ ಮಿಲಿಟರಿ ಮೈತ್ರಿಯ ಒಪ್ಪಂದವನ್ನು ಈ ಜಾಗತಿಕ ಹಾಗೂ ಭಾರತದ ಘಟನೆಗಳ ಹಿನ್ನೆಲೆಯಲ್ಲಿ ನೋಡಿದರೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಒದಗಿರುವ ಅಪಾಯ ಪ್ರಮಾಣದ ಅರಿವಾಗುತ್ತದೆ.

ಭಾರತಕ್ಕೆ ಮೊದಲಬಾರಿಗೆ ಬೃಹತ್ ಪ್ರಮಾಣದಲ್ಲಿ ಉನ್ನತ ಮಿಲಿಟರಿ ತಂತ್ರಜ್ಞಾನದ ಉಪಕರಣ ಹಾಗೂ ಶಸ್ತ್ರಾಸ್ತ್ರಗಳು ಅವುಗಳ ನೆಪದಲ್ಲಿ ಭಾರತದ ಮಿಲಿಟರಿ ನೆಲೆಗಳು, ಸ್ಥಾವರಗಳಿಗೆ ನೇರವಾಗಿ ಪ್ರವೇಶಿಸಿ ತನಿಖೆ ಮಾಡುವ ಆ ಮೂಲಕ ಭಾರತದ ಮಿಲಿಟರಿ ರಹಸ್ಯಗಳನ್ನು ಪಡೆಯುವ ಹುನ್ನಾರ, (ಇಲ್ಲಿಯವರೆಗೆ ಭಾರತಕ್ಕೆ ಮಿಲಿಟರಿ ಶಸ್ತ್ರಾಸ್ತ್ರ ಹಾಗೂ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ನೀಡಿದ ಸೋವಿಯತ್ ಒಕ್ಕೂಟ ರಷ್ಯಾ, ಫ್ರಾನ್ಸ್, ಇಂಗ್ಲೆಂಡ್‌ಗಳು ಕೂಡ ಎಂದಿಗೂ ಭಾರತದ ಸಾರ್ವಭೌಮತೆಯ ಇಂತಹ ಉಲ್ಲಂಘನೆ ಮಾಡಬಯಸಿರಲಿಲ್ಲ.

ಈ ಶಸ್ತ್ರಾಸ್ತ್ರಗಳ ಬಳಕೆ ಬಗ್ಗೆ ತರಬೇತಿ ನೀಡುವ ಭಾರತ- ಅಮೇರಿಕಾ ಜಂಟಿ ಸಮಾರಾಭ್ಯಾಸಗಳ ವಿದೇಶಗಳಲ್ಲಿ ಎರಡೂ ಸೈನ್ಯಗಳೂ ಜಂಟಿ ಕಾರ್ಯಾಚರಣೆ ನಡೆಸುವ ಸಂದರ್ಭಗಳಲ್ಲಿ ವಿವಿಧ ಹಂತದ ಭಾರತದ ಮಿಲಿಟರಿ ಅಧಿಕಾರಿಗಳೊಂದಿಗೆ ಅತ್ಯಂತ ಹತ್ತಿರದ ಸಂಬಂಧ ಬೆಳೆಸುವ ಅವಕಾಶಗಳ ಬಗ್ಗೆ ಭಾರತದ ಜನತೆ ಎಚ್ಚರ ವಹಿಸಬೇಕು. ಹಿಂದೆ ಬ್ರಿಟಿಷ್, ಫ್ರೆಂಚ್, ಪೋರ್ಚುಗೀಸರು ಭಾರತವನ್ನು ಆಕ್ರಮಿಸುವ ಸಂದರ್ಭದಲ್ಲಿ ಪ್ರದೇಶ ಪ್ರದೇಶವಾಗಿ ಆಕ್ರಮಿಸಿದ್ದನ್ನು ಭಾರತದ ವಿವಿಧ ರಾಜ, ನವಾಬರುಗಳು, ಅವರ ಅಧಿಕಾರಿಗಳನ್ನು ಬಳಸಿಕೊಂಡು ತಮ್ಮ ಕೆಲಸ ಸುಲಭ ಮಾಡಿಕೊಂಡಿದ್ದನ್ನು ಮರೆಯಬಾರದು.

ಉಡುಪಿ : ಅದಿರು ಲಾರಿಗಳ ಸಂಚಾರದಿಂದ ಹಾನಿ ಮಳೆಗಾಲ ಮುಗಿಯುವ ತನಕ ನಿಷೇಧ

ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯಿಂದಾಗಿ ಸಾರ್ವಜನಿಕ ಸೊತ್ತು ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿದೆ. ಈಗಾಗಲೇ ರಸ್ತೆ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಲ್ಲಲ್ಲಿ ಹೊಂಡಗಳಾಗಿ ವಾಹನಗಳ ಸಂಚಾರಕ್ಕೆ ಹಾಗೂ ಜನತೆಗೆ ಪ್ರಾಣ ಸಂಕಟವಾಗಿದೆ.

ಅದಿರು ಲಾರಿಗಳ ಸಂಚಾರದಿಂದ ಜಿಲ್ಲೆಯಲ್ಲಿ ಆಗುತ್ತಿರುವ ಪ್ರಾಣಹಾನಿ ಮತ್ತು ಹೆದ್ದಾರಿ ಹಾನಿಗೆ ತಡೆಯೊಡ್ಡುವ ದೃಷ್ಟಿಯಿಂದ ಅವುಗಳ ಸಂಚಾರಕ್ಕೆ 'ಮಳೆಗಾಲ ಮುಗಿಯುವ ತನಕ' ತಾತ್ಕಾಲಿಕ ನಿಷೇಧ ವಿಧಿಸಲಾಗಿದೆ.

2 ವಾರಗಳ ಹಿಂದೆ ಕುಂದಾಪುರದ ಖಂಬದಕೋಣೆ ಸೇತುವೆಯ ಬಳಿ ಅದಿರು ಲಾರಿ ಆಟೋಕ್ಕೆ ಡಿಕ್ಕಿಯಾಗಿ ನಾಲ್ಕು ಜನರ ಧಾರುಣ ಸಾವು ಸಂಭವಿಸಿದಾಗ, ಸೇರಿದ್ದ ಸಾವಿರಾರು ಜನರು ಆಕ್ರೋಶಗೊಂಡು ಸ್ವಯಂ ಪ್ರೇರಿತರಾಗಿ ಮೂರು ತಾಸುಗಳ ಕಾಲ ಹೆದ್ದಾರಿ ತಡೆ ನಡೆಸಿ, ಅದಿರು ಲಾರಿ ಸಂಚಾರ ನಿಷೇಧಿಸಬೇಕೆಂದು ಒತ್ತಾಯಿಸಿದ್ದಾರೆ. 2 ದಿನಗಳ ನಂತರ ರಿಕ್ಷಾಕ್ಕೆ ಮತ್ತೆ ಅದಿರು ಲಾರಿ ಡಿಕ್ಕಿಯಾಗಿ ಬ್ರಹ್ಮಾವರ ಬಳಿ ಹತ್ತು ಜನಕ್ಕೆ ಗಂಭೀರ ಸ್ವರೂಪದ ಗಾಯಗಳಾದ ಘಟನೆ. ಹೀಗೆ ಹಲವು ಘಟನೆಗಳು ಇತ್ತೀಚೆಗೆ ಸಂಭವಿಸಿ, ಜನಸಾಮಾನ್ಯರ ಪ್ರತಿಭಟನೆಯು ಹೆಚ್ಚಾಯಿತು. ಅದಿರು ಲಾರಿಗಳ ಸಂಚಾರದಿಂದ ಸಾಕಷ್ಟು ಪ್ರಾಣ ಹಾನಿಯ ಜೊತೆಗೆ ರಸ್ತೆ, ಸೇತುವೆಗಳು ಹಾಳಾಗಿ, ರಾಷ್ಟ್ರೀಯ ಹೆದ್ದಾರಿಯಲ್ಲಿನ ಪ್ರಯಾಣ ಕೂಡಾ ಪ್ರಯಾಸಕರವಾಗಿದೆ.

ದಿನವೊಂದಕ್ಕೆ ಸರಾಸರಿ 300-400 ಅದಿರು ಲಾರಿಗಳು ಸಂಚಾರ ನಡೆಸುತ್ತಿದ್ದು, ಜಿಲ್ಲೆಯ ರಸ್ತೆಗಳು ಹಾಗೂ ಸೇತುವೆಗಳು ಅಧಿಕ ಭಾರದ ಒತ್ತಡವನ್ನು ತಾಳಿಕೊಳ್ಳಲಾಗದೇ ದುಃಸ್ಥಿತಿ ತಲುಪುತ್ತಿವೆ ಎನ್ನುವ ಸಾರ್ವಜನಿಕರ ಆಕ್ರೋಶಗಳು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಕಳೆದ ಮಳೆಗಾಲದ ಅವಧಿಯಲ್ಲಿ ಕುಂದಾಪುರ ಹಾಗೂ ಬ್ರಹ್ಮಾವರದ ಹೆದ್ದಾರಿ ರಸ್ತೆಗಳಿಗೆ ಬಂದೊಂದಗಿದ ಸ್ಥಿತಿ ಈ ಬಾರಿ ಬಾರದೇ ಇರಲಿ ಎನ್ನುವ ಉದ್ದೇಶದಿಂದ ಸಾರ್ವಜನಿಕರು ಅದಿರು ಲಾರಿಗಳ ಸಂಚಾರಕ್ಕೆ ನಿರ್ಬಂಧ ವಿಧಿಸುವಂತೆ ಜಿಲ್ಲಾಡಳಿತವನ್ನು ವಿನಂತಿಸಿದ್ದರು.



ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ವಿ.ಪೊನ್ನುರಾಜ್ ತರಬೇತಿಗೆ ತೆರಳುವ ಮುನ್ನ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಅದಿರು ಲಾರಿ ಸಂಚಾರ ನಿಷೇಧಿಸಿದ್ದರು. ಆದರೆ, ಈ ಆದೇಶವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

ಕರಾವಳಿ ಜಿಲ್ಲೆಗಳ ರಸ್ತೆಗಳು ಅದಿರು ಲಾರಿಗಳ ಭಾರವನ್ನು ತಡೆಯಲು ಸಾಮರ್ಥ್ಯ ಹೊಂದಿಲ್ಲ. ಮಳೆಗಾಲದ ಸಂದರ್ಭ ರಸ್ತೆಗಳಲ್ಲಿ ಹೊಂಡಗಳಾಗಿ ಮಳೆ ಮುಗಿದ ಬಳಿಕ ಪುನಃ ಡಾಂಬರೀಕರಣ ಮಾಡಿದ್ದು, ಮತ್ತೊಂದು ಮಳೆಗಾಲ ಬಂದಾಗ ಪುನಃ ಹೊಂಡಗಳಾಗುವುದು ರೂಢಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅತೀ ಭಾರದ ಅದಿರು ಲಾರಿಗಳು ಸಂಚರಿಸುವಾಗ ರಸ್ತೆಯಲ್ಲಿರುವ ಸಣ್ಣ ಹೊಂಡ ಬೃಹದಾಕಾರ ತಳೆಯುತ್ತಿದೆ ಆದಷ್ಟು ಬೇಗ ಜಿಲ್ಲೆಯ ರಸ್ತೆಗಳ ದುರವಸ್ಥೆಗೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದು ನಾಗರೀಕರು ಜಿಲ್ಲಾಡಳಿತವನ್ನು ಒತ್ತಾಯಿಸುತ್ತಿರುವುದು ಸ್ವಾಗತಾರ್ಹವಾಗಿದೆ.

ಚತುಷ್ಪಥ ರಸ್ತೆ ಪೂರ್ಣಗೊಂಡಾಗ ಮಾತ್ರ ಹೆಚ್ಚು ಭಾರದ ಅದಿರು ಲಾರಿಗಳು ಹೋಗಲು ಸಾಧ್ಯ. ಚತುಷ್ಪಥ ರಸ್ತೆ ಪೂರ್ಣಗೊಳ್ಳಲು ಇನ್ನು 7-8 ವರ್ಷ ಹೋದೀತು. ಮಳೆಗಾಲ ಮುಗಿದ ಬಳಿಕ ಪುನಃ ಅದಿರು ಲಾರಿ ಸಂಚರಿಸಲು ಅವಕಾಶ ನೀಡಿದರೆ ರಸ್ತೆಗಳು ವಾಹನ ಸಂಚರಿಸಿದಂತೆ ಆಗುತ್ತದೆ. ಜನಸಾಮಾನ್ಯರಿಗೆ, ದಿನನಿತ್ಯ ಪ್ರಯಾಣ ಮಾಡುವವರಿಗೆ ಕಷ್ಟವಾಗುತ್ತದೆ. ಈ ಪರಿ... ಬದಲಾಗಬೇಕಾಗಿದೆ.

ರಸ್ತೆಗಳನ್ನು ಹಾಗೂ ಸೇತುವೆಗಳನ್ನು ನಿರ್ಮಾ... ಮಾಡುವಾಗ ಅತಿಭಾರದ ವಾಹನಗಳು ಸಂಚರಿಸ... ಯೋಗ್ಯವಾದ 'ಧಾರಣ ಶಕ್ತಿ' ಹೊಂದಿರಬೇ... ತಾತ್ಕಾಲಿಕ ವ್ಯವಸ್ಥೆಯಾಗಿರದೇ ಶಾಶ್ವ... ವ್ಯವಸ್ಥೆಯಾಗಿರಬೇಕು. ಅತೀಭಾರದ ವಾಹನ... ಸಂಚರಿಸುವ ರಾಜ್ಯದ ಹೆದ್ದಾರಿ ಹಾಗೂ ರಾಷ್ಟ್ರೀ... ಹೆದ್ದಾರಿ ಭಾರವನ್ನು ತಡೆಯುವ ಸಾಮರ್ಥ... ಇರುವಂತೆ ನಿರ್ಮಾಣವಾಗಬೇಕಾಗಿದೆ.

ರಾಜ್ಯದ ಹೆದ್ದಾರಿ ಹಾಗೂ ರಾಷ್ಟ್ರೀ... ಹೆದ್ದಾರಿಗಳನ್ನು ಚತುಷ್ಪಥ ರಸ್ತೆಗಾಗಿ ನಿರ್ಮಾ... ಮಾಡುವ ಉದ್ದೇಶವೇ ಅದಾಗಿದೆ. ಸರ್ಕಾರ ಮ... ಜಿಲ್ಲಾಡಳಿತ ತುರ್ತು ಗಮನಹರಿಸಿ, ಜನಸಾಮಾ... ಅನುಕೂಲಕ್ಕಾಗಿ, ವಾಹನಗಳು ಹಾಗೂ ಅತೀಭಾ... ವಾಹನಗಳು ಸಂಚರಿಸಲು ಯೋಗ್ಯವಾದ ರಸ್ತೆ... ಮತ್ತೆ ಸೇತುವೆಗಳ ನಿರ್ಮಾಣವಾಗುವುದು ತೀ... ಅವಶ್ಯ. ವಿಳಂಬವಾದಂತೆ ಹಾನಿ ತೀರಾ ಹೆಚ್ಚುತ್ತ... ಈಗಾಗಲೇ ಉಡುಪಿ ಜಿಲ್ಲೆಯ ಬಾಕಿಟ... ಸೇತುವೆ ಜಖಂ ಆಗಿ ಪುನಃ ಹೊಸ ಸೇತು... ನಿರ್ಮಾಣ ಮಾಡಬೇಕಾಗಿ ಬಂತು. ಹೊನ್ನಾ... ಸೇತುವೆ, ಕಂಡ್ಲೂರು ಹಾಗೂ ಮಾಬು... ಸೇತುವೆಗಳು ಜಖಂಗೊಂಡಿವೆ. ದುರ... ಮಾಡಲಾಗಿದೆ. ಆದರೂ ಅದು ಶಾಶ್ವತ ಅ... ಚತುಷ್ಪಥ ರಸ್ತೆ ನಿರ್ಮಾಣವಾಗುವಾಗಲೇ ಕೆ... ಹೊಸ ಸೇತುವೆಗಳನ್ನು ನಿರ್ಮಾಣಮಾಡುವು... ಅವಶ್ಯವಿದೆ. ಕರಾವಳಿಯ ಜಿಲ್ಲೆಗಳ ಜನ... ಸರ್ಕಾರವನ್ನು ಒತ್ತಾಯಿಸುವ ಕಾರ್ಯಕ್ರಮಗಳ... ಹಮ್ಮಿಕೊಳ್ಳುವುದು ತೀರಾ ಅವಶ್ಯವಿದೆ.

- ಕೆ.ಶಂಕ...

ವಿಶ್ವದ ಚರಿತ್ರೆ ಕಲಿಸುವ ಪಾಠ.....

ಪುಟ 5 ರಿಂದ

ದೇಶಗಳ ನೆರವಿನೊಂದಿಗೆ 1950ರ ದಶಕದಲ್ಲಿಯೇ ಕೊರಿಯಾ, ವಿಯೆಟ್ನಾಂ, ಪ್ಯಾಲೆಸ್ಟೈನ್‌ಗಳಿಂದ ಆರಂಭಿಸಿ ಇತ್ತೀಚೆಗೆ ಇರಾಕ್, ಅಫ್ಘಾನಿಸ್ತಾನ್‌ಗಳವರೆಗೆ ನೇರವಾಗಿ ಆಕ್ರಮಣಕ್ಕೊಳಪಡಿಸಿ ಅಲ್ಲಿಯ ಸಂಪನ್ಮೂಲಗಳನ್ನು ಜನತೆಯನ್ನು ಶೋಷಣೆಗೆ ಒಳಪಡಿಸಿದೆ. ಅಮೇರಿಕಾದ ಮೊದಲ ಕಪ್ಪು ಅಧ್ಯಕ್ಷ ಬರಾಕ್ ಒಬಾಮಾರ ಆಳ್ವಿಕೆಯಲ್ಲಿಯೂ ಈ ಆಕ್ರಮಣಗಳು ಮುಂದುವರೆದಿದೆ.

ಜಾಗತಿಕ ಅನುಭವದ ಬೆಳಕಿನಲ್ಲಿ ಸ್ವಾತಂತ್ರ್ಯಾನಂತರದ ಭಾರತದ ಅನುಭವವನ್ನು ಮತ್ತು ಇಂದು ಭಾರತದಲ್ಲಿ ನಡೆಯುತ್ತಿರುವುದನ್ನು ವಿಶ್ಲೇಷಣೆಗೆ ಒಳಪಡಿಸಬೇಕು.

ಸ್ವಾತಂತ್ರ್ಯದ ಕೆಲವೇ ದಿನಗಳಲ್ಲಿ ಆರಂಭವಾದ ಕಾಶ್ಮೀರದ ಪ್ರಶ್ನೆ, ಇಂದಿಗೂ ಮುಂದುವರೆದಿರುವ ಭಯೋತ್ಪಾದನೆಯನ್ನು ಬೆಳೆಸುವುದಕ್ಕೆ ಅಮೇರಿಕಾ ಕಾರಣವಾಗಿದೆ. ಅಸ್ಸಾಂ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್‌ಗಳಲ್ಲಿ, 2 ದಶಕಗಳ ಕಾಲದ ಖಾಲಿಸ್ತಾನದ ಹೆಸರಿನಲ್ಲಿ ಭಯೋತ್ಪಾದನೆಗೆ ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ನೆಲವನ್ನು ಅಲ್ಲಿಯ ಮಿಲಿಟರಿಯನ್ನು ಹಾಗೂ ಸರ್ವಾಧಿಕಾರಿ ಮತ್ತು ಚುನಾಯಿತ ಸರ್ಕಾರಗಳನ್ನು ಬಳಸಿ ಭಯೋತ್ಪಾದಕರಿಗೆ ಹಣ, ತರಬೇತಿ, ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದು ಅಮೇರಿಕಾ, ಬ್ರಿಟನ್ ಮತ್ತಿತರ ಸಾಮ್ರಾಜ್ಯಶಾಹಿ ದೇಶಗಳು, ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳ ಮಿಲಿಟರಿಯೊಂದಿಗೆ ಅಮೇರಿಕಾದ ಮಿಲಿಟರಿಗೆ ಇರುವ ಸಂಬಂಧವೂ ಜಗತ್ತಿಗೆ ಗೊತ್ತಿರುವಂತದ್ದು.

ಬಾಂಗ್ಲಾದೇಶ ವಿಮೋಚನೆಯ ಸಂದರ್ಭದಲ್ಲಿ ಹಿಂದೂ ಮಹಾಸಾಗರದಲ್ಲಿ ನಾವಿಕ ಹಾಗೂ ವಾಯುಪಡೆಗಳನ್ನು ತಂದು ನಿಲ್ಲಿಸಿದ ಘಟನೆಯನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗಿದೆ.

ಆಟೋ ರಿಕ್ಷಾ ಚಾಲಕರ ಸಂಘ ವಾಹನ ಚಾಲಕರ ಸಂಘದ 8ನೇ ವಾರ್ಷಿಕೋತ್ಸವ

ಕುಂದಾಪುರ ತಾಲೂಕು ಆಟೋ ರಿಕ್ಷಾ ಮತ್ತು ವಾಹನ ಚಾಲಕರ ಸಂಘ(ಸಿಐಟಿಯು) ಕುಂದಾಪುರ, ಇದರ 8ನೇ ವಾರ್ಷಿಕ ಮಹಾಸಭೆಯು 19.07.2009ರಂದು ಎಚ್.ಕರುಣಾಕರ ರವರ ಅಧ್ಯಕ್ಷತೆಯಲ್ಲಿ ಸೇರಿತು.

ವರದಿಯ ಮೇಲೆ ಚರ್ಚೆ ನಡೆದಾಗ 4 ಮಂದಿ ಭಾಗವಹಿಸಿ ಉತ್ತಮ ಸಲಹೆ ನೀಡಿದರು. ಮುಕುಂದನ್ ಮತ್ತು ಸುಬ್ರಹ್ಮಣ್ಯ ಪಡುಕೋಣೆಯವರು ಶುಭಕೋರಿ ಮಾತನಾಡಿದರು. ಸಭೆಯನ್ನುದ್ದೇಶಿಸಿ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಅಧ್ಯಕ್ಷರು ಹಾಗೂ ಮಾಜಿ ಪುರಸಭಾ ಅಧ್ಯಕ್ಷರು ಆದ ವಿ.ನರಸಿಂಹರವರು ಸಂಘಟನೆಯನ್ನು ಬಲಪಡಿಸಬೇಕೆಂದು ಹೇಳಿದರು.

ಸಿಐಟಿಯುವಿನ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಕೆ.ಶಂಕರ್‌ರವರು ಮಾತನಾಡಿ, ಶಿಸ್ತು ಮತ್ತು ಕರ್ತವ್ಯದ ಕಡೆ ಆಟೋ ರಿಕ್ಷಾ ಚಾಲಕರು ಗಮನಹರಿಸಬೇಕೆಂದು ಹೇಳಿ ಅಪಘಾತ ಪರಿಹಾರ, ಸಾಮಾನ್ಯ ವಿಮೆ ಹಾಗೂ ರಿಕ್ಷಾ ಚಾಲಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಸೌಲಭ್ಯ ಸಿಗುತ್ತಿರುವುದು ಅತ್ಯಂತ ಸ್ವಾಗತಾರ್ಹವಾದ ಸಾಧನೆಯಾಗಿದೆ ಅಂತ ವಿವರಿಸಿದರು. ಅಸಂಘಟಿತ ಕಾರ್ಮಿಕರ ಹೋರಾಟದ ಸಂದರ್ಭ ಆಟೋ ರಿಕ್ಷಾ ಚಾಲಕರು ಭಾಗವಹಿಸಿ ಯಶಸ್ವಿ ಮಾಡಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ ಎಚ್ ಕರುಣಾಕರ... ಮಾತನಾಡಿ ಈಗಾಗಲೇ ಹಲವಾರು ಸೌಲಭ್ಯಗ... ಸಂಘದಿಂದ ಪಡೆಯುತ್ತಿದ್ದು, ಇನ್ನು ಹೆಚ್ಚಿನ ಸೌ... ಪಡೆಯಲು ಸೆಪ್ಟೆಂಬರ್ ತಿಂಗಳ ಹೋರಾಟ... ಪಾಲ್ಗೊಳ್ಳಬೇಕೆಂದು ತಿಳಿಸಿದರು. ಸಹಕಾರ ಸಂ... ರಚನೆಯ ಸೂಚನೆ ನೀಡಿದರು.

2009ರ ಸಾಲಿನಲ್ಲಿ ಪದಾಧಿಕಾರಿಗಳ ಹಾ... ಕಾರ್ಯಕಾರಿ ಸಮಿತಿ ಸದಸ್ಯರನ್ನು ಆ... ಮಾಡಲಾಯಿತು. ಹೆಚ್ ಕರುಣಾಕರ ಅಧ್ಯಕ್ಷರಾ... ಕಾರ್ಯದರ್ಶಿಯಾಗಿ ಚಂದ್ರ.ವಿ ವ... ಕೋಶಾಧಿಕಾರಿಯಾಗಿ ರಮೇಶ್.ವಿ ಇವರನ್ನು ಆ... ಮಾಡಲಾಯಿತು. ಗೋವಿಂದ ಗುಡಾರ್‌ಹಕ್ಲು, ವ... ಉಮೇಶ್, ವಿ.ನಾರಾಯಣ, ಗಣೇಶ್, ಅರ... ಕುಮಾರ ಇವರು ಉಪಾಧ್ಯಕ್ಷರಾಗಿ, ಶ್ರೀಯುತ ರಾ... ದೇವಾಡಿಗ, ಕೃಷ್ಣ ದೇವಾಡಿಗ, ಶೇಖರ ಪೂಜಾ... ಸಂಜೀವ ಎಸ್.ಕೋಡಿ, ಲಕ್ಕು ಬರೆಕಟ್ಟು ಇವ... ಜತೆ ಕಾರ್ಯದರ್ಶಿಯಾಗಿ ಆರಿಸಲಾಯಿತು. ದಿ... ಎಸ್.ಖಾರ್ವಿಯವರನ್ನು ಪತ್ರಿಕಾ ಸಲಹೆಗಾರರ... ಆರಿಸಲಾಯಿತು. ಕೊನೆಯಲ್ಲಿ ರಾಜು ದೇವಾಡಿಗರ... ಧನ್ಯವಾದವನ್ನು ಅರ್ಪಿಸಿದರು.

ವಿ.ಚ...
ಪ್ರಧಾನ ಕಾರ್ಯದ...



ಮಳವಳ್ಳಿಯಲ್ಲಿ ಅಖಿಲ ಭಾರತ ಕೃಷಿಕೂಲಿಕಾರರ ಸಂಘಧ ಜನರಲ್ ಕೌನ್ಸಿಲ್ ಸಭೆ.

ಬರ, ಬವಣೆಗಳ ವಿರುದ್ಧ

ಕೃಷಿಕೂಲಿಕಾರರ ಆಂದೋಲನದ ಘೋಷಣೆ

ಟಿ. ಯಶವಂತ

ಮಳವಳ್ಳಿ ಪಟ್ಟಣದಲ್ಲಿ ಆಗಸ್ಟ್ 9-10 ರಂದು ಎರಡು ದಿನಗಳ ಕಾಲ ನಡೆದ ಅಖಿಲ ಭಾರತ ಜನರಲ್ ಕೌನ್ಸಿಲ್ (ಸಾಮಾನ್ಯ ರಾಷ್ಟ್ರೀಯ) ಸಭೆಯ ಭಾಗವಾಗಿ ಏರ್ಪಡಿಸಿದ್ದ ಆಕರ್ಷಕ ಮೆರವಣಿಗೆ, ಬೃಹತ್ ಬಹಿರಂಗ ಸಭೆ ಜನರ ಗಮನ ಸೆಳೆದುದಲ್ಲದೆ ಶಿಸ್ತುಬದ್ಧ, ಜನಪರ ಘೋಷಣೆಗಳಿಂದ ಕೆಂಬಾವುಟದ ಕಂಪನ್ನು ಎಲ್ಲೆಡೆ ಪಸರಿಸಿತು.

ತಾಲ್ಲೂಕು ಪಂಚಾಯ್ತಿ ಕಛೇರಿ ಮತ್ತು ಕನಕಪುರ ರಸ್ತೆ ಟೋಲ್‌ಗೇಟ್‌ನಿಂದ ಪ್ರತ್ಯೇಕವಾಗಿ ಹೊರಟ ಎರಡು ಕೃಷಿ ಕೂಲಿಕಾರರ ಮೆರವಣಿಗೆ ಜನಸಾಗರವಾಗಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಬೃಹತ್ ಬಹಿರಂಗ ಸಭೆಯಾಗಿ ಏರ್ಪಟ್ಟಿತ್ತು.

ಉರಿವ ಸೂರಿನ ಬಿರುಬಿಸಿಲ ಲೆಕ್ಕಿಸದೆ ಸುಮಾರು 3 ಗಂಟೆಗಳ ಕಾಲ ನಡೆದ ಬಹಿರಂಗ ಸಭೆಯಲ್ಲಿ ಮುಖಂಡರ ಸ್ಫೂರ್ತಿದಾಯಕ ಮಾತುಗಳನ್ನು ಆಲಿಸಿದರು. ಗಣನೀಯ ಸಂಖ್ಯೆ ಮಹಿಳೆಯರು ಸೇರಿದಂತೆ ಸುಮಾರು 3 ಸಾವಿರಕ್ಕೂ ಹೆಚ್ಚು ಇದ್ದ ಈ ಬಹಿರಂಗ ಸಭೆಯನ್ನು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರೂ, CPI(M) ಪಾಲಿಟ್‌ಬ್ಯೂರೋ ಸದಸ್ಯರಾದ ರಾಮಚಂದ್ರಪಿಳ್ಳೆ ಉದ್ಘಾಟಿಸಿ, ಕೃಷಿ ಬಿಕ್ಕಟ್ಟು, ಯು.ಪಿ.ಎ. ಸರ್ಕಾರದ ಜನವಿರೋಧಿ ಧೋರಣೆ ದೇಶದ ಬರಪರಿಸ್ಥಿತಿ, ಕೃಷಿಕೂಲಿಕಾರರ ಸ್ಥಿತಿಗತಿಗಳ ಕುರಿತು ವಿವರವಾಗಿ ಮಾತನಾಡಿದರು.

ಕೇಂದ್ರದ ಯು.ಪಿ.ಎ. ಸರ್ಕಾರದ ಕೃಷಿ ನೀತಿಯಿಂದ ಕೃಷಿ ಕೂಲಿಕಾರರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳಗೊಂಡು ಹಸಿವಿನಿಂದ ಸಾಯುವವರ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ. ಬಹುರಾಷ್ಟ್ರೀಯಕಂಪನಿಗಳು, ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳನ್ನು ಪ್ರೋತ್ಸಾಹಿಸುವ ಕೃಷಿ ನೀತಿಯಿಂದಾಗಿ ಆಹಾರ ಭದ್ರತೆ ಅಪಾಯದಲ್ಲಿದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಂಪೂರ್ಣ ನಾಶ ಮಾಡಿ ಆತ್ಮಹತ್ಯೆ ಮತ್ತು ಹಸಿವಿನ ಸಾಲಿಗೆ ದೇಶದ ಗ್ರಾಮೀಣ ಜನರನ್ನು ದೂಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರಿ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದರೂ ಕೇಂದ್ರದ ಯು.ಪಿ.ಎ. ಮತ್ತು ರಾಜ್ಯದ ಬಿ.ಜೆ.ಪಿ. ಸರ್ಕಾರಗಳು ಯಾವುದೇ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳದೇ ಸಾರ್ವಜನಿಕ ಪಡಿತರ ವ್ಯವಸ್ಥೆಯಸ್ನು ನಾಶಮಾಡಲು ಸಂಚು ನಡೆಸುತ್ತಿವೆ. ಬಡವರಿಗೆ ಅಗತ್ಯವಾದ ಪಡಿತರ ಚೀಟಿಗಳನ್ನು ವಿತರಿಸಿಲ್ಲ. ಪಡಿತರ ಚೀಟಿ ಇದ್ದವರಿಗೂ ಅಗತ್ಯ ಕನಿಷ್ಠ ಆಹಾರದ ಸೌಲಭ್ಯ ಸಿಗುತ್ತಿಲ್ಲ. ಸಮರಶೀಲ ಹೋರಾಟ ನಡೆಸದೆ ನ್ಯಾಯ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ತಮ್ಮ ಹಕ್ಕುಗಳಿಗೆ ಹೋರಾಟ ನಡೆಸಲು ಅವರು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕೃಷಿ ಕೂಲಿಕಾರರ ಸಂಘದ ಅಖಿಲಭಾರತ ಪ್ರಧಾನ




ಕಾರ್ಯದರ್ಶಿ ಹಾಗೂ ಸಂಸದ ಎ. ವಿಜಯರಾಘವನ್ ಸಂಘಟನೆಯ ನಿರಂತರ ಹೋರಾಟದ ನಂತರ ವಿಶಿಷ್ಠ ರಾಜಕೀಯ ಸನ್ನಿವೇಶದಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕರ್ನಾಟಕವು ಸೇರಿದಂತೆ ಹಲವು ರಾಜ್ಯಗಳು ನಿರ್ಲಕ್ಷಿಸಿವೆ. ಕನಿಷ್ಠ 100 ದಿನ ಉದ್ಯೋಗ ನೀಡಿಕೆಯ ಬದಲು ಕೇವಲ 30, 20 ದಿನಗಳ ಉದ್ಯೋಗ ನೀಡಲಾಗಿದೆ. ಉದ್ಯೋಗ ನೀಡಿದ ಕಡೆ ಕೂಲಿ ಪಾವತಿಸದೆ 'ನರೇಗಾ' ವನ್ನು ವಿಫಲಗೊಳಿಸಲು ಯತ್ನಗಳು ನಡೆದಿವೆ.

ಅಧಿಕಾರಿಶಾಹಿ, ಗುತ್ತಿಗೆದಾರರು ಹಾಗೂ ಇನ್ನಿತರ ಪಟ್ಟಭದ್ರ ಹಿತಾಸಕ್ತಿಗಳಿಂದಾಗಿ 'ನರೇಗಾ' ಸರಿಯಾಗಿ ಜಾರಿಗೊಳ್ಳುತ್ತಿಲ್ಲ. ಕರ್ನಾಟಕದ ಬಿಜೆಪಿ ಸರ್ಕಾರ ಮಠಮಾನ್ಯಗಳಿಗೆ ಹೇರಳವಾಗಿ ಹಣ ದೇಣಿಗೆ ನೀಡುತ್ತಿದೆ. ಆದರೆ ಕೃಷಿ ಕೂಲಿಕಾರರಿಗೆ ಆಹಾರ, ಉದ್ಯೋಗ, ಮನೆಯಂತಹ ಕನಿಷ್ಠ ಸೌಲಭ್ಯಗಳನ್ನು ನೀಡಲು ಪ್ರಯತ್ನಿಸುತ್ತಿಲ್ಲ. ಇಂತಹ ಜನವಿರೋಧಿ ಕ್ರಮಗಳನ್ನು ವಿರೋಧಿಸಿ ದೊಡ್ಡ ದೊಡ್ಡ ಹೋರಾಟಗಳನ್ನು ರೂಪಿಸಿ ಸಂಘಟನೆ ಬಲಿಷ್ಠಗೊಳಿಸಲು ಕರೆ ನೀಡಿದರು.

ಎಡ ಸರ್ಕಾರಗಳು ಅಧಿಕಾರದಲ್ಲಿರುವ ಕಡೆ ಹಾಗೂ ಸಂಘಟನೆ ಬಲವಾಗಿರುವ ಕಡೆ ಕೃಷಿ ಕೂಲಿಕಾರರು ಪಡೆದಿರುವ ಸೌಲಭ್ಯಗಳನ್ನು ವಿವರಿಸಿದ ವಿಜಯ ರಾಘವನ್, ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಶ್ರಮಜೀವಿಗಳು ತತ್ತರಿಸಿ ರುವುದನ್ನು ಪ್ರಸ್ತಾಪಿಸಿ 1 ಕೆಜಿ ತೊಗರಿಬೆಳೆಗೆ 3 ದಿನ ಕೂಲಿ ನೀಡಿ ಕೊಳ್ಳಬೇಕಾದ ದುಸ್ಥಿತಿಯನ್ನು ನೆನಪಿಸಿದರು.

ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್. ನಾಗರಾಜ್‌ರವರು ಕರ್ನಾಟಕದ ಕೃಷಿಕೂಲಿಕಾರರ ಸಮಸ್ಯೆಗಳನ್ನು ವಿವರವಾಗಿ ಮಾತನಾಡಿ, ನೆರೆ ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿನ ಕೂಲಿಕಾರರು ಅತ್ಯಂತ ಕಡಿಮೆ ಸೌಲಭ್ಯ, ಕಡಿಮೆ ಕೂಲಿ, ಕಡಿಮೆ ಜೀವನ ಮಟ್ಟವನ್ನು ಹೊಂದಿದ್ದಾರೆ. ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಂದ ಇವರನ್ನು ವಂಚಿಸಲಾಗಿದೆ. ಈ ಪರಿಸ್ಥಿತಿಯನ್ನು ಬಲವಾದ ಸಂಘಟನೆ, ದೃಢಹೋರಾಟದಿಂದ ಮಾತ್ರ ಬದಲಾಯಿಸಬಹುದು ಎಂದು ತಿಳಿಸಿದರು.



ವಿಜಯರಾಘವನ್

ಮುಖಂಡರುಗಳಾದ ಸುನೀತ್ ಛೋಪ್ರಾ, ಹನನ್‌ಮೊಲ್ಲಾ ಮತ್ತಿತರರು ಮಾತನಾಡಿದರು.

ಸ್ವಾಗತ ಸಮಿತಿ ಅಧ್ಯಕ್ಷರು, ಪುರಸಭಾ ಸದಸ್ಯರೂ ಆದ ಹೆಚ್.ಬಸವರಾಜುರವರ ಸ್ವಾಗತದೊಂದಿಗೆ ಆರಂಭವಾದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ, ಜಿಲ್ಲಾಧ್ಯಕ್ಷರಾದ ಎಂ.ಪುಟ್ಟಮಾದು, ಜಿಲ್ಲಾ ಕಾರ್ಯದರ್ಶಿ ಬಸವರಾಜು, ಪುರಸಭಾ ಅಧ್ಯಕ್ಷ ಅಯೂಬ್‌ಪಾಷ, ಇನ್ನಿತರ ಮುಖಂಡರುಗಳು ಉಪಸ್ಥಿತರಿದ್ದರು.

ಜನರಲ್ ಕೌನ್ಸಿಲ್ ಸಭೆ

ಅತ್ಯಂತ ಸುಸಂಘಟಿತವಾಗಿ, ಅಚ್ಚುಕಟ್ಟು ವ್ಯವಸ್ಥೆಗಳಿಂದ ನಡೆದ ಜನರಲ್ ಕೌನ್ಸಿಲ್ ಸಭೆಯು ಯು.ಪಿ.ಎ. ಸರ್ಕಾರದ ನೀತಿ, ಧೋರಣೆ, ಹಲವು ರಾಜ್ಯಗಳ ಕೃಷಿಕೂಲಿಕಾರರ ಪರಿಸ್ಥಿತಿ, ನರೇಗಾ ಅನುಷ್ಠಾನದ ಅನುಭವಗಳನ್ನು ವಿವರವಾಗಿ ಚರ್ಚಿಸಿ ಹಲವು ಮಹತ್ತರ ನಿರ್ಣಯಗಳನ್ನು ಅಂಗೀಕರಿಸಿ ಮುಕ್ತಾಯಗೊಂಡಿತು.

ಆಹಾರ ಭದ್ರತೆ ಮತ್ತು 'ನರೇಗಾ' ಅನುಷ್ಠಾನದ ಬಗ್ಗೆ ವಿವರವಾಗಿ ಚರ್ಚಿಸಿದ ಸಭೆಯು ತೀವ್ರತರ ಹೋರಾಟಗಳನ್ನು ನಡೆಸಲು ಕರೆ ನೀಡಿದೆ.

'ನರೇಗಾ' ಅನುಷ್ಠಾನ:

ಹೋರಾಟ ಒಂದೇ ದಾರಿ

ಹಿಂದೆಂದೂ ಇರದ ನಿರುದ್ಯೋಗ ಹಾಗೂ ಬೆಲೆ ಏರಿಕೆಯಿಂದ ಕೃಷಿಕೂಲಿಕಾರರು, ಗ್ರಾಮೀಣ ಬಡವರು ವಿಪರೀತ ಸಂಕಷ್ಟಕ್ಕೆ ಒಳಗಾಗಿರುವ ಈ ಸಂದರ್ಭದಲ್ಲಿ ಇರುವ ಕೆಲವೇ ದಿನಗಳ ಉದ್ಯೋಗವು, ಕೃಷಿಯಲ್ಲಿನ ಯಾಂತ್ರೀಕರಣ, ಗುತ್ತಿಗೆಕರಣ, ಬೆಳೆ ಮಾದರಿ ಬದಲಾವಣೆ ಮತ್ತಿತರ ಕಾರಣದಿಂದ ಕಡಿತಗೊಂಡಿದೆ. ದೇಶದಲ್ಲಿ ಬರಗಾಲದಂತಹ ಭೀಕರ ಪರಿಸ್ಥಿತಿಯು ಕೃಷಿ ಕೂಲಿಕಾರರಿಗೆ ಪರ್ಯಾಯ ಉದ್ಯೋಗಗಳ ನೀಡಿಕೆ ಅಗತ್ಯವನ್ನು ಎತ್ತಿ ತೋರಿದೆ. ಇಂತಹ ಸ್ಥಿತಿಯಲ್ಲಿ 'ನರೇಗಾ' ಅನುಷ್ಠಾನ ತುರ್ತಾಗಿ ಆಗಬೇಕಾಗಿರುವ ಅಗತ್ಯ ಎಂದು ಜನರಲ್ ಕೌನ್ಸಿಲ್ ಸಭೆ ಒತ್ತಿ ಹೇಳಿದೆ.

ಸರಿಯಾಗಿ ಅನುಷ್ಠಾನವಾಗಿರುವ ಅನುಭವಗಳನ್ನು ಉಲ್ಲೇಖಿಸಿರುವ ನಿರ್ಣಯವು ಶೋಷಿತ ಗ್ರಾಮೀಣ ಜನಜೀವನ ವಿಶೇಷವಾಗಿ ಪರಿಶಿಷ್ಟ ಜಾತಿ/ಪಂಗಡ, ಮಹಿಳೆಯರ ಜೀವನ ಮಟ್ಟದಲ್ಲಿ ಗುಣಾತ್ಮಕ ಪರಿಣಾಮ ಬೀರಿದೆಯಲ್ಲದೆ ಗಣನೀಯ ಮಟ್ಟದಲ್ಲಿ ವಲಸೆ ಕಡಿಮೆಯಾಗಿದೆ. ಆದರೆ ಬಹುತೇಕ ಕಡೆ ಈ ಯೋಜನೆ

ಪುಟ 15ಕ್ಕೆ



ಬಹಿರಂಗ ಸಭೆಯ ದೃಶ್ಯ

ಭೀಕರ ಬರ, ಸರಕಾರಗಳ ತಾತ್ಸ

ಕರ್ನಾಟಕದಲ್ಲಿ ಕರಾವಳಿಯಲ್ಲಿ ಮಳೆ ಗಂಭೀರ ಹಾನಿ ಉಂಟುಮಾಡಿದ್ದರೆ, ಉಳಿದಂತೆ 17ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಗಂಭೀರ ಬರದ ಬೇಗೆಯ ಜನ ಬೇಯುತ್ತಿದ್ದಾರೆ. ರಾಜ್ಯ ಸರ್ಕಾರ ತಡವಾಗಿ ಒಂದಷ್ಟು ಪರಿಹಾರ ಘೋಷಣೆ ಮಾಡಿ, ಕೇಂದ್ರ ಸರ್ಕಾರದ ಕಡೆ ಕೈ ತೋರುತ್ತಿದೆ. ರಾಜ್ಯದ ಕೆಲವು ಜಿಲ್ಲೆಗಳ ವಾಸ್ತವ ಚಿತ್ರಣ ನಿಮ್ಮ ಮುಂದಿದೆ.

ಕೋಲಾರ : ಒಣಗಿದ ಧರೆಯೊಡಲು, ಗೋಳು ತುಂಬಿದ ಬಾಳು

ಅತ್ತ ಆಗಸದಲ್ಲಿ ಮೋಡಗಳು ಹಿಂಡುಹಿಂಡಾಗಿ ಕಪ್ಪು ಗಟ್ಟುತ್ತವೆ. ಇತ್ತ ಧರೆಯಲ್ಲಿ ರೈತಾಪಿ ವರ್ಗದ ಮೊಗದ ಮೇಲೆ ಆಸೆಯ ಸಿಂಚನ ಮೂಡುತ್ತದೆ. ಆದರೆ... ಆ ಮೋಡಗಳು ಹನಿ ನೀರನ್ನು ಚೆಲ್ಲದೆ ಗಾಳಿಯಲ್ಲಿ ಹಾಗೇ ತೇಲಿ ಹೋಗುತ್ತವೆ.. ರೈತನ ಕಣ್ಣಿಂದ ಹನಿ ಹನಿಯಾಗಿ ನೀರು ಇಳೆಯನ್ನು ಚುಂಬಿಸುತ್ತದೆ.


ಒಂದು ದಶಕದ ಹಿಂದಿನವರೆಗೆ 'ಚಿನ್ನದ ನಾಡು' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಕೋಲಾರ ಜಿಲ್ಲೆಯ ಕೃಷಿ ಕ್ಷೇತ್ರದ ಈಗಿನ ಪರಿಸ್ಥಿತಿಯಿದು. ಚಿನ್ನದ ಗಣಿ ಚಟುವಟಿಕೆ ಮುಚ್ಚಿ ಒಂದು ದಶಕವೇ ಕಳೆಯುತ್ತಿದೆ. ಇತ್ತ ಜಿಲ್ಲೆಯ ಮಣ್ಣಿನಲ್ಲಿ ಬೆಳೆ ತೆಗೆಯುವ ರೈತರ ಆಸೆಯೂ ಮಣ್ಣು ಪಾಲಾಗುತ್ತಿದೆ, ಮಳೆಯ ಅಭಾವದಿಂದಾಗಿ ಅನೇಕ ವರ್ಷ ಕಾಲ ಬರದ ದವಡೆಗೆ ಸಿಲುಕಿ ಕಂಗಾಲಾಗಿದ್ದ ಅವಿಭಜಿತ ಕೋಲಾರ ಜಿಲ್ಲೆ ಕಳೆದ ವರ್ಷವಷ್ಟೇ ಹದವಾದ ಮುಂಗಾರು ಮಳೆಯ ಸಿಂಚನದಿಂದ ಸ್ವಲ್ಪ ಚೇತರಿಸಿಕೊಂಡಿತ್ತು. ಆದರೆ ಮುಂಗಾರು ಮತ್ತೆ ಸಿಡುಕಿಕೊಂಡಿದ್ದು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಬರಗಾಲದ ಅಂಚಿಗೆ ಬಂದು ನಿಂತಿವೆ.

'ಮುಂಗಾರು ಮಳೆಯೇ
ಏನು ನಿನ್ನ ಕೋಪದ ಲೀಲೆ..'

ಎಂದು ಜನರು ವಿಷಾದ ಗೀತೆ ಹಾಡಿಕೊಳ್ಳುವಂತಾಗಿದೆ.

ಹಾಗಂತ ಇದು ಧೋ ಎಂದು ಮಳೆ ಸುರಿಯುವ ಕರಾವಳಿ ಮಲೆನಾಡು ಪ್ರದೇಶವೇನೂ ಅಲ್ಲ. ಹೇಳಿ ಕೇಳಿ ಬಯಲು ಸೀಮೆ ಪ್ರದೇಶ. ಮಳೆ ಜೊತೆ ಕೆರೆ ಕುಂಟೆಗಳೇ ಇಲ್ಲಿನ ಕೃಷಿಗೆ ಆಧಾರ. ಸುಮಾರು 4,000 ಕೆರೆಗಳನ್ನು ಹೊಂದಿದ್ದ ಈ ಪ್ರದೇಶ ಈಗ ಕೆರೆಗಳ ಒತ್ತುವರಿಯಿಂದಾಗಿ ಹಾಗೂ ಅವು ಒಣಗಿ ಹೋಗಿರುವುದರಿಂದ ಅಂತರ್ಜಲ ಮಟ್ಟವೂ ಕುಸಿದು ಹೋಗಿ ನೀರಿಗಾಗಿ ಹಾಹಾಕಾರವೆದ್ದಿದೆ.

ಅಂತರ್ಜಲ ಮಟ್ಟ ಕುಸಿದಿರುವುದರಿಂದ ಬೋರ್‌ವೆಲ್‌ಗಳಿಂದ ನೀರು ಬಸಿದಾದರೂ ಬೆಳೆ ತೆಗೆಯುವ ರೈತರ ಆಸೆ ಭಗ್ನವಾಗಿದೆ. ಅಂತರ್ಜಲದ ಮಟ್ಟ ಸುಮಾರು 1000 ಅಡಿಯಷ್ಟು ಕುಸಿದಿರುವುದರಿಂದ ಅದು ಅನೇಕ ಭಾಗಗಳಲ್ಲಿ ಫ್ಲೋರೈಡ್‌ಯುಕ್ತವಾಗಿದ್ದು, ಕುಡಿಯಲೂ ಆಗದಾಗಿದೆ. ಇದು ಕುಡಿಯುವ ನೀರಿನ ಬವಣೆ, ಕೃಷಿ ಚಟುವಟಿಕೆಗಳಿಗೆ ನೀರಿನ ಅಲಭ್ಯತೆಯ ಪ್ರಶ್ನೆಯಾದರೆ ವಿದ್ಯುತ್ ಸಮಸ್ಯೆ ಕೃಷಿ ಬಿಕ್ಕಟ್ಟನ್ನು ಬಿಗಡಾಯಿಸಿದೆ. ಹೊತ್ತು ಗೊತ್ತಿಲ್ಲದೆ ಕೈ ಕೊಡುವ ವಿದ್ಯುತ್‌ನಿಂದಾಗಿ ನೀರಾವರಿ ಸೌಲಭ್ಯವುಳ್ಳವರೂ ಕೃಷಿ ಕಾರ್ಯವನ್ನು ಸೂಕ್ತವಾಗಿ ನಿರ್ವಹಿಸಲಾರದ ಸ್ಥಿತಿ ಉಂಟಾಗಿದೆ.



ಇವೆಲ್ಲಕ್ಕೆ ಮುಂಗಾರು ವೈಫಲ್ಯ ಸಾಥ್ ನೀಡಿರುವುದರಿಂದ ಜಿಲ್ಲೆಯಲ್ಲಿ ಬರಗಾಲದ ವಿಷಾದ ಗೀತೆಯು ಅಬ್ಬರಿಸುತ್ತಿದೆ. ಕೃಷಿ ಉತ್ಪಾದನೆ ಕುಂಠಿತಗೊಳ್ಳುವುದು ಮಾತ್ರವಲ್ಲದೆ ದನಕರುಗಳಿಗೆ ಮೇವು ನೀರು ಸಿಗುವುದೂ ದುಸ್ತರವಾಗಲಿದೆ ಎಂಬ ಆತಂಕವೂ ಎದುರಾಗಲಿದೆ.

ಅಗಾಧ ಮಳೆ ಕೊರತೆ

2008ರಲ್ಲಿ ಕೋಲಾರ ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ 732.05 ಮಿ.ಮೀ, ಮಳೆಯಾಗಿತ್ತು. ಈ ವರ್ಷ ಈ ಪ್ರಮಾಣ 128.01 ಮಿ.ಮೀ.ಗೆ ಕುಸಿದಿದೆ. ವಾಸ್ತವವಾಗಿ ವಾಡಿಕೆಯಂತೆ ಈ ಅವಧಿಯಲ್ಲಿ ಬೀಳಬೇಕಾದ ಮಳೆಯ ಪ್ರಮಾಣ 348 ಮಿ.ಮೀ. ಆಗಸ್ಟ್‌ನಲ್ಲಿ 482 ಮಿ.ಮೀ. ಮಳೆ ಆಗಬೇಕಿತ್ತು. ಆದರೆ ಜೂನ್ ಮಧ್ಯಭಾಗದಿಂದಲೇ ಅಕ್ಷರಶಃ ನಾಪತ್ತೆಯಾಗಿರುವ ಮಳೆ ಜುಲೈ ಅಂತ್ಯದಲ್ಲಿ ಒಂದಿಷ್ಟು ಹನಿ ಸುರಿಸಿ ಮತ್ತೆ ಮಾಯವಾಗಿದೆ. ಸಾಂಪ್ರದಾಯಿಕವಾಗಿ ಹೇಳುವುದಾದರೆ ಆಯ್ಲೇಷಾ ಮತ್ತು ಮಖೆ ಮಳೆ ಈಗಲಾದರೂ ಬಿದ್ದಲ್ಲಿ ಅಲ್ಪಸ್ವಲ್ಪ ಬಿತ್ತನೆ ಮಾಡಬಹುದಾಗಿದೆ. ಆದರೆ ಅದು ಕೈಗೂಡುವ ಲಕ್ಷಣವೂ ಗೋಚರಿಸದೆ ಬರಗಾಲದ ಛಾಯೆ ದಟ್ಟವಾಗಿ ಕಳವಳ ಸೃಷ್ಟಿಸಿದೆ.

ಜಿಲ್ಲೆಯಲ್ಲಿ 95,485 ಹೆಕ್ಟೇರ್ ಜಮೀನು ಕೃಷಿ ಯೋಗ್ಯವಾಗಿದ್ದು (ತೋಟಗಾರಿಕೆ ಹೊರತುಪಡಿಸಿ) ಕೇವಲ ಸುಮಾರು 9,000 ಹೆಕ್ಟೇರ್ ಪ್ರದೇಶದಲ್ಲಿ, ಅಂದರೆ ಶೇ.9 ಪ್ರದೇಶದಲ್ಲಿ ಬಿತ್ತನೆ ಕಾರ್ಯ ಆಗಿದೆ. ರಾಗಿ, ಶೇಂಗಾ, ತೊಗರಿ ಮತ್ತು ಭತ್ತ ಪ್ರಮುಖ ಬೆಳೆಗಳಾಗಿವೆ. 63,000 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಬಹುದಾಗಿದ್ದು, ಕೇವಲ 250 ಹೆಕ್ಟೇರ್ ನೀರಾವರಿ ಪ್ರದೇಶದಲ್ಲಿ ಮಾತ್ರ ಬಿತ್ತನೆ ಆಗಿದೆಯೆಂದರೆ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎನ್ನುವುದನ್ನು ತೋರಿಸುತ್ತದೆ.

ಜಡ್ಡುಗಟ್ಟಿದ ಆಡಳಿತ ಯಂತ್ರ

ಬರಗಾಲದ ಸನ್ನಿವೇಶದಿಂದಾಗಿ ಜನರು, ರೈತರು ಕಂಗಾಲಾಗಿರುವುದರ ನಡುವೆಯೇ ಹಾಯಾಗಿ ಇರುವುದು ಮಾತ್ರ ಜಡ್ಡುಗಟ್ಟಿದ ಅಧಿಕಾರ ಯಂತ್ರ. ಮಳೆ ಬಂದರೆ ಬೀಜ ಹಾಗೂ ಗೊಬ್ಬರಕ್ಕಾಗಿ ಮುಗಿಬೀಳುವ ರೈತಾಪಿ ವರ್ಗದ ತೊಂದರೆ ಇಲ್ಲವಲ್ಲಾ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ನಿರುಮ್ಮಳರಾಗಿ ಕುಳಿತಿದ್ದಾರೆ. 'ಬಿತ್ತನೆ ಬೀಜ-ಗೊಬ್ಬರ ದಾಸ್ತಾನಿಟ್ಟು ರೈತರು ಬರುವುದನ್ನು ನಾವು ಕಾಯುತ್ತಿದ್ದೇವೆ' ಎನ್ನುವುದು ಕೃಷಿ ಇಲಾಖೆ ಅಧಿಕಾರಿಗಳ ಹೇಳಿಕೆ. 'ಜಿಲ್ಲೆಗೆ ಬಿಡುಗಡೆಯಾಗಿರುವ 12 ಸಾವಿರ ಟನ್ ರಸಗೊಬ್ಬರದಲ್ಲಿ 4 ಸಾವಿರ ಟನ್ ಇನ್ನೂ ದಾಸ್ತಾನಿದೆ ಎನ್ನುತ್ತಾರೆ' ಕೋಲಾರ ಜಿಲ್ಲೆಯ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಿ.ಚಿಕ್ಕಣ್ಣ.

ಆದರೆ ಬೀಜ ರಸಗೊಬ್ಬರ ದಾಸ್ತಾನು ಇದೆ ಎಂದು ಸಂಭ್ರಮಪಟ್ಟುಕೊಳ್ಳುವ ಅಧಿಕಾರಿಗಳು- ಕೃಷಿ ಇಲಾಖೆಯೇ ಇರಲಿ, ಜಿಲ್ಲಾಡಳಿತವೇ ಇರಲಿ, ಅಥವಾ ಜಿಲ್ಲಾ ಪಂಚಾಯತ್ ಆಗಿರಲಿ ಮುಂಗಾರು ವಿಫಲವಾಗಿ ಬರದ ಛಾಯೆ ಆವರಿಸುತ್ತಿರುವಾಗ ಕೈಗೊಳ್ಳಬೇಕಾದ ಮುಂಜಾಗ್ರತೆ ಬಗ್ಗೆ ಚಿಂತಿಸುವ ಗೋಜಿಗೆ ಹೋಗದಿರುವುದು ಅವೈಜ್ಞಾನಿಕವಾಗಿದೆ. ಮಾತ್ರವಲ್ಲ ಅಮಾನವೀಯವಾಗಿದೆ.

'ರಾಜ್ಯದ ಕರಾವಳಿ ಮತ್ತು ಉತ್ತರ ಕರ್ನಾಟಕದ ಕೆಲವೆಡೆ ಅತಿವೃಷ್ಟಿಯಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ತಲೆಕೆಡಿಸಿಕೊಂಡಂತೆ ತೋರಿಸಿಕೊಳ್ಳುವ ಸರ್ಕಾರ ಅನಾವೃಷ್ಟಿಯಿಂದ ಉದ್ಭವಿಸಿರುವ ಗಹನ ಪರಿಸ್ಥಿತಿಯನ್ನು ಕಡೆಗಣಿಸಿರುವುದು ಖಂಡನೀಯ' ಎನ್ನುತ್ತಾರೆ. ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣ.

ಜಿಲ್ಲೆಯನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಿಸುವುದು ಒತ್ತಟ್ಟಿಗಿರಲಿ, ಆ ನಿಟ್ಟಿನಲ್ಲಿ ಪ್ರಾಥಮಿಕ ಅಧ್ಯಯನವನ್ನಾದರೂ ಅಧಿಕಾರಿವರ್ಗ ಮಾಡಿದೆಯೋ ಇಲ್ಲವೋ ಎನ್ನುವ ಅನುಮಾನ ಕಾಡುತ್ತಿದೆ ಎಂದು 'ಸೂರಿ' ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಈಗಾಗಲೇ ಬೆಲೆ ಕುಸಿತ, ವಿದ್ಯುತ್ ಕಡಿತ, ನೀರಿನ ಅಭಾವ ಮೊದಲಾದ ಸಮಸ್ಯೆಗಳಿಂದ ಜರ್ಝರಿತವಾಗಿರುವ ರೈತ ಸಮೂಹವನ್ನು ಪಾರು ಮಾಡಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ಚಟುವಟಿಕೆಗಳು ಇಲ್ಲದೆ ಕೆಲಸವಿಲ್ಲದೆ ಬಸವಳಿಯುತ್ತಿರುವ ಕೃಷಿ ಕೂಲಿಕಾರರ ಬವಣೆ ನೀಗಲೂ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ರೇಗಾ)ಯ ಸದುಪಯೋಗ ಪಡೆದು ಬಡಜನರ ಕಣ್ಣೀರನ್ನು ಒರೆಸಲು ಅಧಿಕಾರಿಗಳು ಮುಂದಾಗಬೇಕಿದೆ.

● ವಿಕ್ರಾಂ

ಕೊಪ್ಪಳ : ರೈತ - ಕೂಲಿಕಾರರ ಗುಳೆ

ರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲೊಂದಾದ ದ್ರಾಬಾದ್ ಕರ್ನಾಟಕ ಬರಗಾಲ ಜಿಲ್ಲೆ ಎಂದು ಸರುವಾಸಿಯಾದ ಕೊಪ್ಪಳ ಜಿಲ್ಲೆಯು ಈ ವರ್ಷ ರಗಾಲಕ್ಕೆ ತುತ್ತಾಗಿದೆ. ಮಳೆಗಾಲ ಆರಂಭದಲ್ಲಿ ಚಿತವಾಗಿ ಮಳೆಯು ಆರಂಭವಾಯಿತು. ತ-ಕೂಲಿಕಾರರಲ್ಲಿ ಹರ್ಷದ ನಗೆ ಹೊರಸೂಸಿತು. ತ್ತನೆ ಕಾರ್ಯ ಆರಂಭಗೊಂಡವು. ಯಲಬುರ್ಗಾ, ಷ್ಟಗಿ, ಕೊಪ್ಪಳದಲ್ಲಿ ಶೇ.75 ಬಿತ್ತನೆ ಕಾರ್ಯ ುಗಿದವು. ಗಂಗಾವತಿ ತಾಲ್ಲೂಕಿನಲ್ಲಿ ಸ್ವಲ್ಪ ಡವಾಗಿ ಬಿತ್ತನೆ ಕಾರ್ಯ ನಡೆಯಿತು. ರೈತರಿಗೆ ನುಕೂಲವಾದ ರೋಹಿಣಿ ಮಳೆ ಸಕಾಲದಲ್ಲಿ ರಿಯಿತು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬಿತ್ತನೆ ರ್ಯಗಳು ಪೂರ್ತಿ ಮುಗಿದವು. ಪೈರು ಚೆನ್ನಾಗಿ ಂದಿತು. ರೈತರು ಬಹಳ ಆನಂದದಿಂದ ಇದ್ದರು.



ದರೆ ಈ ಆನಂದ ಬಹಳ ದಿನಗಳು ಉಳಿಯಲಿಲ್ಲ. ುಂದಿನ ಮೃಗಶಿರಾ, ಆರಿದ್ರಾ ಮಳೆಗಳು ುರಿಯಲಿಲ್ಲ. ಪೈರು ಒಣಗಲಿಕ್ಕೆ ಆರಂಭವಾಯಿತು. ದರೊಂದಿಗೆ ಸಣ್ಣ ಬೆಳೆಗೆ ಕ್ರಿಮಿಕೀಟಗಳ ಬಾಧೆ ರಂಭವಾಯಿತು.ಮಿಡತೆಗಳ ಹಾವಳಿ ಹೆಚ್ಚಾಯಿತು. ುಲಬುರ್ಗಾ ತಾಲ್ಲೂಕಿನಲ್ಲಿ ಬೆಳೆದ ಬೆಳೆಯನ್ನು ಂಕೆಗಳು (ಚಿಗರಿ) ತಿಂದು ಹಾಳು ಮಾಡಿದವು.

ಮೋಡಗಳು ರೈತನ ಜೀವನದಲ್ಲಿ ಟವಾಡಿದವು. ಮೋಡಗಳನ್ನು ನೋಡುವುದೇ ನರ ನಿತ್ಯದ ಕಾಯಕವಾಯಿತು. ಮಳೆಯು ಇಲ್ಲಿಯ ನಕ ಬರಲೇ ಇಲ್ಲ. ಕೆಂಪುಮಣ್ಣಿನ ಪ್ರದೇಶದಲ್ಲಿ ುಂಗಾರು ವಿಫಲವಾಯಿತು. ಗಾಳಿ ಬಿಸಿಲು ಧಿಕವಾಯಿತು. ಸಣ್ಣ, ಮಧ್ಯಮ ರೈತರ ಾನುವಾರುಗಳಿಗೆ ಮೇವು ಸಿಗದಾಯಿತು. ಸಂಗ್ರಹ ಾಡಿಟ್ಟದ್ದು ಮುಗಿದು ಹೋಯಿತು. ಅಂತರ್ಜಲ ಡಿಮೆಯಾಯಿತು. ಕೊಳವೆ ಬಾವಿ ಕೊರೆಯಿಸಿ ೀರಾವರಿ ಮಾಡಿದ ರೈತರಿಗೆ ಭೂಮಿಗೆ ನೀರುಣಿಸಲು ುಖ್ಯವಾಗಿ ವಿದ್ಯುತ್ ಅವಶ್ಯಕತೆ ಇದ್ದು, ಅದು ನದ 24 ತಾಸುಗಳಲ್ಲಿ ಕೇವಲ 10 ತಾಸು ದ್ಯುತ್‌ನಲ್ಲಿ 5 ತಾಸು 3 ಫೇಸ್ 5 ತಾಸು ಸಿಂಗಲ್ ಸ್ ಹೀಗೆ ಕರ್ನಾಟಕ ಸರ್ಕಾರವು ರೈತರಿಗೆ ಕೃತಕ ರಗಾಲ ಸೃಷ್ಟಿ ಮಾಡಿತು. ಕೂಲಿಕಾರರ ಜೀವನ ೀಳತೀರದಷ್ಟು ಕಷ್ಟಮಯವಾಯಿತು. ಬರಗಾಲ ಮುಗಾರಿ ಆರಂಭಿಸಬೇಕಾದ ಸರ್ಕಾರ ಉದ್ಯೋಗ ತ್ರಿ ಯೋಜನೆ ಅಡಿಯಲ್ಲಿ ಕೆಲವು ಕಡೆಗೆ ರಂಭಿಸಿತು. ಕೊಪ್ಪಳ ಯಲಬುರ್ಗಾದಲ್ಲಿ ಈ ೋಜನೆ ಸಮರ್ಪಕವಾಗಿ ಜಾರಿಯಾಗಲಿಲ್ಲ. ಈ ೋಜನೆ ಜಾರಿಗೊಳಿಸಲು ಜನಪ್ರತಿನಿಧಿಗಳು ಆಸಕ್ತಿ ವಹಿಸಲಿಲ್ಲ. ಅಧಿಕಾರಿಗಳೂ ಸಹಿತ ನಿರ್ಲಕ್ಷ್ಯ ಭಾವನೆ ತಾಳಿದರು. ಕುಷ್ಟಗಿ, ಗಂಗಾವತಿ ತಾಲ್ಲೂಕುಗಳಲ್ಲಿ ಭಾಗಶಃ ಜಾರಿಯಾಯಿತು. ಈ ಕೆಲಸದೊಂದಿಗೆ ಭ್ರಷ್ಟಾಚಾರವು ಹೆಚ್ಚಾಯಿತು. 2009-10ನೇ ಸಾಲಿನಲ್ಲಿ ಜೂನ್ ತಿಂಗಳ ಮುಗಿಯುವುದರೊಳಗಾಗಿ 100 ದಿವಸ ಕೆಲಸ ಪೂರೈಸಿರುವುದಾಗಿ ದಾಖಲೆಗಳು ಸೃಷ್ಟಿಯಾದವು. ಹಣ ಲೂಟಿಯಾಯಿತು. ರೈತರ ಹೊಲಗಳಿಗೆ ಒಡ್ಡುಹಾಕುವುದು, ಕೃಷಿ ಹೊಂಡ ಮಾಡುವುದನ್ನು ಶ್ರೀಮಂತ ರೈತರು ಫೋಟೋ ತೆಗೆಯಿಸಿ ಕೆಲಸ ಮಾಡಲಾರದೇ ಹಣ ಪಡೆದುಕೊಂಡರು.

ಗುಳೇ ಹೊಂಟಾರ

ಕೂಲಿಕಾರರಿಗೆ ಕೆಲಸ ಸಿಗದಾಯಿತು. ಒಂದು ಕಡೆಗೆ ರೈತರ ಹೊಲಗಳಲ್ಲಿ ಕೆಲಸ ಮಾಡಬೇಕೆಂದರೆ ಮಳೆಯು ಇಲ್ಲದೇ ಬೆಳೆ ಒಣಗಿ ಹೋಗಿದ್ದರಿಂದ ಅಲ್ಲಿ ಕೆಲಸವಿಲ್ಲ. ಸರ್ಕಾರ ಕೆಲಸ ಕೊಡುತ್ತದೆಂದು ಕೇಳಿದರೆ ಕೆಲಸ ಕೊಡಲಿಲ್ಲ. ಕೆಲಸ ಕೇಳಲಿಕ್ಕೂ ಪ್ರತಿಭಟನೆ, ಖಾತೆ ತೆರೆಯಲು ಪ್ರತಿಭಟನೆ, ಕೂಲಿ ಪಡೆಯಬೇಕೆಂದರೂ ಪ್ರತಿಭಟನೆ ಹೀಗೆ ಹಲವಾರು ಸಲ ಪ್ರತಿಭಟನೆ ಮಾಡಿದಾಗ ಗ್ರಾಮ ಪಂಚಾಯತ್‌ಗಳು ಕೇವಲ ಶೇ.20 ಜನ ಕೂಲಿಕಾರರಿಗೆ ಕೆಲಸಗಳನ್ನು ಕೊಟ್ಟು ಕೂಲಿಯನ್ನು 2-3ತಿಂಗಳಾದ ಮೇಲೆ ಪಡೆಯುವಂತಾಯಿತು. ವಾರಕ್ಕೆ ಒಂದು ಸಾರಿ ಕೂಲಿ ಪಡೆದು ಜೀವನ ಸಾಗಿಸುತ್ತಿದ್ದ ಕೂಲಿಕಾರರಿಗೆ ಈ ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಭರವಸೆ ಉಳಿಯಲಿಲ್ಲ. ಹೊಟ್ಟೆ ಪಾಡಿಗಾಗಿ ಮುಂದಿನ ದಾರಿ ಕಾಣದೇ ವಲಸೆ ಆರಂಭವಾಯಿತು. ಗುಲ್ಬರ್ಗಾ ಜಿಲ್ಲೆ ಕಡೆಗೆ ಮತ್ತು ಗಣಿ ಪ್ರದೇಶವಾದ ಬಳ್ಳಾರಿ ಜಿಲ್ಲೆಗೆ, ಮಂಗಳೂರು, ಬೆಂಗಳೂರು ಕಡೆಗೆ ಜನ ತಮ್ಮ ಮಕ್ಕಳು ಮರಿಯೊಂದಿಗೆ ಗುಳೇ ಹೊರಟಿದ್ದಾರೆ. ವಯಸ್ಸಾದ ತಂದೆ-ತಾಯಿಗಳನ್ನು ಮನೆಯಲ್ಲಿ ಬಿಟ್ಟು ಹೋದರು. ಇವರಿಗೆ ಇಲ್ಲಿ ಉಪವಾಸವಾದರೆ ವಲಸೆ ಹೋದಲ್ಲಿ ಕೆಲಸ ಸಿಗವಾರದೇ ಅವರು ಅಲ್ಲಿ ಉಪವಾಸ. ಹೀಗೆ ಎಲ್ಲಾ ಕೂಲಿಕಾರರು ಉಪವಾಸ ಬೀಳುವಂತಾಗಿದೆ.

ಗಂಗಾವತಿ ತಾಲ್ಲೂಕಿನಲ್ಲಿಯೂ ಸಹಿತ ಇದಕ್ಕೆ ಹೊರತಾಗಿಲ್ಲ. 38 ಗ್ರಾಮ ಪಂಚಾಯತ್‌ಗಳ ಪೈಕಿ 26 ಗ್ರಾಮ ಪಂಚಾಯತ್ ನೀರಾವರಿ ಪ್ರದೇಶದಲ್ಲಿ ಕೇವಲ 12 ಗ್ರಾಮ ಪಂಚಾಯತ್‌ಗಳು ಒಣ ಬೇಸಾಯದ ಹೋಬಳಿಗಳಾದ, ವೆಂಕಟಗಿರಿ, ಕನಕಗಿರಿ, ಹುಲಿಹೈದರ, ನವಲಿ ಉದ್ಯೋಗಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಗೊಳಿಸಲಿಲ್ಲ. ಇಲ್ಲಿಯ ಶಾಸಕರು ಮಂತ್ರಿಗಳಾಗಿದ್ದರೂ ಅವರಿಗೆ ಕೂಲಿಕಾರರ ಬಗ್ಗೆ, ಈ ಯೋಜನೆ ಜಾರಿಗೊಳಿಸುವ ಬಗ್ಗೆ ಯಾವುದೇ ಕಾಳಜಿ ಇಲ್ಲ. ಹೀಗೆ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರವೆದ್ದಿದೆ.

ಪುಟ 15ಕ್ಕೆ

ಬೀದರ್ ಬರ : ಬಣ್ಣಿಸಲಾಗದ ಬವಣೆ

ಉತ್ತರ ಕರ್ನಾಟಕ ಅದರಲ್ಲೂ ಹೈದ್ರಾಬಾದ ಕರ್ನಾಟಕದ ಬಹುತೇಕ ಜಿಲ್ಲೆಗಳು ಈ ಬಾರಿ ಭೀಕರ ಬರಗಾಲ ಎದುರಿಸುತ್ತಿವೆ. ಬಂಜೆ ಮೋಡಗಳಿಗೆ ಬಾಯಾರಿ ನಿಂತ ನೆಲ, ಜನ, ಜಾನುವಾರುಗಳು ಬದುಕಿನ ಕನಿಷ್ಠ ಆಸೆ ಕಳೆದುಕೊಂಡು ಕಂಗಾಲಾಗಿವೆ. ಮುಂಗಾರು ಸಂಪೂರ್ಣ ಕೈಕೊಟ್ಟು ಖರೀಫ್ ಬೆಳೆ ಹೇಳ ಹೆಸರಿಲ್ಲದಷ್ಟು ಹಾಳಾಗಿ ಹೋಗಿವೆ. ಅಸದಳ ನಿರಾಶೆಯ ನಡುವೆಯು ಛಲ ಬಿಡದ ತ್ರಿವಿಕ್ರಮದಂತೆ ಉದ್ದು, ಹೆಸರು, ಎಳ್ಳು ಮುಂತಾಗಿ ಬಿತ್ತಿದ ಬಿಜಗಳ ನೆಲದಲ್ಲಿ ಇಂಗಿ ಹೋಗಿವೆ. ಪ್ರತಿಶತ 80 ಕೃಷಿ ಭೂಮಿಯಲ್ಲಿ ಬಿತ್ತನೆಯೇ ಆಗಿಲ್ಲ. ಪ್ರತಿಶತ 20 ವೃಷ್ಟಿ ಹರಿಸಿದಷ್ಟೂ ಭೂಮಿ ಬರಿದೋ ಬರಿದು. ನೆಲವೆಂಬ ನೆಲವೆಲ್ಲ ಸುಡುಗಾಡು ಎತ್ತ ನೋಡಿದತ್ತ ನೀರೆಂಬ ನೀರಿಗೆ ನೀರಡಿಕೆಯಾದಂತೆ ಜಲಧಾರೆಗಳು ಬತ್ತಿ ಹೋಗಿವೆ. ಒಂದು ಸೂಡು ಮೇವಿಗೆ ರೂ. 20-30. ಎತ್ತು, ಎಮ್ಮೆ ಕುರಿಗಳನ್ನು ಮನೆ ಬಿಟ್ಟು ಓಡಿಸುತ್ತಿರುವ ದೃಶ್ಯ ಹೃದಯವಿದ್ರಾವಕ. ರೇಷನ್ ಅಂಗಡಿಗಳಲ್ಲಿ ದವಸ ಧಾನ್ಯಗಳು ನಾಪತ್ತೆ. ಉದ್ಯೋಗ ಖಾತ್ರಿ ಅಡಿಯಲ್ಲಿ ಕೆಲಸವೇ ಕೊಡುತ್ತಿಲ್ಲ. ನಿರಂತರ ಹೋರಾಟ ಸಂಘರ್ಷದ ಮೂಲಕ ಕೆಲಸ ಪಡೆದಿರುವಲ್ಲಿಯೂ ಕೂಲಿ ಹಣ ಕೊಟ್ಟಿಲ್ಲ. ದಿನವಸ್ತುಗಳ ಬೆಲೆ ಹುಚ್ಚು ಹಿಡಿಸುವಷ್ಟು ಏರಿದೆ. ಕಿಲೋ ಅಕ್ಕಿಗೆ ರೂಪಾಯಿ 30 ರಿಂದ 40, ಕಿಲೋ ತೊಗರಿಗೆ ರೂ. 90 ರಿಂದ 100, ಎಣ್ಣೆ, ಸಕ್ಕರೆ ದಿನ ನಿತ್ಯ ವಸ್ತುಗಳ ಬೆಲೆ ಮಾತಿನಲ್ಲಿ ಹೇಳಲು ಎದೆ ಒಡೆಯುತ್ತಿದೆ. ಕೂಲಿಕಾರರು ಗುಳೆ ಹೋಗುವ ಅನಿವಾರ್ಯತೆಗೆ ಒಳಗಾಗಿದ್ದಾರೆ.



ರೈತರು ಆತ್ಮಹತ್ಯೆಯತ್ತ ಸಾಗುತ್ತಿದ್ದಾರೆ. ಯುವಕರು, ಮಹಿಳೆಯರು, ವಿದ್ಯಾರ್ಥಿಗಳು ದಿಕ್ಕಿಲ್ಲದೆ ಪರದೇಶಿಗಳಂತೆ ಸಾಗುತ್ತಿದ್ದಾರೆ. ಹತಾಶ ಸ್ಥಿತಿಯಲ್ಲಿದ್ದಾರೆ. ಇಂತಹ ಭೀಕರ ಹೃದಯ ವಿದ್ರಾವಕ ಸ್ಥಿತಿಯಲ್ಲಿಯೂ ಸರಕಾರ ಕಣ್ಣು ತೆರೆಯುತ್ತಿಲ್ಲ ಎಂದಾದರೆ ಇದಕ್ಕಿಂತ ದುರಂತ ಇನ್ನೊಂದು ಇರಲಾರದು. ಒಂದೆಡೆ ರಾಜ್ಯ ಸರಕಾರ ಬರಗಾಲವೇ ಇಲ್ಲವೆಂದು ಹೇಳುತ್ತಿರುವುದು. ಇನ್ನೊಂದೆಡೆ ಬರಗಾಲ ಪರಿಹಾರಕ್ಕೆ ರಾಜ್ಯ ಸರಕಾರಗಳು ಸಹಾಯವೇ ಕೇಂದ್ರಕ್ಕೆ ಕೇಳಿಲ್ಲವಲ್ಲ ಎಂದು ಹೇಳುತ್ತಿರುವ ಕೇಂದ್ರ ಸರಕಾರ, ಇವರೆಲ್ಲ ಅಕ್ಷರಶಃ ಜನದ್ರೋಹಿಗಳಲ್ಲವೇ ? ಇಂತಹ ಸ್ಥಿತಿಯಲ್ಲಿ ಜನತೆಯ ಮುಂದೆ ಉಳಿದಿರುವ ದಾರಿ ಎಂದರೆ ಒಂದೇ ಒಂದು. ಅದು ಹೋರಾಟ.

ಹಕ್ಕೊತ್ತಾಯಗಳು

1. ಬೀದರ ಜಿಲ್ಲೆಯನ್ನು ಸಂಪೂರ್ಣ ಭೀಕರ ಬರಪಿಡಿತವೆಂದು ಘೋಷಿಸಬೇಕು.
2. ನಗರ ಮತ್ತು ಗ್ರಾಮೀಣ ಮಟ್ಟದಲ್ಲಿ ತಕ್ಷಣವೇ ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಬೇಕು.
3. ಯಾವುದೇ ನಿರ್ಬಂಧವಿಲ್ಲದೇ ಎಲ್ಲರಿಗೂ ಸಾರ್ವತ್ರಿಕವಾಗಿ 2 ರೂಪಾಯಿ ಕಿಜಿಯಂತೆ ಅಕ್ಕಿ, ಗೋಧಿ, ಜೋಳ, ಬೇಳೆ ವಿತರಿಸಬೇಕು.
4. ಜಾನುವಾರುಗಳಿಗಾಗಿ ಪ್ರತಿ ಗ್ರಾಮ ಪಂಚಾಯತಗಳಲ್ಲೂ ಮೇವು ಕೇಂದ್ರವನ್ನು ಪ್ರಾರಂಭಿಸಬೇಕು.
5. ರೈತರ ಕೃಷಿ ಭೂಮಿಗೆ ಎಕರೆಗೆ ಕನಿಷ್ಠ 20000/- ರೂಪಾಯಿಯಂತೆ ಪರಿಹಾರ ಧನ ನೀಡಬೇಕು.
6. ಶುದ್ಧವಾದ ಕುಡಿಯುವ ನೀರನ್ನು ಪೂರೈಸಬೇಕು.
7. ಯಾವುದೇ ನಿರ್ಬಂಧವಿಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ ಕಾಯಿದೆ ಯಂತೆ ತಕ್ಷಣವೇ ಕೆಲಸ ಕೊಡಬೇಕು. ವಾರದೊಳಗಾಗಿ ಕೂಲಿ ಹಣ ಪಾವತಿಸಬೇಕು. ಬರಗಾಲದ ವಿಶೇಷ ಯೋಜನೆಯಡಿ 100 ದಿನದ ಅವಧಿಯನ್ನು 200 ದಿನಕ್ಕೆ ಹೆಚ್ಚಿಸಬೇಕು. ಕೂಲಿ ದರವನ್ನು 150/- ರೂಪಾಯಿಗೆ ಏರಿಸಬೇಕು.
8. ಈ ಸಾಲಿಗೆ ಸರಕಾರಿ, ಸರಕಾರೇತರ ಶಾಲಾ ಕಾಲೇಜುಗಳಲ್ಲಿ ಶುಲ್ಕವನ್ನು ರದ್ದುಪಡಿಸಿ ಸಂಪೂರ್ಣ ಉಚಿತ ಶಿಕ್ಷಣ ನೀಡಬೇಕು. ಪ್ರಯಾಣ ಬಸ್ ಪಾಸ್ ಪ್ರಾಥಮಿಕದಿಂದ ಪದವಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಚಿತ ಬಸ ಪಾಸ್ ಕೊಡಬೇಕು.
9. ಶೂನ್ಯ ಠೇವಣಿಯಲ್ಲಿ ಬ್ಯಾಂಕ್‌ನಲ್ಲಿ ಅಕೌಂಟ್ ತೆಗೆಯುವುದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.
10. ಉದ್ಯೋಗ ಖಾತ್ರಿ ಕಾಯಿದೆ ಜಾರಿಗೊಳಿಸದ ಸಿಬ್ಬಂದಿಯ ಮೇಲೆ ಉಗ್ರ ಕ್ರಮ ಕೈಗೊಳ್ಳುವುದು.
11. ಎರಡು ವರ್ಷದಿಂದ ತಡೆಹಿಡಿದ ಗ್ರಾಮ ಪಂಚಾಯತ ನೌಕರರ ವೇತನ ಕೂಡಲೇ ಪಾವತಿಸಬೇಕು.

ಈ ಮೇಲಿನೆಲ್ಲ ಬೇಡಿಕೆಗಳನ್ನಿಟ್ಟು ಈಗಾಗಲೇ ಹಲವು ಹಂತಗಳಹೋರಾಟ ನಡೆದಿವೆ. ಆಗಸ್ಟ್ 17 ರಂದು ಸಿಪಿಐ(ಎಂ) ನಿಂದ ನಡೆಯುವ ಹೋರಾಟದಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಬೃಂದಾಕಾರಟ್ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ಕನ್ನಡದ ಚಾನೆಲ್‌ಗಳಲ್ಲಿ ಇತ್ತೀಚೆಗೆ ಆರಂಭಗೊಂಡಿರುವ 'ಇದು ಕಥೆಯಲ್ಲ ಜೀವನ' ಹಾಗೂ 'ಬದುಕು ಜಟಕಾ ಬಂಡಿ' ಕೌನ್ಸಿಲಿಂಗ್ ಕಾರ್ಯಕ್ರಮಗಳು ಹಲವಾರು ಮಿತಿ ಹಾಗೂ ದೌರ್ಬಲ್ಯಗಳ ನಡುವೆ ಗಮನ ಸೆಳೆಯುತ್ತಿವೆ. ಪರಿಹಾರಗಳು ಯಥಾಸ್ಥಿತಿಯ ಚೌಕಟ್ಟಿನಲ್ಲಿವೆಯಾದರೂ ಕಣ್ಣೀರ ಧಾರೆಯಂತಹ ಸಿದ್ಧ ಸೂತ್ರಗಳ ಏಕತಾನ ಹಣೆಯುವಿಕೆ ನಡುವೆ ಕನಿಷ್ಠ ಬದುಕಿನ ವಾಸ್ತವಗಳು ಬಿಚ್ಚಿಕೊಳ್ಳುತ್ತಿವೆ. ಈ ಕಾರ್ಯಕ್ರಮಗಳು 'ಮಾರುಕಟ್ಟೆ' ಹಿತಗಳ ಸುಳಿಯಲ್ಲಿ ಎಷ್ಟು ದಿನ ತನ್ನ ಕಾವು ಉಳಿಸಿಕೊಂಡಾವು?

ಜೀವನದ ಕಥೆ

ಸಮಸ್ಯೆಗಳ ಅನಾವರಣ-ಯಥಾಸ್ಥಿತಿ ಪರಿಹಾರ

ಎಸ್.ವೈ. ಗುರುಶಾಂತ್

ಕಣ್ಣೀರು ಹರಿಸೋದೇ ತಮ್ಮ ಧಾರವಾಹಿಗಳ ಯಶಸ್ಸಿನ ಗುಟ್ಟು ಎಂದೇ ಟಿ.ವಿ. ಚಾನೆಲ್‌ನ ಬಹುತೇಕರು ಗಟ್ಟಿಯಾಗಿ ನಂಬಿ ಸಿದ್ಧಸೂತ್ರಕ್ಕೆ ಅಂಟಿಕೊಂಡುಬಿಟ್ಟಿದ್ದಾರೆ. ಏಕತಾನತೆಯ ಆತಂಕವಿದ್ದರೂ ಅವರ್ಯಾರೂ ಈ 'ಪಾಲಿಸಿ'ಯನ್ನು ಕೈಬಿಡಲು ಸಿದ್ಧರಿಲ್ಲ. ಇದು ಕೇವಲ ಕನ್ನಡದ ಚಾನಲ್‌ಗಳಷ್ಟೇ ಅಲ್ಲ, ತಮಿಳು, ತೆಲುಗು, ಹಿಂದಿ... ಇವುಗಳ ಕಥೆಯೂ ಅಷ್ಟೆ. ಈ 'ಟ್ರೆಂಡ್' ಧಾರವಾಹಿಗಳಿಂದ ಹಿಡಿದು ಈಗೀಗ 'ಜನಪ್ರಿಯ'ವಾಗುತ್ತಿರುವ ಡ್ಯಾನ್ಸ್, ಕೌನ್ಸಿಲಿಂಗ್ ತರಹದ ಹಲವು ರಿಯಾಲಿಟಿ ಶೋಗಳಿಗೂ ವಿಸ್ತರಿಸಿದೆ. ಕನ್ನಡ ಚಾನೆಲ್‌ಮಟ್ಟಿನಲ್ಲಿ ಹೇಳುವುದಾದರೆ ಇತರೆ ಚಾನೆಲ್‌ಗಳ ಕಾರ್ಯಕ್ರಮಗಳ ಅನುಕರಣೆ ನಡೆದೇ ಇದೆ. ದೇಶದ ಹಲವು ಭಾಷೆಗಳಲ್ಲಿರುವ ಧಾರಾವಾಹಿಗಳ ಧಾಟಿ, ಅವುಗಳ ಪರಿಣಾಮಗಳು ಭಿನ್ನವಾಗಿಲ್ಲ.

ರೋಚಕತೆ

ನಮ್ಮ ಕನ್ನಡದ ಧಾರವಾಹಿಗಳ ಬಹಳಷ್ಟು ಪಾತ್ರಗಳು ಯಥೇಚ್ಛವಾಗಿ ಅಳುವುದಲ್ಲದೇ ಪ್ರೇಕ್ಷಕರ ಕಣ್ಣೀರು ತೊಟ್ಟಿಕ್ಕುವಂತೆ ಮಾಡುತ್ತವೆ. ಈ ಪಾತ್ರಗಳು ಬಹುತೇಕವಾಗಿ ಮಹಿಳೆಯರದ್ದೇ ಆಗಿರುತ್ತವೆ. ಈ ಧಾರವಾಹಿಗಳ ಕಥಾವಸ್ತುವು ಜೀವನದ ಒಂದು ಭಾಗದಲ್ಲಿನ ಕೆಲ ಕಹಿ ಸತ್ಯಗಳನ್ನು ಉದ್ದೇಶಿಸಿವೆ ಎಂಬಂತೆ ಕಂಡರೂ ಅವು ಅತೀ ಬಣ್ಣ ಬಳಿಸಿಕೊಂಡೋ ಅಥವಾ ರೋಚಕಗೊಳಿಸುವ ಆತುರದಲ್ಲಿ ಅತೀರಂಜಿತವಾಗಿ ವಿಜೃಂಭಿತವಾಗಿಯೋ ನೋಡುಗರ ಹೃದಯಗಳನ್ನು ಹಿಂಡುತ್ತಾ ನಾಳೆ ಮತ್ತೆ ನೋಡಬೇಕೆನ್ನುವ ಕುತೂಹಲ ಉಳಿಸಿ ನಾಳೆಗೆ ಪ್ರೇಕ್ಷಕರನ್ನು ಗ್ಯಾರಂಟಿ ಮಾಡಿಕೊಳ್ಳುವ ಒತ್ತಡದ ವರಸೆಯಲ್ಲೇ ಇರುತ್ತವೆ. ಹೀಗಾಗಿ ಪ್ರೇಕ್ಷಕರ ಮೇಲೆ ಗಾಢ ಪರಿಣಾಮ ಬೀರಿ ಸಮಸ್ಯೆಗಳ ಮೂಲಕ್ಕೆ ಹೋಗುವುದಾಗಲೀ, ಸಕಾರಾತ್ಮಕವಾಗಿ ಕ್ರಿಯಾಶೀಲಗೊಳಿಸುವಲ್ಲಾಗಲೀ ವಿಫಲವಾಗುತ್ತವೆ. ಹೀಗಾಗಿ ಧಾರವಾಹಿ ಪ್ರೇಕ್ಷಕರ ನಿಜ ಬದುಕಿನ ನಡುವೆ ವ್ಯತ್ಯಾಸ ಪರಕೀಯತೆಗೆ ಉಳಿದುಬಿಡುತ್ತದೆ.

ಸೂತ್ರದ ಶೂಲದಲ್ಲಿ ಮಹಿಳೆಯೇ

ಇದಕ್ಕೆ ಕೆಲವು ಅಪವಾದಗಳು ಇರಬಹುದಾದರೂ ಬಹುತೇಕ ಒಂದೇ ತರಹದ ಸೂತ್ರ ಬಂಧಿಗಳು. ಕೌಟುಂಬಿಕ ಸಮಸ್ಯೆಗಳು, ಆರ್ಥಿಕ ಬಿಕ್ಕಟ್ಟು, ಅಹಂಗಾರಿಕೆ, ಸಂಪತ್ತಿನ ಅಸಹ್ಯ ಪ್ರದರ್ಶನಗಳು ಮೌಲ್ಯಗಳ ಸಂಘರ್ಷ, ಮೌಢ್ಯತೆ (ದೇವರು ದೆವ್ವಗಳಿಗೆ ಜೀವನ ತುಂಬುವ ಭರಾಟೆ) ಮಾತ್ರವಲ್ಲ ಕಾರ್ಪೊರೇಟ್ ಕಂಪನಿ ಕುಟುಂಬಗಳ ಶೈಲಿ, ಆಸ್ತಿ ಪೈಪೋಟಿ ಅಹಂಕಾರಿಕೆ, ಮೇಲರಿಮೆಯ ಘರ್ಷಣೆಗಳ ಧಾರವಾಹಿಗಳು ಕನ್ನಡದಲ್ಲಿ ಯಥೇಚ್ಛವಾಗಿವೆ. ಮಹಿಳೆಯರ ವಿಷಯದಲ್ಲಂತೂ ಮಹಿಳೆಯರನ್ನು ಅಲ್ಲಗಳೆದು, ಕೀಳಾಗಿ ಚಿತ್ರಿಸುವಂತಹ ಪಾಳೇಗಾರಿ ಮೌಲ್ಯಗಳ ಪ್ರತಿಪಾದನೆಯೇ ಪ್ರಧಾನವಾಹಿನಿ. ಅದರಲ್ಲೂ



'ಹೆಣ್ಣಿಗೆ ಹೆಣ್ಣೇ ಶತ್ರು' ಎಂದು ಹಾದಿ ತಪ್ಪಿಸುವ ವ್ಯವಸ್ಥೆಯ ನೀಚ ಕುತಂತ್ರದ ವಾದವೇ ಈ ಧಾರವಾಹಿಗಳಲ್ಲಿ ಎದ್ದುಕಾಣುತ್ತವೆ. ಇನ್ನು ಟಿ.ವಿ.ಗಳಲ್ಲಿನ ಹಿಂದಿ ಧಾರವಾಹಿಗಳಲ್ಲಂತೂ ಈ ವಾದ ಗರಿಷ್ಠ ಮಟ್ಟ ಮುಟ್ಟುತ್ತಿದೆ. ಎಲ್ಲಾ ಬಗೆಯ ಸ್ತ್ರೀ ಶೋಷಣೆ, ಹೆಣ್ಣು ಭ್ರೂಣ ಹತ್ಯೆಗಳಂತಹ ಗಂಭೀರ ವಸ್ತುವುಳ್ಳ 'ಬಾಲಿಕಾವಧು' 'ಲಾಡ್ಲೆ'ಯಂತಹ ಧಾರವಾಹಿಗಳಲ್ಲಿಯೂ ಅದೇ ವಾದವು ಮಡುವುಗಟ್ಟಿದೆ. ಈ ಧಾರವಾಹಿಗಳಲ್ಲಿ ಸ್ತ್ರೀ ಶೋಷಣೆಯ ಪಾಳೆಗಾರಿ ಮೌಲ್ಯಗಳ ದೃಢ ಪ್ರತಿಪಾದನೆ, ಅವುಗಳನ್ನು ಕಾಯ್ದುಕೊಳ್ಳಲು ಹೆಣಗುವ ಪಾತ್ರಗಳು ಮಹಿಳೆಯರದ್ದೇ. ಅದರಲ್ಲಿಯೂ ವಯಸ್ಸಾದ ವಿಧವೆಯರದ್ದೆ. ಇನ್ನು ಸಂಪತ್ತಿನ ಅಸಹ್ಯ ಪ್ರದರ್ಶನಕ್ಕೂ, ದರ್ಪಕ್ಕೂ ಹಿಂದಿ ಧಾರವಾಹಿಗಳಲ್ಲಿ ಮಿತಿಯೇ ಇಲ್ಲ. ಒಟ್ಟಾರೆ ಇವೆಲ್ಲಾ ಸ್ತ್ರೀ ಶೋಷಣೆಗೆ ಕಾರಣವಾದ ವ್ಯವಸ್ಥೆಯ ಮೂಲಗಳನ್ನು ಬಯಲಿಗಿಡುವುದಾಗಲೀ, ಇವುಗಳ ವಿರುದ್ಧ ಮಹಿಳೆಯರು ವಹಿಸಬೇಕಾದ (ಪುರುಷರನ್ನು ಒಳಗೊಂಡು) ಮಹತ್ವದ ಪಾತ್ರವನ್ನು ಪ್ರತಿಪಾದಿಸದೇ, ಅವೇ ಆರೋಪಿತಗೊಂಡು ಹಾದಿ ತಪ್ಪಿಸುತ್ತವೆ. ಇದು ಕನ್ನಡದ ಜೋಕಾಲಿ, ಬೆಳಗೆರೆಯವರ ರಾಧಾ, ಬದುಕು ಇತ್ಯಾದಿ ಸೀರಿಯಲ್‌ಗಳು ಹಿಂದಿಯಷ್ಟು ರಾಜಾರೋಷವಾಗಿ ಕೇಕೇ ಹಾಕದಿದ್ದರೂ ಅಂತಹದ್ದೇ ಧಾಟಿಯವು.



ಕಂದರ

ಅಂದರೆ ಸ್ತ್ರೀ ಸಮಸ್ಯೆಗಳ ಸುತ್ತ ಸುತ್ತುತ್ತಲೇ, ಮಹಿಳಾ ಪ್ರೇಕ್ಷಕರನ್ನು ಆಕರ್ಷಿಸುತ್ತಲೇ (ಮಹಿಳೆಯರ ಬಿಡುವಿನ ಸಮಯದಲ್ಲಿ) ಆ ಸಮಸ್ಯೆಗಳು ಎಲ್ಲೋ ಒಂದು ಹಂತದಲ್ಲಿ ತನ್ನದೂ ಇರಬಹುದು ಎನ್ನುವ ಭ್ರಮಾತ್ಮಕ ಸಂಬಂಧದ ನಿಟ್ಟುಸಿರಿನಲ್ಲಿ ಪತನವಾಗುತ್ತವೆ. ಹೀಗಾಗಿ ಮಹಿಳೆಯರ ವಾಸ್ತವ ಬದುಕಿನ ಪ್ರಶ್ನೆಗಳಿಗೆ ನೈಜ ಅಭಿವ್ಯಕ್ತಿಯಾಗಲೀ, ಪರಿಹಾರವಾಗಲೀ ಧಾರವಾಹಿಗಳಲ್ಲಿ ಇಲ್ಲದೇ, ಮನಮುಟ್ಟುವ ಪ್ರತಿಪಾದನೆಯೂ ಇಲ್ಲದೆ ಆಗೆದ ಕಂದರ ಹಾಗೆ ಉಳಿದುಬಿಡುತ್ತದೆ. ಇನ್ನು ಉಳ್ಳವರ, ಮಧ್ಯಮವರ್ಗದವರ ಜಂಜಾಟದ ಬದುಕಿನ ಧಾರವಾಹಿಗಳ ನಡುವೆ, ಸಾಮಾನ್ಯ ಜನರು, ಬಡ-ದುಡಿವ ಜನರನ್ನು ನಿರ್ಲಕ್ಷಿಸಿ, ನಿರಾಕರಿಸಿ ವಿಳಾಸವೇ ಇಲ್ಲದ ಅಜ್ಞಾತ ದೂರಕ್ಕೆ ಎಸೆದುಬಿಡುತ್ತವೆ. ತನ್ನೆದುರು ಎಷ್ಟೆಲ್ಲಾ ಇದ್ದರೂ ನಾನೆಲ್ಲಿ ಎಂಬ ಅಸ್ತಿತ್ವದ ಪ್ರಶ್ನೆ ಈ ಸಮೂಹಕ್ಕೆ ಪ್ರತಿ ಹಂತದಲ್ಲಿಯೂ ಕಾಡುತ್ತಲೇ ಇರುತ್ತದೆ.

ಮಾರುಕಟ್ಟೆಯ ಒತ್ತಡಗಳು

ಎಲ್ಲಾ ಕಾರ್ಯಕ್ರಮಗಳೂ ಹೀಗೆಯೇ ಆಗಿಬಿಟ್ಟರೆ ಏಕತಾನತೆಯಿಂದಾಗಿ ನೋಡುಗರನ್ನು ಹಿಡಿದಿಡುವುದು ಕಷ್ಟವೆಂಬ ಸತ್ಯವನ್ನು ಕಂಡುಕೊಂಡಿರುವ ವಾಹಿನಿಗಳು ಹೊಸ ಹೊಸ ಕಾರ್ಯಕ್ರಮಗಳಿಗಾಗಿ ತಡಕಾಡುತ್ತಿವೆ.

ಧಾರವಾಹಿಗಳಿಗೂ, ಕಾರ್ಯಕ್ರಮಗಳಿಗೂ ಜೀವ 'ದಾನ' ಮಾಡುವ ಜಾಹೀರಾತು ಕಂಪನಿಗಳು ಗ್ರಾಹಕರ ಮಾರುಕಟ್ಟೆಗಾಗಿ ಅಪಾರ ಪ್ರಮಾಣದಲ್ಲಿ ನೋಡುಗರನ್ನು ಸೆಳೆಯುವ ವೈವಿಧ್ಯಮಯ ಜನಪ್ರಿಯ ಕಾರ್ಯಕ್ರಮಗಳಿಗೆ ಮಾಧ್ಯಮದ ಉದ್ಯಮಿ ಚಾನಲ್‌ಗಳನ್ನು ಒತ್ತಾಯಿಸುತ್ತವೆ. ಅಂದರೆ ಜಾಹೀರಾತು ನೀಡುವ ಕೋಕಾಕೋಲಾ, ಹಿಂದುಸ್ಥಾನ್ ಲಿವರ್, ರಿಲಾಯನ್ಸ್ ಇತ್ಯಾದಿ ಪ್ರಾಯೋಜಕ ಕಂಪನಿಗಳ ಒಟ್ಟು ಹಿತಗಳಿಗೆ ವ್ಯತಿರಿಕ್ತವಾದ ಕಾರ್ಯಕ್ರಮಗಳನ್ನು ಹಾಗೂ ಅಂತಹ ನೀತಿಗಳನ್ನು ಅಂಗೀಕರಿಸುವಂತಾಗುವುದು ಜೊತೆಗಿನ ಅಂಶ. ಹಲವಾರು ಕಂಪನಿಗಳು ಮೊದಲೇ
ಚಾನೆಲ್‌ನ ಒಟ್ಟು ಕಾರ್ಯಕ್ರಮಗಳ ವಿವರ ಪ
ನಂತರ ಜಾಹೀರಾತು ನೀಡಲು ನಿರ್ಧರಿಸುತ್ತ

ಜನಪ್ರಿಯತೆಯನ್ನು ಕಾಯ್ದುಕೊಳ್ಳುವ
ಚಾನೆಲ್‌ಗಳಿಗೆ ಒಂದು ದೊಡ್ಡ ಸವಾಲು ಅ
ಸೀಮಿತ ಮಾರುಕಟ್ಟೆಯುಳ್ಳ ಒಂದು ಭಾಷೆಯ ಹ
ಚಾನೆಲ್‌ಗಳ ನಡುವೆ ಪೈಪೋಟಿ ಸಹಜವೇ. ಇ
ಪೈಪೋಟಿ ಎದುರಿಸಲಾಗದ ಹಲವು ಚಾನೆ
ಕಣ್ಮುಚ್ಚಿವೆ. ಅಥವಾ ಉಳಿದುಕೊಂಡಿದ್ದ
ನೋಡುಗರಿಗೆ ನಗಣ್ಯವಾಗಿವೆ. ಒಟ್ಟಾರೆ ಇವ
ನಡುವೆ ಪೈಪೋಟಿಯಂತೂ ಇದೆ. ವಿಶೇಷ
ಜಾಗತಿಕ, ಆರ್ಥಿಕ ಹಿಂಜರಿತದ ಬಳಿಕವ
ಚಾನೆಲ್‌ಗಳಿಗೆ ಜಾಹೀರಾತು ಹರಿವು ತೆಳು
ಆದಾಯವೂ ಕುಸಿದು ಉಸಿರುಳಿಸಿಕೊ
ಹೋರಾಡುತ್ತಿವೆ. ತನ್ನ ಹಲವಾರು ನೌಕರ
ಕಿತ್ತುಹಾಕಿ ಇಲ್ಲವೇ ಸಂಬಳ ಕಡಿತಗೊಳಿಸಿ ಬಿ
ಹೊರೆಯನ್ನು ದುಡಿವವರ ಹೆಗ
ವರ್ಗಾಯಿಸಿರುವುದು, ಇಲ್ಲೂ ನಡೆದಿದೆ.
ಸ್ಥಿತಿಯಲ್ಲಿ ಜಾಹೀರಾತು ಗಳಿಸಿಕೊಳ್ಳಲು, ಜನಪ್ರಿ
ಹೆಚ್ಚಿಸಿಕೊಳ್ಳುವ ರಿಯಾಲಿಟಿ ಶೋ ಎಂಬ
ಹೊಸ ಕಾರ್ಯಕ್ರಮಗಳ ಹುಡುಕಾಟ ಅಥವಾ
ಭಾಷಿಕ ಚಾನೆಲ್‌ಗಳ ಜನಪ್ರಿಯ ಕಾರ್ಯಕ್ರಮ
ಅನುಕರಣೆಗೆ ಚಾನೆಲ್‌ಗಳು ಇಳಿದಿವೆ. (ಹ
ಉಂಟೆ, ವಿಸ್ಮಯ, ಕ್ರೈಮ್ ರಿಪೋ
ಇತ್ಯಾದಿಗಳಲ್ಲದೇ) ಈ ವರಸೆಯಲ್ಲಿ ಈಗಿನ
ಕಾರ್ಯಕ್ರಮಗಳೆಂದರೆ ಸುವರ್ಣ ಚಾ
ಆರಂಭಿಸಿದ 'ಇದು ಕಥೆಯಲ್ಲ ಜೀವನ' ನಂತ
ಕನ್ನಡದ 'ಬದುಕು ಜಟಕಾ ಬಂಡಿ'- ಅದು
ಆರಂಭದ ಹಂತದಲ್ಲಿರುವ 'ಕಸ್ತೂರಿ'ಯ '
ಯಾರು ಬರೆದ ಕಥೆಯೋ'.

ಬದುಕಿನ ಸುತ್ತ


ಬದುಕಿನಲ್ಲಿ ಕಂಡುಂಡ ಧಾರುಣ ಸತ್ಯಗ
ಬಯಲಿಗಿಟ್ಟು ಅದಕ್ಕೆ ಒಂದು ಪರಿಹಾರ
ಸಾಂತ್ವನ, ಸಲಹೆಗಳನ್ನಿಡಬೇಕಿರುವುದು ಇ
ವೈಶಿಷ್ಟ್ಯ ನೊಂದು ಬೆಂದವರ ಬಾಳಿನ ಪುಟಗ
ಅನುಭವಿಸಿದ ಹಿಂಸೆ, ಕ್ರೌರ್ಯ ಅ
ಸಂಕಟಗಳನ್ನು ಎಲ್ಲರೆದುರು ತೆರೆದಿಡುವುದಕ್ಕೆ 'ಪ
ಈ ಕಾರ್ಯಕ್ರಮ. ಕಥೆಯಂತೆ ತೆರೆದುಕೊಂ
'ಜೀವನ'ವೇ ಆಗಿರುವುದರಿಂದ
ಭಾಗಿಯಾದವರಿಗೂ, ನೋಡುಗರ
ಹೃದಯಸ್ಪರ್ಶಿಯಾಗುತ್ತವೆ, ಸಂಭಾಷಿಸು
ಮನಮಿಡಿಸುತ್ತವೆ. ಇವುಗಳಲ್ಲಿ ಬಹುತೇಕವ ಗ

ಜೀವನದ ಕಥೆ......

ಗಳ ಶಿಥಿಲ ಸಂಬಂಧಗಳು, ಗಂಡ ಹೆಂಡತಿಯರ ನುವಿನ ಹಲವು ವರ್ಷಗಳ ದಾಂಪತ್ಯ ಒಡಕುಗಳು ಟುಂಬಿಕ ಸಮಸ್ಯೆಗಳು ಪ್ರಧಾನ. ವೇದಿಕೆಗೆ ಂದವರ ಅಹವಾಲುಗಳನ್ನು ಬಿಚ್ಚಿಟ್ಟು ಮುಖಾಮುಖಿಯಾಗುತ್ತಾ ವಿಮರ್ಶಿಸುತ್ತಾ, ಅವರಿಗೆ ೂಚಿದ ಪರಿಹಾರಗಳನ್ನು ಸೂಚಿಸುತ್ತಾ ರ್ಗಮನದ ಹಾದಿ ತೋರಿಸುವ 'ಕೌನ್ಸಿಲಿಂಗ್' ಸಮಾಲೋಚನೆ) ಕೆಲಸ ನಿರೂಪಕಿಯದ್ದು. ಂತಹದ್ದು ಕೆಲವೊಮ್ಮೆ ಪ್ರಬುದ್ಧತೆಯುಳ್ಳದ್ದು ನ್ನಿಸುತ್ತಿದ್ದರೆ, ಹಲವೊಮ್ಮೆ ಬಾಲಿಶವೂ ನ್ನಿಸಬಹುದು. 'ಸುವರ್ಣ'ದಲ್ಲಿ ಲಕ್ಷ್ಮಿಯವರು, 'ಜ ನ್ನಡ' ದಲ್ಲಿ ಮಾಳವಿಕಾರವರು ನಡೆಸಿಕೊಡುವ ಾರ್ಯಕ್ರಮಗಳಲ್ಲಿ ಅವರದ್ದೇ ಆದ ಭಿನ್ನ ಾಪುಗಳಿವೆ.

ಸ್ಯೆಗಳ ಅನಾವರಣ

ಈ ವೇದಿಕೆಗಳಲ್ಲಿ ಪ್ರೀತಿಸಿ ಮದುವೆಯಾದವರು, ದುವೆಯಾದ ಬಳಿಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ಘಟನೆ ಸ್ಥಿತಿ ತಲುಪಿದವರು ಅಥವಾ ಗಲಿಕೆಯಿಂದ ಕಂಗಾಲಾದವರೂ, ನಿರ್ಲಕ್ಷಿತ ವೃದ್ಧ ಂದೆ, ತಾಯಿಗಳು, ಆಸ್ತಿ ವಿವಾದಗಳಲ್ಲಿ ತ್ರುಗಳಾಗಿರುವ ದಾಯಾದಿಗಳು ಹೀಗೆ ಹಲವು ನ್ನೊಂದು ಪ್ರಶ್ನೆಗಳು ಕಾಣಿಸಿಕೊಂಡಿವೆ. ಇವಲ್ಲದೆ ೇವದಾಸಿ ಮಹಿಳೆಯರ, ಹಿಜಡಾಗಳ ನಿರ್ಲಕ್ಷಿತ ಬದುಕು, ಆರ್ತನಾದಗಳೂ ಪರಿಣಾಮಕಾರಿಯಾಗಿ ಕೇಳಿವೆ. ಆದರೆ ಇಲ್ಲಿ ಈ ಪ್ರಶ್ನೆಗಳಿಗೆ ನಿರೂಪಕಿಯವರಾದ ಮಾಳವಿಕಾ, ಲಕ್ಷ್ಮಿಯವರು ಸೂಚಿಸುವ ಪರಿಹಾರಗಳು, ಎದ್ದುಬಂದ ಪ್ರಶ್ನೆಗಳಿಗೆ ಪರಿಹಾರ ಸೂಚಿಸುವಾಗ ಪ್ರತಿಪಾದಿಸುವ 'ವಮೌಲ್ಯಗಳು' ತೀರಾ ತೆಳುವಾಗಿಯೂ ಅಂತರಾಳದಿಂದ ಮೂಡಿಬರದ ಪ್ರದರ್ಶಕ ಸಲಹೆಗಳು ಆಗಿ ಕಾಣುತ್ತವೆ. ಲಕ್ಷ್ಮಿಯವರ ಸೂಚನೆಗಳು ಬಹಳಷ್ಟು ಯಥಾಸ್ಥಿತಿಯ



ಸಮರ್ಥನೆಯಾಗಿ, ಪಾಳೇಗಾರಿ ಪ್ರತಿಪಾದನೆಯಾಗಿ ಕಾಣುತ್ತವೆ. ಹೀಗಿರುವಾಗಲೂ ಅವರ ನಿಲುವು ಪ್ರತಿಪಾದಿಸುವ ಈ ಎಲ್ಲಾ ದೌರ್ಬಲ್ಯಗಳು, ಕೊರತೆಗಳ ನಡುವೆಯೂ ಅಳಲಿಗೆ ಅಭಿವ್ಯಕ್ತಿಯಾಗಿ ರಂಜಿತ ಧಾರಾವಾಹಿಗಳು, ಭ್ರಮಾತ್ಮಕ ಶೋಗಳ ಮಧ್ಯೆ ಸಾಮಾನ್ಯರ ಬದುಕು ಎಂದರೆ ಹೀಗೆ ಉಂಟು ಎಂದು ಸಾರುವುದು ಆ ಮೂಲಕ ಸಾಮಾಜಿಕ ಅರಿವು ಮೂಡಿಸುವುದು ಅತ್ಯಂತ ಮುಖ್ಯವಾದ ಅಂಶವಾಗಿದೆ.

ಪರಿಹಾರ - ಗಂಭೀರತೆ ಅಗತ್ಯ

ಈ ಕಾರ್ಯಕ್ರಮಗಳ ನಿರೂಪಕಿಯರು ವಿಷಯ ಅರಿಯುವ, ಪರಿಹಾರ ಸೂಚಿಸುವ ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು. ಯಾಕೆಂದರೆ ಎಲ್ಲಾ ಸಾಂಸಾರಿಕ ಸಮಸ್ಯೆಗಳಿಗೆ, ಬಿರುಕುಗಳಿಗೆ ರಾಜಿ ಸಂಧಾನವೇ ಪರಿಹಾರವಲ್ಲ, ಸಂಘರ್ಷವೂ ಬೇಕಾಗುತ್ತದೆ. ಪ್ರತಿಯೊಂದು ಸಂಗತಿಯೂ ಸಾಮಾಜಿಕ ವ್ಯವಸ್ಥೆಯೊಂದಿಗೆ ಬೆಸೆದುಕೊಂಡಿವೆ ಎಂಬುದನ್ನು ತೋರಿಸಬೇಕಿದೆ. ಯಾಕೆಂದರೆ ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಸಾಮಾಜಿಕ ವೈರುಧ್ಯಗಳು ಬದುಕನ್ನು ಇನ್ನಷ್ಟು ದುರ್ಬರಗೊಳಿಸುತ್ತಿವೆ. ಎಲ್ಲಾ ರಂಗಗಳನ್ನೂ, ಜನಸಮುದಾಯವನ್ನು ಬಾಧಿಸುತ್ತಿವೆ. ವ್ಯಕ್ತಿ ಅಥವಾ ಕುಟುಂಬ ಅನುಭವಿಸುವ ನೋವು, ಸಂಕಟ ವ್ಯಕ್ತಿಗತವಾಗಿರದೇ ಸಮೂಹದ ಭಾಗವಾಗಿರುತ್ತವೆ. ಇಲ್ಲೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗಲಾರದಾದರೂ ಇಂತಹ ಅರಿವನ್ನು ಮೂಡಿಸುವುದು, ಸಮಸ್ಯೆಗಳಲ್ಲಿ ಭಾದಿತರಾದವರು ಸಹ ಆತ್ಮವಿಶ್ವಾಸ ಹೊಂದಲು, ಆ ಸ್ಥಿತಿಯಿಂದ ಹೊರಬರಲು ಸಹಾಯಕವಾಗುತ್ತದೆ. ಇತರರು ಇನ್ನೂ ಹೆಚ್ಚು ಮಾನವೀಯತೆ ಹೊಂದಲು ಹೊಣೆಗಾರಿಕೆ ರೂಪಿಸುತ್ತದೆ. ಕ್ರಿಯಾಶೀಲಗೊಳಿಸುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಇಂತಹ ಹಲವಾರು



ಕೌನ್ಸಿಲಿಂಗ್ ಕಾರ್ಯಕ್ರಮ ನಡೆಸಿರುವ ಜನವಾದಿ, ಪ್ರಜ್ಞಾ ಕಾನೂನು ಸಮಿತಿಗಳಂತಹ ಪ್ರಜಾಸತ್ತಾತ್ಮಕ ಮಹಿಳಾ ಆಂದೋಲನಗಳನ್ನು ಚಾನೆಲ್‌ನ ಈ ಕಾರ್ಯಕ್ರಮಗಳಲ್ಲಿ ಒಳಗೊಳ್ಳುವುದು ಹೆಚ್ಚು ಸಹಾಯಕ. ಈ ಕಾರ್ಯಕ್ರಮಗಳಿಗೆ ತಜ್ಞರು, ನ್ಯಾಯವಾದಿಗಳನ್ನು ಆಹ್ವಾನಿಸಿರುತ್ತಾರಾದರೂ ಅವರನ್ನು ಪರಿಣಾಮಕಾರಿಯಾಗಿ ಬಳಸುವುದಿಲ್ಲ. ಹೀಗೆಯೇ ಮೇಲು ಮೇಲಿನ ಪ್ರದರ್ಶಕ ಸಲಹೆಗಳು, ಜನಪ್ರಿಯತೆಗೊಳಿಸುವ ವರಾತಗಳು ಮುಂದುವರಿದರೆ ಕಾರ್ಯಕ್ರಮಗಳು ಬಹುತೇಕ ಸಿನಿಕತನ ಹೆಚ್ಚಿಸಿ ವಿಫಲವಾಗಿಬಿಡಬಹುದು.

ಒಟ್ಟಾರೆ ಚಾನೆಲ್‌ಗಳ ವ್ಯಾಪಾರಿ ಹಿತಗಳ ನಡುವೆಯೂ 'ಇದು ಕಥೆಯಲ್ಲ ಜೀವನ' ಹಾಗೂ 'ಬದುಕು ಜಟಕಾ ಬಂಡಿ'ಯಾಗಲೀ ವಿಧಿ ಸಾಹೇಬನ ಹಿಂದೆ ಹೋಗದೇ ಎಚ್ಚರ ಮೂಡಿಸುವ ನಿಟ್ಟಿನಲ್ಲಿ ಹೊಸ ಹಾದಿ ಹಿಡಿದು ಸಾಗಲಿ.

ಏನ್ಮಾಡೋದು ? ಏನ್ಮಾಡಿದ್ರು ? - ಇದು ಕಥೆಯಲ್ಲ ಜೀವನ!

ಆತ ಭಂಡತನದ ಗಂಡು, ಮದುವೆಯಾದವ, ಇನ್ನೊಬ್ಬಳೊಂದಿಗೂ ಆತನಿಗೆ ಸ್ನೇಹವಿದೆ, ಪ್ರೇಮವಿದೆ. ಆಕೆಯನ್ನೂ ಮದುವೆಯಾಗುತ್ತೇನೆ ಎನ್ನುತ್ತಾನೆ ಅವನು. ಇದಕ್ಕೆ ಹೆಂಡತಿ ವಿರೋಧ. ಆದ್ದರಿಂದಲೇ 'ಇದು ಕಥೆಯಲ್ಲ ಜೀವನ'ದ ಕಟಕಟೆಗೆ ಬಂದಿದೆ ಕೇಸ್.

ನಿರ್ವಾಹಕಿ ನಟಿ ಲಕ್ಷ್ಮಿಯ ಎಲ್ಲಾ ಪ್ರಶ್ನೆಗಳಿಗೂ ಕ್ರಾಸ್ ಎಕ್ಸಾಮಿನೇಷನ್‌ಗಳಿಗೂ ಅಳುಕದೇ ಉತ್ತರ ನೀಡುತ್ತಾನೆ ಉತ್ತರ ಭೂಪ! ಎರಡನೇ ಮದುವೆಯಾದರೆ ಕಾನೂನಿನಲ್ಲಿ ಶಿಕ್ಷೆ ಏನೇನಿದೆ ಅಂತಲೂ ಹೇಳಲಾಗುತ್ತದೆ. ಇನ್ನು ಮಾತನಾಡಿ ಪ್ರಯೋಜನ ಇಲ್ಲ ಎಂದುಕೊಂಡ ಈ 'ಮದುಮಗ' ಎದ್ದವನೇ ಅಲ್ಲೇ ಇದ್ದ ಎರಡನೇಯವಳತ್ತ ನಡೆದು ಕುತ್ತಿಗೆಗೆ ತಾಳಿ ಬಿಗಿದೇಬಿಟ್ಟ! ಇಷ್ಟೇ ನಾನು ಮಾಡೋದು, ಅದೇನು ಮಾಡ್ಕೋತೀರೋ ಮಾಡ್ಕಳಿ' ಎಂದವನೇ 'ವೀರ' ಹೆಜ್ಜೆ ಹಾಕಿ ಹೊರಟೇಬಿಡಬೇಕೆ? ಅಲ್ಲಿದ್ದವರೆಲ್ಲಾ ಹಾ! ಂಗು!


ಲಕ್ಷ್ಮಿಗೆ ಏನೂ ಹೊಳೆಯಲಿಲ್ಲ. ಅಲ್ಲಿದ್ದವರಿಗೂ ಕೂಡಾ. ನಂತರ ಕಾಮೆಂಟ್ಸ್ ಬಿರುತ್ತವೆ ಅನ್ನಿ. ಆದರೆ ಅಲ್ಲಿನ ಇಡೀ ವಾತಾವರಣವೇ 'ರೋಮಾಂಚನಮಯ'ವಾಗಿ ಬಿಡುತ್ತದೆ. ಹೀಗೂ ಉಂಟೆ? ಅಂತಹ ಭಂಡರು ಎಂಬ ಉದ್ಗಾರಗಳು.. ಮುಂದಿನ ಕಾರ್ಯಕ್ರಮಗಳಲ್ಲಿಯೂ ಇದರದ್ದೇ ಪ್ರಸ್ತಾಪಗಳು....

ಸನ್ನಿವೇಶವನ್ನು ಚಾನಲ್‌ಗಳು ರೋಚಕಗೊಳಿಸುವುದನ್ನು ನೆನಪಿಸಿಕೊಂಡಾಗ ಎಲ್ಲರೆದುರೇ ಕಾನೂನಿಗೆ ವಿರುದ್ಧವಾಗಿ ತಾಳಿ ಕಟ್ಟಿದ್ದು ಏನಾದ್ರೂ ಮುಂಚಿಯೇ ನಡೆದ 'ಡೀಲಾ'?

ಹೀಗೆ ಮಾಡಿದವನಿಗೆ ಶಿಕ್ಷೆ ಕೊಟ್ರಾ ಏನಾಯ್ತು? ಏನ್ಮಾಡಿದ್ರು? 'ಏನ್ ಮಾಡೋದಪ್ಪಾ' ಅಂತಾನೇ ಇದ್ದಾರೆ ನಿರೂಪಕಿ ಲಕ್ಷ್ಮಿ.

ಆಕೆಯ ಮುಖದಲ್ಲಿ ನೋವು ಮಡುವುಗಟ್ಟಿದೆ. ಗುಳಿಬಿದ್ದ ಕಣ್ಣುಗಳು ನೋವಿನ ಕಥೆಯ ಗತಕಾಲದ ವ್ಯಥೆಯನ್ನೇ ಸಾರುತ್ತಿವೆ. ಆಕೆಯ ಮುಖದ ಮೇಲೆ ಆಸಿಡ್ ಚೆಲ್ಲಾಡಿದ ಕಥೆಗಳಿವೆ. ನ್ಯಾಯ ಸಿಗಬಹುದೆಂದು ಕಲ್ಲಾಗದೆ ಕಾದು ಕುಳಿತಿದ್ದಾಳೆ.

ದುಡಿವ ಮಹಿಳೆಯಾಗಿರುವ ಆಕೆಯೊಂದಿಗೆ ನಿತ್ಯ ಕದನ ಹೂಡಿದ ಗಂಡ ಕೊನೆಗೊಂದು ದಿನ ಆಸಿಡ್ ಹಾಕುವ ನೀಚಮಟ್ಟಕ್ಕೆ ಹೋಗಿರುವ ಕ್ರೌರ್ಯಗಳು ಮಾತಿನುದ್ದಕ್ಕೂ ಬಿಚ್ಚಿಕೊಳ್ಳುತ್ತವೆ. ಆದ್ದರಿಂದಲೇ ಅಷ್ಟೆಲ್ಲಾ ನೋವಿನ ನಡುವೆಯೂ ಗಂಡ ಮತ್ತೆ



ಸರಿಯಾದಾನೇ ಎಂಬ ಸಣ್ಣ ಆಶೆ. ಆದರೆ ಗಂಡನದ್ದು ನಟನೆಯ ಮಾತು. ತುಟಿ ಮೇಲೆ ಸಾತ್ವಿಕ ಮಾತಿದ್ದರೂ ಒಳಗೆ ಕುದಿತ. 'ನಾನೇನೂ ಮಾಡಿಲ್ಲ ಮೇಡಂ, ಈಗಲೂ ಆಕೆಯೊಂದಿಗೆ ಬಾಳ್ವೆ ಮಾಡ್ತೀನಿ'. ಕ್ರಾಸ್ ಪ್ರಶ್ನೆಗಳಿಗೆ ಆತನದು ವಂಚಕತನದ ಉತ್ತರಗಳೇ. ನ್ಯಾಯವಾಗಲೀ, ಗಂಡನೊಂದಿಗೆ ನೆಮ್ಮದಿಯ ಬದುಕಿನ ನಿರೀಕ್ಷೆ ಪೂರ್ಣ ಕರಗುತ್ತಲೇ ಹೋದಾಗ ನಿಷ್ಠುರ ನಿಲುವಿನ ಪ್ರಕಟ. 'ಇಲ್ಲ ಮೇಡಂ' ನನಗೆ ಅಸಾಧ್ಯ. ಅವರು ಹೇಳೋದು ಒಪ್ಪಲಾರೆ' ಎಂದು ನುಡಿಯುತ್ತಾಳೆ ಆಕೆ. 'ನಿನ್ನ ನಿರ್ಧಾರವೇ ಅಂತಿಮ ಏನಮ್ಮ' ಎಂದು ಆಯ್ಕೆಗೆ ಬಿಡುತ್ತಾಳೆ. ನಿರೂಪಕಿ ಲಕ್ಷ್ಮಿ ಇದು ಸೂಕ್ತವೇ ಆಗಿದೆ. ಆದರೆ ಎಷ್ಟು ಸಲ ಹೀಗಾಗುತ್ತದೆ? ಇರಲಿ ಇಂತಹ ಪ್ರಸಂಗಗಳನ್ನೆದಿರುಸುವುದೇ ಕಡಿಮೆ ಅನ್ನಿ. ಏನಿದ್ರೂ ಅನಾಥರೂ, ಕಷ್ಟದಿಂದ ಮೇಲೆ ಬಂದವರು, ಕಳೆದವರನ್ನು ಹುಡುಕಿಕೊಡುವಂತಹ ವರೈಟಿಗಳೇ ಹೆಚ್ಚು ಇಲ್ಲಿ.

ಪ್ರೀತಿಸಿ ಮದುವೆಯಾಗಿದೆ. ಮುಂದೆ 'ಒಂದು ಕೆಲಸಕ್ಕೆ ಹಣ ಬೇಕು. ಅಪ್ಪನ ಮನೆಯಿಂದ ತೊಗೊಂಡು ಬಾ' ಎನ್ನುತ್ತಾನೆ ಅವನು. ಆದರೆ ಪ್ರೀತಿಸಿ ಮದುವೆಯಾಗಿರುವುದರಿಂದ ಇಬ್ಬರ ಮನೆಯ ತಂದೆ ತಾಯಿಗಳೂ ಇವರನ್ನು ಸೇರುಸುತ್ತಿಲ್ಲ. ಹಣ ಇನ್ನೆಲ್ಲಿ? ಹೀಗೆ ಮಾತಿಗೆ ಮಾತು ನಡೆದಿದೆ. ಇರಿಯುವಂತಹ ಮಾತನಾಡಿದಳು ಅಂತಾ ಕೋಪಿಸಿಕೊಂಡಾತ ಗರ್ಭಿಣಿ ಎಂಬೋದನ್ನು ಮರೆತು ಹೊರಹಾಕಿದ್ದಾನೆ, ಹೊರಹೋಗಿದ್ದಾನೆ. ಈಗ ಮತ್ತೆ ಕೂಡಿಸುವ ಪ್ರಯತ್ನ. ಅಂದ್ರೆ ಪ್ರೀತಿಸಿದ್ದು ಹಿರಿಯರನ್ನು ಮೀರಿದ್ದು .... ಸುಖಾಸ್ ತರಾಟೆಗೆ ತಗೋತ್ತಾರೆ ಮೇಡಂ ಲಕ್ಷ್ಮಿ. ಪ್ರೀತ್ಸೋದು ತಪ್ಪು, ವರದಕ್ಷಿಣೆ ಕೇಳಿದ್ರೂ ಪರವಾಗಿಲ್ಲ' ಅಂತಾ ನಾವು ಅಂದುಕೊಳ್ಳಬೇಕೇ?

'ಕಟ್ಟಡ ಕಟ್ಟುವವರ ಮುರಿದುಬಿದ್ದ ಬದುಕು'

ಕಾನೂನು ಸೇವಾ ಪ್ರಾಧಿಕಾರದಿಂದ ಕಟ್ಟಡ ಕಾರ್ಮಿಕರ ಕಾಯ್ದೆ ಬಗ್ಗೆ ವಿಚಾರಗೋಷ್ಠಿ

ನಿರ್ಮಾಣ ಕೈಗಾರಿಕೆ ಇತಿಹಾಸದಷ್ಟು ಪುರಾತನವಾದುದು; ತಾಜ್‌ಮಹಲ್, ಚೀನಾಗೋಡೆ ಮುಂತಾದ ಏಳು ಪ್ರಪಂಚದ ಅದ್ಭುತಗಳನ್ನು ನಿರ್ಮಿಸಿದವರು ಕಟ್ಟಡ ಕಾರ್ಮಿಕರು, ಚಿತ್ರೆಯನ್ನು ಅರಮನೆ ಕೋಟೆ ಕೊತ್ತಲಗಳು, ರಾಜ ರಾಣಿಯರ ಮೂಲಕ ನೋಡಲಾಗುತ್ತಿದೆ. ಆದರೆ ಅದನ್ನು ಕಟ್ಟಿದ ಕಾರ್ಮಿಕರು ಯಾರ ನೆನಪಿಗೂ ಬರುವುದಿಲ್ಲ.


ಕೃಷಿ, ಚಿಲ್ಲರೆ ವ್ಯಾಪಾರಗಳ ನಂತರ ಭಾರತದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೈಗಾರಿಕೆ ಪ್ರಧಾನ ಆರ್ಥಿಕ ಚಟುವಟಿಕೆ ಹೊಂದಿರುವ ಕೈಗಾರಿಕೆ, ದೊಡ್ಡ ಕೈಗಾರಿಕೆ ಯೋಜನೆಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಬುನಾದಿಯಾಗಿದ್ದು, ಅವುಗಳು ನಿರ್ಮಾಣ ಕೆಲಸದಿಂದಲೇ ಆರಂಭವಾಗುತ್ತವೆ. ಇಂದು ಭಾರತದಲ್ಲಿ 3 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ನಿರ್ಮಾಣ ಕೆಲಸಗಳಲ್ಲಿ ಕೋಟ್ಯಾಂತರ ಕಾರ್ಮಿಕರು ದುಡಿಯುತ್ತಿದ್ದಾರೆ.

ವಾಸದ ಮನೆಗಳು, ಕೈಗಾರಿಕಾ ಸಂಕೀರ್ಣಗಳು, ವಾಣಿಜ್ಯ ಮಳಿಗೆಗಳು ಅಣೆಕಟ್ಟುಗಳು, ಸೇತುವೆಗಳು, ಮೇಲ್ ಸೇತುವೆಗಳು, ರಸ್ತೆಗಳು, ಕಾಲುವೆಗಳು, ಪೈಪ್‌ಲೈನ್‌ಗಳು ನಗರವನ್ನು ಸುಂದರಗೊಳಿಸುವ ನಿರ್ಮಾಣಗಳಲ್ಲಿ ಗಾರೆ ಕೆಲಸ, ಮರಗೆಲಸ ಬಣ್ಣಬಳಿಯುವುದು ಕೊಳಾಯಿ ಕೆಲಸ, ಎಲೆಕ್ಟ್ರಿಷಿಯನ್ ಹೀಗೆ ನಿರ್ಮಾಣ ನಿರ್ವಹಣೆ, ದುರಸ್ತಿ, ನೆಲಸಮಗೊಳಿಸುವ ಕೆಲಸಗಳು, ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ಸೇರಿದೆ.

ಈ ಎಲ್ಲಾ ಕೆಲಸಗಳಲ್ಲಿ ಅರೆ ಕುಶಲ, ಅಕುಶಲ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ದೊಡ್ಡ ಸಂಖ್ಯೆಯ ಕಾರ್ಮಿಕರು ಅವಿದ್ಯಾವಂತರಾಗಿದ್ದು ಬಡತನದಲ್ಲಿದ್ದರೆ, ದೇಶದ ಕೃಷಿ ಬಿಕ್ಕಟ್ಟಿನ ಕಾರಣದಿಂದ ನಗರಗಳಿಗೆ ವಲಸೆ ಬಂದ ಗ್ರಾಮೀಣ ಜನ ಈ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ.

ನಿರ್ಮಾಣ ಕೈಗಾರಿಕೆಯ ಲಕ್ಷಣವೇ ಸಂಚಾರಿ. ವಲಸೆಯಾಗಿರುವುದರಿಂದ ಒಂದು ನಿರ್ಮಾಣದ ನಂತರ ಇನ್ನೊಂದು ನಿರ್ಮಾಣಗಳಲ್ಲಿ ಬೇರೆ ಬೇರೆ ಮಾಲೀಕರನ್ನು ಹುಡುಕುವ ಅಲೆ ಮಾರಿ ಜೀವನ ಕಾರ್ಮಿಕರಾದಾಗಿದೆ. ಈ ಕಾರಣದಿಂದಲೇ ಇವರು ಅಸಂಘಟಿತರಾಗಿದ್ದು ದುಡಿಮೆಯಲ್ಲಿ ತಮ್ಮ ಕುಶಲತೆ ಹೆಚ್ಚಿಸಿಕೊಳ್ಳುವ ಮತ್ತು ಅನ್ಯಾಯವನ್ನು ಕೇಳುವ ಧ್ವನಿ ಇಲ್ಲದವರಾಗಿದ್ದಾರೆ. ಕನಿಷ್ಠ ಕೂಲಿ, ಒ.ಟಿ. ಮುಂತಾದ ಕಾರ್ಮಿಕ ಕಾನೂನಿನ ಸೌಲಭ್ಯಗಳಿಲ್ಲದೆ, ನಿರ್ಮಾಣ ಸ್ಥಳಗಳಲ್ಲದೆ, ಸುರಕ್ಷಣೆಯ ಸೌಕರ್ಯಗಳಿಲ್ಲದೆ ಅಪಘಾತಕ್ಕೆ ಒಳಗಾಗುತ್ತಿದ್ದು, ಯಾವುದೇ ವೈದ್ಯಕೀಯ ವೆಚ್ಚಗಳು ಸಹಾಯವಿಲ್ಲದೆ ತೊಂದರೆಯಲ್ಲಿದ್ದಾರೆ.

ದುಡಿಯುವ ಸ್ಥಳದಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯಗಳಿಲ್ಲದೆ ಮಹಿಳಾ ಕಾರ್ಮಿಕರು ತೊಂದರೆ ಅನುಭವಿಸಿದರೆ, ವಲಸೆ ಕಾರಣದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಆಗುತ್ತಿಲ್ಲ. ಸಾಮಾಜಿಕ ಸೌಲಭ್ಯಗಳಾದ ಪಿಂಚಣಿ, ಹೆರಿಗೆ ಸೌಲಭ್ಯ ಅಪಘಾತ ಪರಿಹಾರ. ವಿದ್ಯಾರ್ಥಿ ವೇತನ, ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.



1985ರಲ್ಲಿ ತಮಿಳುನಾಡಿನ ಕಟ್ಟಡ ಕಾರ್ಮಿಕರ ಸಂಘ ದೆಹಲಿಯಲ್ಲಿ ಅಖಿಲ ಭಾರತ ಮಟ್ಟದ ವಿಚಾರಗೋಷ್ಠಿ ನಡೆಸಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿತು, ಇವರ ಪರಿಸ್ಥಿತಿಯನ್ನು ದೇಶದಾದ್ಯಂತ ಪ್ರಚಾರಕ್ಕೆ ತಂದು ಒಂದು ಸಾಮಾಜಿಕ ಭದ್ರತೆಯ ಅಖಿಲ ಭಾರತ ಕಾನೂನಿಗೆ ಒತ್ತಾಯಿಸಿತು.

ಕಾರ್ಮಿಕರ ದೀರ್ಘ ಹೋರಾಟ, ಎಡಪಕ್ಷಗಳ ಒತ್ತಾಯದಿಂದ 1996 ರಲ್ಲಿ ಕೇಂದ್ರ ಶಾಸನ, 2006ರಲ್ಲಿ ಕರ್ನಾಟಕ ಶಾಸನದಂತೆ11 ಕಲ್ಯಾಣ ಕಾರ್ಯಕ್ರಮಗಳು ರೂಪುಗೊಂಡಿವೆ.

ಕರ್ನಾಟಕದಲ್ಲಿ 2006ರಿಂದ ಕಲ್ಯಾಣ ಮಂಡಳಿಗೆ ಕಾರ್ಮಿಕರ ನೋಂದಣಿ ಸೆಸ್ ಸಂಗ್ರಹ ನಿರೀಕ್ಷಿತ ರೀತಿಯಲ್ಲಿ ಆಗಿರುವುದಿಲ್ಲ. ಕರ್ನಾಟಕ ಸರ್ಕಾರದ ಅಭಿವೃದ್ಧಿ ಕೆಲಸಗಳಲ್ಲಿ 10 ಸಾವಿರ ಕೋಟಿಗೂ ಹೆಚ್ಚು, ಖಾಸಗಿ ದೊಡ್ಡ ಬಿಲ್ಡರ್ಸ್‌ಗಳು 10 ಸಾವಿರ ಕೋಟಿಗೂ ಹೆಚ್ಚು. ಇತರೆ ಸಣ್ಣ ಖಾಸಗಿ ನಿರ್ಮಾಣಗಳಲ್ಲಿ 5 ಸಾವಿರ ಕೋಟಿ, ಒಟ್ಟು 25 ಸಾವಿರ ಕೋಟಿ ನಿರ್ಮಾಣ ಕೆಲಸಗಳು ರಾಜ್ಯದಲ್ಲಿ ಪ್ರತಿ ವರ್ಷ ನಡೆಯುತ್ತಿದ್ದು, ಶೇ. 1 ಹೆಚ್ಚುವರಿ ತೆರಿಗೆ(ಸೆಸ್) ಯಂತೆ ಮಂಡಳಿಗೆ 750 ಕೋಟಿ ರೂ.ಗಳು ಮೂರು ವರ್ಷದಲ್ಲಿ ಬರಬೇಕಾಗಿತ್ತು. ಆದರೆ ಇಂದು 280 ಕೋಟಿ ಮಾತ್ರ ಬಂದಿದೆ.

ಅಲ್ಲದೇ ನಿರ್ಮಾಣ ಕೆಲಸದಲ್ಲಿ 12 ಲಕ್ಷ ಕಾರ್ಮಿಕರು ದುಡಯುತ್ತಿದ್ದು, ಕಲ್ಯಾಣ ಮಂಡಳಿಯಲ್ಲಿ ಕೇವಲ 75 ಸಾವಿರ ಕಾರ್ಮಿಕರು ಮಾತ್ರ ನೋಂದಾಯಿಸಿಕೊಂಡಿದ್ದಾರೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿ, ಪರಿಹಾರ ಸೂಚಿಸಲು

1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
2. ಉಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಪ್ರಾಧಿಕಾರ
3. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
4. ಲೋಕೋಪಯೋಗಿ ಇಲಾಖೆ
5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
7. ನ್ಯಾಯವಾದಿಗಳ ಒಕ್ಕೂಟ - ಈ ಎಲ್ಲಾ ಪ[illegible] ಸಂಘಟನೆಗಳು

ದಿನಾಂಕ:9-10 ಆಗಸ್ಟ್ 2009ರಂದ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನ[illegible] ವಿಚಾರಗೋಷ್ಠಿಯಲ್ಲಿ ಏರ್ಪಡಿಸಿದ್ದವು.

'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿ[illegible] (ಉದ್ಯೋಗ ಕಾರ್ಮಿಕರಣ ಮತ್ತು ಸೇ[illegible] ಷರತ್ತುಗಳು), ಉದ್ದೇಶ ಮತ್ತು ಕಾರಣಗಳು ಮ[illegible] ಸರ್ಕಾರಗಳತ್ತ

'ಮೂಲ ಸೌಕರ್ಯಗಳು, ಆರೋಗ್ಯ ಮ[illegible] ಸುರಕ್ಷತೆ' ಸಮಸ್ಯೆಗಳು ಮತ್ತು ಚರ್ಚಾಂಶಗಳು

'ಸುಂಕ ಸಂಗ್ರಹ ಮತ್ತು ಫಲಾನುಭವಿ[illegible] ನೊಂದಣಿ'ಯಲ್ಲಿ ತೊಡಕುಗಳು ತೆಗೆದುಕೊಳ್ಳಬೇಕಾದ ಕ್ರಮಗಳು.

'ಕಲ್ಯಾಣ ನಿಧಿ ವಿನಿಯೋಗ ವ್ಯ[illegible] ಅಧಿನಿಯಮದ ಪರಿಣಾಮಕಾರಿ ಅನುಷ್ಠಾನ' ಎ[illegible] ನಾಲ್ಕು ವಿಚಾರಗೋಷ್ಠಿಗಳಲ್ಲಿ ನ್ಯಾಯಾಧೀಶರ[illegible] ಉನ್ನತ ಸರ್ಕಾರಿ ಅಧಿಕಾರಿಗಳು, ನಿರ್ಮಾಣಗಾರರ[illegible] ವಕೀಲರು, ಕಾರ್ಮಿಕ ಸಂಘದ ನಾಯಕರುಗ[illegible] ಚರ್ಚಿಸಿ ಕಾನೂನಿಗೆ ಕೆಲವು ತಿದ್ದುಪಡಿ ತರಲ[illegible] ಕಾರ್ಮಿಕರಲ್ಲಿ ಅರಿವು ಮೂಡಿಸಲು ಕೆಳಗಿ[illegible] ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ಎಲ್ಲಾ ಜಿಲ್ಲೆಗಳಲ್ಲಿ ಅರಿವು ಮೂಡಿಸ[illegible] ಸಮಾವೇಶ ನಡೆಸುವುದು.
2. ಸರ್ಕಾರ ಮತ್ತು ನಿರ್ಮಾಣಗಾರರು ಕಡ್ಡಾಯವಾ[illegible] ಕಾರ್ಮಿಕರನ್ನು ಕಲ್ಯಾಣ ಮಂಡಳಿ[illegible] ನೋಂದಾಯಿಸುವುದು.
3. ಸೆಸ್ ನೀಡದ, ಕಾರ್ಮಿಕರನ್ನು ಮಂಡಳಿಯ[illegible] ನೋಂದಾಯಿಸದ, ನಿರ್ಮಾಣಗಾರರು, ಗುತ್ತಿಗೆದಾ[illegible] ಮೇಲೆ ಕಾನೂನಿನ ಕ್ರಮ ಜರುಗಿಸುವುದು, ಶಿ[illegible] ಒಳಪಡಿಸುವುದು.
4. ಕಾರ್ಮಿಕರ ಸಂಖ್ಯೆಯನ್ನು ಕಲ್ಯಾಣ ಮಂಡ[illegible] ತಿಂಗಳಲ್ಲಿ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದ[illegible]
5. ಕಾರ್ಮಿಕರ ಸಹಾಯಕ್ಕೆ ಸಹಾಯವಾ[illegible] ಆರಂಭಿಸುವುದು.
6. ಕಾರ್ಮಿಕರ ಸಮಸ್ಯೆಗೆ ಲೋಕ ಅದಾಲ[illegible] ನಡೆಸುವುದು.

ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ಈ ವ[illegible] ಕಾರ್ಮಿಕರ ಸಾಮಾಜಿಕ ಭದ್ರತೆ ಕೊಡಿಸುವ ಮ[illegible] ಅರಿವು ಮೂಡಿಸುವ ಕಾನೂನು ಸೇವಾ ಪ್ರಾಧಿಕಾ[illegible] ಈ ಕೆಲಸವನ್ನು ಎಲ್ಲಾ ಪ್ರಗತಿ ಪರ[illegible] ಬೆಂಬಲಿಸಬೇಕಾಗಿದೆ.

ಕಾನೂನು ಸೇವಾ ಪ್ರಾಧಿಕಾರ[illegible] ಮುತುವರ್ಜಿಯಿಂದ ನಡೆದ ಈ ಕಾರ್ಯಕ್ರಮದ[illegible] ರಾಜ್ಯದ ರಾಜ್ಯಪಾಲರು, ಮುಖ್ಯಮಂತ್ರಿಗಳ[illegible] ಹಲವು ಮಂತ್ರಿಗಳು, ಹೈಕೋರ್ಟ್ ನ್ಯಾಯಾಧೀಶ[illegible] ಐಎಎಸ್ ಅಧಿಕಾರಿಗಳು, ಕಟ್ಟಡ ಕಾರ್ಮಿ[illegible] ಚಳುವಳಿಯ ಮುಖಂಡರು ಪಾಲ್ಗೊಂಡಿದ್ದರು.


ವರದಿ: ಎಸ್. ಶಂಕ[illegible]

ಹಗರಿಬೊಮ್ಮನಹಳ್ಳಿ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟ ಆಯೋಜಿಸಿದ್ದ 'ಕೌಟುಂಬಿಕ ದೌರ್ಜನ್ಯ ತಡೆಗಟ್ಟುವ ಕಾನೂನು ಅರಿವು ಹಾಗೂ ಸುತ್ತು ನಿಧಿ ವಿತರಣೆ' ಕಾರ್ಯಕ್ರಮದಲ್ಲಿ ಒಕ್ಕೂಟದ ರಾಜ್ಯ ಸಂಚಾಲಕಿಯಾದ ಕಾಂ. ಸಿ. ಕುಮಾರಿ ಮಾತನಾಡುತ್ತಿರುವುದು.



ಎರಡು ದಿನಗಳ ಬ್ಯಾಂಕ್ ಮುಷ್ಕರ

ಯುಪಿಎ II ದರ್ಬಾರ್‌ನಲ್ಲಿ



ಗಸ್ಟ್ 6 ಮತ್ತು 7 ರಂದು ಸಾರ್ವಜನಿಕ ವಲಯದ ಂಕುಗಳ ಸುಮಾರು 7ಲಕ್ಷ ನೌಕರರ ದೇಶವ್ಯಾಪಿ ಮುಷ್ಕರ ದೇಶದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸ್ತವ್ಯಸ್ತಗೊಳಿಸಿತ್ತು. ಇದು ಯುಪಿಎ ಸರಕಾರದ ರಡನೇ ಆವೃತ್ತಿಯಲ್ಲಿ ಎರಡನೇ ಅಖಿಲ ಭಾರತ ುಷ್ಕರ. ಆಗಸ್ಟ್ 4ರಂದು ವಿಮಾ ನೌಕರರು ರಕಾರದ ಖಾಸಗೀಕರಣ ನೀತಿಯ ವಿರುದ್ಧ 2 ಟೆಗಳ ಮುಷ್ಕರದ ಮೂಲಕ ಎಚ್ಚರಿಕೆ ನೀಡಿದ್ದರು. ್ಯಾಂಕ್ ನೌಕರರು ದ್ವಿಪಕ್ಷೀಯ ಮಾತುಕತೆಗಳಲ್ಲಿ ರಕಾರದ ಹಸ್ತಕ್ಷೇಪವನ್ನು ವಿರೋಧಿಸಿ ಈ ಮುಷ್ಕರ ತೆಸಿದ್ದಾರೆ.

ಸಾರ್ವಜನಿಕ ವಲಯದ ಶೇರುಗಳ ಮಾರಾಟದ ರುದ್ಧ ಕೇಂದ್ರ ಕಾರ್ಮಿಕ ಸಂಘಗಳು ಎಲ್ಲವೂ ೋರಾಟಕ್ಕಿಳಿಯುವ ಲಕ್ಷಣಗಳಿವೆ. ಸ್ವತಃ ಇಂಟಕ್ ನಿಟ್ಟಿನಲ್ಲಿ ಮುತುವರ್ಜಿ ವಹಿಸುತ್ತಿರುವುದು ಲವರಲ್ಲಿ ಅಚ್ಚರಿ ಮೂಡಿಸಿದೆ. ಬಿಎಂಎಸ್ ಕೂಡಾ ್ನು ಬೆಂಬಲಿಸಲು ಮುಂದಾಗಿದೆಯಂತೆ!

★

ದೋಹಾ ಮಾತುಕತೆಗೆ ಭಾರತದ ಮುತುವರ್ಜಿಯೇಕೆ?

ವಿಶ್ವ ವ್ಯಾಪಾರ ಸಂಘಟನೆಯ ದೋಹಾ ಸುತ್ತಿನ ಾತುಕತೆಗಳು ಶ್ರೀಮಂತ ದೇಶಗಳ ಠಮಾರಿತನದಿಂದಾಗಿ ನಿಂತು ಹೋಗಿದ್ದವು. ಈಗ ದನ್ನು ಪುನರಾರಂಭಿಸಲು ಭಾರತ ಸರಕಾರ ಯತ್ನಿಸುತ್ತಿದೆಯೆಂಬ ಸುದ್ದಿ ಬಂದಿದೆ. ತಮ್ಮ ರೈತರಿಗೆ ೀಡುವ ಅಪಾರ ಸಬ್ಸಿಡಿಗಳನ್ನು ನಿಲ್ಲಿಸುವುದು ಇತ್ಯಾದಿ ವಿಚಾರಗಳ ಬಗ್ಗೆ ಶ್ರೀಮಂತ ದೇಶಗಳ ನಿಲುವು ಸ್ವಲ್ಪವೂ ಬದಲಾಗದಿರುವಾಗ ಸರಕಾರದ ಈ ಪ್ರಯತ್ನಕ್ಕೆ ಕಾರಣಗಳೇನು ಎಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾದ ಬೃಂದಾ ಕಾರತ್ ಸರಕಾರದಿಂದ ಸ್ಪಷ್ಟೀಕರಣ ಕೇಳಿದರು. ಇದು ಅಮೆರಿಕಾದೊಡನೆ ಪರಮಾಣು ವ್ಯವಹಾರದ ಮತ್ತೊಂದು 'ಫಲ' ಎನ್ನಲಾಗುತ್ತಿದೆ.

★

ಜಿ-8 ಪರಮಾಣು ನಿಷೇಧಕ್ಕೆ ಒಬಾಮಾ ಆಡಳಿತದ ಬೆಂಬಲ!

ಪರಮಾಣು ಇಂಧನಗಳ ಮರುಸಂಸ್ಕರಣ, ಸಮೃದ್ಧೀಕರಣ ತಂತ್ರಜ್ಞಾನದ ವರ್ಗಾವಣೆಗೆ ಹಾಕಿರುವ ನಿಷೇಧ ಭಾರತಕ್ಕೆ ಅನ್ವಯವಾಗುವುದಿಲ್ಲ ಎಂದು ಭಾರತದ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಹೇಳುತ್ತಿರುವಾಗಲೆ ಅತ್ತ ಅಮೆರಿಕಾದಲ್ಲಿ ಇವಿದೇಶಾಂಗ ಇಲಾಖೆ ಇಂತಹ ವರ್ಗಾವಣೆಗಳ ನಿಷೇಧ ಒಬಾಮಾ ಆಡಳಿತದ ಪರಮಾಣು ಪ್ರಸರಣ ನಿಷೇಧ ಅಜೆಂಡಾದ ಭಾಗವೇ ಆಗಿದೆ, ಅಬಗ್ಗೆ ಸರಕಾರ ಗಂಭೀರವಾಗಿದೆ ಎಂದು ಹೇಳಿಕೆ ನೀಡಿದೆ.

★

ಬರ ಎಂದು ಕೊನೆಗೂ ಒಪ್ಪಿಕೊಂಡಿರಿ ಪರಿಹಾರ ಎಲ್ಲಿ?-ರೈತ ಸಂಘದ ಪ್ರಶ್ನೆ

ಯಾವ ಭಾರತೀಯನೂ ಹಸಿದಿರಲು ಬಿಡುವುದಿಲ್ಲ, ಸರಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಪ್ರಧಾನ ಮತ್ರಿಗಳು ಹೇಳಿದ್ದಾರೆ.

ಈ ಮೂಲಕ ಯುಪಿಎ ಸರಕಾರ ಮೊದಲ ಬಾರಿಗೆ ದೇಶದಲ್ಲಿ ಬರದ ಪರಿಸ್ಥಿತಿಯಿದೆ, ಬೆಲೆಗಳು ಗಗನಕ್ಕೇರುತ್ತಿವೆ, ಮುಂಗಾರು ಬೆಳೆ ಕಡಿಮೆಯಾಗಬಹುದು ಎಂದು ಒಪ್ಪಿಕೊಂಡಿದೆ. ಹಣಕಾಸು ಮಂತ್ರಿಗಳು, ಕೃಷಿ ಮಂತ್ರಿಗಳು ಕೂಡಾ ದನಿಗೂಡಿಸಿದ್ದಾರೆ. ಆದರೆ ಇದು ಅರ್ಥಪೂರ್ಣವಾಗಬೇಕಾದರೆ ಮಾತುಗಳಿಗೆ ತಕ್ಕ ಕೃತಿಗಳು ಬೇಕು, ಅವು ಎಲ್ಲಿವೆ ಎಂದು ಅಖಿಲ ಭಾರತ ಕಿಸಾನ್ ಸಭಾ ಪ್ರಶ್ನಿಸಿದೆ. ಸೀಮಿತ ಪಡಿತರ ವ್ಯವಸ್ಥೆಯಿಂದಾಗಿ ಅಹಾರ ಧಾನ್ಯಗಳು, ಎಣ್ಣೆ ಬಹಳಷ್ಟು ಜನರ ಪಾಲಿಗೆ ಇಲ್ಲವಾಗಿದೆ. ಈಬಗ್ಗೆ ಸರಕಾರ ಏನೂ ತಲೆಕೆಡಿಸಿಕೊಳ್ಳುತ್ತಿಲ್ಲ.

ಈ ನಡುವೆ, ಹಣದುಬ್ಬರ ಇಳಿಮುಖವಾಗಿದೆ ಎನ್ನುತ್ತಿರುವಾಗಲೇ ಕಳೆದ ಮೂರು ತಿಂಗಳಲ್ಲಿ ಆಹಾರ ಧಾನ್ಯಗಳ ಬೆಲೆ 40 ಶೇಕಡಾ ಏರಿದೆ ಎಂದು ಒಂದು ಸರ್ವೆ ಹೇಳಿದೆ. ಕಮ್ಮಿ ದಾಸ್ತಾನು, ಮಾನ್ಸೂನ್ ವಿಳಂಬ, ಆಹಾರಧಾನ್ಯಗಳಲ್ಲಿ ಸಟ್ಟಾ ವ್ಯವಹಾರಗಳಿಂದಾಗಿ ಜಾಗತಿಕ ಬೆಲೆಯೇರಿಕೆ ಹಾಗೂ ಕಳ್ಳ ದಾಸ್ತಾನು ಇದಕ್ಕೆ ಕಾರಣ ಎಂದು ಕೆಲವು ಪರಿಣಿತರು ಹೇಳುತ್ತಾರೆ.

'ಸಾರ್ವತ್ರಿಕ ವಿತರಣಾ ವ್ಯವಸ್ಥೆಯೇ ಯೋಗ್ಯ, ಟಾರ್ಗೆಟೆಡ್ (ಸೀಮೀತ) ವ್ಯವಸ್ಥೆಯಲ್ಲಿ ನಿರ್ಲಕ್ಷ್ಯ'ಕ್ಕೆ ಅವಕಾಶವಿದೆ? ಎಂದು ನೊಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ ಅಮಾರ್ತ್ಯ ಸೆನ್ ಹೇಳಿದ್ದಾರೆ.

★

ಕಾರ್ಮಿಕ ಕಾನೂನುಗಳ ಜಾರಿ ಮಾತು-ಕೃತಿಯಲ್ಲಿ ಇಷ್ಟೊಂದು ಅಂತರ!

'ಬಹಳಷ್ಟು ಮಂದಿ ಕಾರ್ಮಿಕ ಕಾನೂನುಗಳನ್ನು ಪಾಲಿಸುವುದಿಲ್ಲಕಾರ್ಮಿಕ ಕಾನೂನುಗಳ ಹಿಂದೆ ಬಲವಿಲಕಾರ್ಮಿಕ ಇಲಾಖೆ ಜಾರಿ ಮಾಡುವ ಕಾನೂನುಗಳನ್ನು ಆಗ್ರಹದ(ಕೈಮುಗಿದು) ಮೂಲಕ ಮಾಡಲಾಗುತ್ತಿದೆ.'- ಇದು ಆಗಸ್ಟ್ 4ರಂದು ಸಂಸತ್ತಿನಲ್ಲಿ ಚರ್ಚೆಗೆ ಉತ್ತರ ಕೊಡುತ್ತಾ ದೇಶದ ಕಾರ್ಮಿಕ ಮಂತ್ರಿಗಳು ಹೇಳಿದ ಮಾತು.

ಆಗಸ್ಟ್ 5ರ ಫೈನಾನ್ಶಿಯಲ್ ಎಕ್ಸ್‌ಪ್ರೆಸ್‌ನ ಈ ವರದಿ ನೋಡಿ- 'ಈಗ ಲೇಬರ್ ಇನ್ಸ್‌ಪೆಕ್ಟರುಗಳು ಕೆಲಸದ ಸ್ಥಳಗಳಿಗೆ ಹೋಗಿ ಕಾರ್ಮಿಕ ಕಾನೂನುಗಳು ಜಾರಿ ಯಾಗುತ್ತಿದೆಯೇ ಎಂದು ತಪಾಸಣೆ ಮಾಡುತ್ತಾರೆ. (ಇದರ ಬದಲು) ಇನ್ನು ಮುಂದೆ ಕಂಪನಿ ಸೆಕ್ರೆಟರಿಗಳು ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡುತ್ತಿದ್ದೇವೆ ಎಂದು ವರದಿಗಳನ್ನು ಸಲ್ಲಿಸುವ ವ್ಯವಸ್ಥೆಯ ಬಗ್ಗೆ ಯೋಚಿಸುತ್ತಿದ್ದೇವೆ' ಎಂದು ಅವರದೇ ಸರಕಾರದ ಕಾರ್ಮಿಕ ಕಾರ್ಯದರ್ಶಿ ಹೇಳಿದ್ದಾರೆ! ಇದು ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡುವ ವ್ಯವಸ್ಥೆಯನ್ನು ಕಳಚಿ ಹಾಕುವ ಪ್ರಕ್ರಿಯೆಯ ಆರಂಭವಲ್ಲವೆ ಎಂದು ಸಿಐಟಿಯು ಮುಖಂಡ ತಪನ್ ಸೆನ್ ಕೇಂದ್ರ ಕಾರ್ಮಿಕ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಬಿಜೆಪಿ ಗೆಲ್ಲಿಸದಿದ್ದರೆ...

'ಬಿಜೆಪಿ ಗೆಲ್ಲಿಸದಿದ್ದರೆ ಕಹಿ ಅನುಭವ ಗ್ಯಾರಂಟಿ..' ಯಾರೂ ಇದನ್ನು ಹೇಳಿದ್ದು, ಸಂವಿಧಾನ ಸುವುದಾಗಿ ಪ್ರಮಾಣ ಮಾಡಿ ಅಧಿಕಾರ ಸಿಕೊಂಡ ಕರ್ನಾಟಕ ರಾಜ್ಯದ ಅಸಲಿ ುಖ್ಯಮಂತ್ರಿ ಡಾ: .ಎಸ್.ಯಡ್ಡಿಯೂರಪ್ಪನವರು. ಸಂದರ್ಭ ೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಉಪ ುನಾವಣೆಯ ಪ್ರಚಾರ ಸಭೆ. ಯಾರಿಗೆ ಹೇಳಿದ್ದು ? ತದಾರ ಬಂಧುಗಳಿಗೆ.



ಏನಿದರ ಅರ್ಥ: ರಾಜ್ಯದಲ್ಲಿ ಬಿಜೆಪಿ ನಡೆಸುತ್ತಿರುವ ಆಪರೇಷನ್ ಕಮಲದ ಅನೈತಿಕತೆ ಗೊತ್ತಿರುವುದೇ. ಇದು ಇನ್ನೊಂದು ಬಗೆಯ ಅನೈತಿಕ ರಾಜಕೀಯ. ವಾಸ್ತವವಾಗಿ ಬೆದರಿಕೆ. ಜನ ಬಿಜೆಪಿಗೆ ಮತ ಹಾಕಬೇಕು. ಹಾಕದಿದ್ದರೆ? ಹಾಕದಿದ್ದರೆ ಜನತೆಗೆ ಕಹಿ ಅನುಭವ ಗ್ಯಾರಂಟಿ. ಅಂದರೆ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಕ್ರಮ ವಹಿಸುವುದಿಲ್ಲ. ವಿರೋಧ ಪಕ್ಷದ ಶಾಸಕರಿದ್ದರೆ, ಸಹಕರಿಸುವುದಿಲ್ಲ. ಇದು ಇದರ ಅರ್ಥ. ಇದು ಬರೀ ಊಹೆ ಅಲ್ಲ. ಮಂಡ್ಯದಲ್ಲಿ ಚುನಾವಣೆ ನಡೆದ ಮೇಲೆ ಬಿಜೆಪಿ ಸೋತಿದ್ದರಿಂದ ಅಭಿವೃದ್ಧಿ ಯೋಜನೆಯನ್ನು ಕುಂಟು ನೆಪ ಹೇಳಿ ರದ್ದು ಮಾಡಿದ ಬಿಜೆಪಿಯ ಚಾರಿತ್ರ್ಯ ಜನರ ಮನದಲ್ಲಿ ಇನ್ನು ಹಸಿರಾಗಿದೆ. ಕೊಳ್ಳೇಗಾಲ ಮಂಡ್ಯದಿಂದ ದೂರವೇನಿಲ್ಲ. ಬಲು ಹತ್ತಿರದಲ್ಲಿದೆ.

★

ಬರಗಾಲ ಇಲ್ಲ!?

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭೀಕರ ಬರದಿಂದ ಜನ ಕಂಗೆಟ್ಟಿದ್ದಾರೆ. ಗುಳೆ ಹೊರಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಂದು ಸರ್ಕಾರ ಇದೆ. ಇಲ್ಲಿ ಮುಖ್ಯಮಂತ್ರಿ, ಮಂತ್ರಿಗಳು ಇದ್ದಾರೆ. ಇವರೇನಾದರೂ ಪರಿಹಾರ ತೋರಿಸುತ್ತಾರೆ ಎಂದು ಜನ ನೋಡುತ್ತಿದ್ದಾರೆ. ಇಂಥ ಹೊತ್ತಲ್ಲಿ ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳದಲ್ಲಿ ಸುದ್ದಿಗಾರರೊಂದಿಗೆ ರಾಜ್ಯ ಬಿಜೆಪಿ ಸರ್ಕಾರದ ಕೃಷಿ ಸಚಿವ ಬಿ.ಎ: ರವೀಂದ್ರನಾಥ್ ಹೇಳುತ್ತಾರೆ "ರಾಜ್ಯದಲ್ಲಿ ಬರ ಇಲ್ಲ. ಮಳೆ ಕಡಿಮೆಯಾಗಿ ತೊಂದರೆಗೀಡಾದ ಪ್ರದೇಶಗಳನ್ನು 'ಬರಪೀಡಿತ' ಎಂದು ಘೋಷಿಸುವ ಕ್ರಮ ಸದ್ಯಕ್ಕಿಲ್ಲ" ಅಂತ ಅವರು ಹೀಗೆ ಹೇಳಿದ್ದ ಆಗಸ್ಟ್ 7 ರಂದು ಆನಂತರ ಸರ್ಕಾರ ಬರಪೀಡಿತ ಪ್ರದೇಶಗಳ ಬಗೆಗೆ ಘೋಷಣೆ ಹೊರಡಿಸಿದೆ. ಅದು ಬೇರೆ ವಿಚಾರ. ಆದರೆ ಮುಖ್ಯಮಂತ್ರಿಗಳು ನಿನ್ನೆ ಮೊನ್ನೆಯವರೆಗೆ ಇದನ್ನೆ ಹೇಳುತ್ತಿದ್ದರು. ಸರ್ಕಾರ, ಸರ್ಕಾರದ ಮಂತ್ರಿಗಳ ಆಲೋಚನೆ ಯಾವ ರೀತಿ ಇದೆ ಅನ್ನುವುದಕ್ಕೆ ಇದೊಂದು ಸೂಚನೆ. ಇಂಥಾ ಸರ್ಕಾರ ಜನರಿಗೆ ಏನು ಪರಿಹಾರ ಕೊಟ್ಟಿತು?

★

ಅಜ್ಜಿಗೆ ಅರಿವೆ ಚಿಂತೆ...

ಅಜ್ಜಿಗೆ ಅರಿವೆ ಚಿಂತೆ.. ಮೊಮ್ಮಗಳಿಗೆ... ಇನ್ನೇನೋ ಚಿಂತೆ ಅಂದಂತೆ ರಾಜ್ಯದ ಬಿಜೆಪಿಯಲ್ಲಿ ಭಿನ್ನಮತದ ಕ್ಯಾತೆಗಳು, ನಡೆದೇ ಇವೆ. ಹೊನ್ನಾಳಿ ಶಾಸಕ ಪಿ.ಎಂ.ರೇಣುಕಾಚಾರ್ಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಯಾರೋ ಸಹಿ ಸಂಗ್ರಹಿಸುತ್ತಾರಂತೆ. ಮತ್ತೆ ಸಚಿವೆ ಶೋಭಾ ಕರಾಂದ್ಲಾಜೆಯವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಬೇಡ ರದ್ದು ಮಾಡಿ ಅಂತ ಕೆಲವರಿಂದ ಒತ್ತಡ, ತಗಾದೆ ನಡೆದಿದೆಯಂತೆ ಇದರಲ್ಲಿ ಜನರ ಹಿತಾಸಕ್ತಿ ಏನಿದೆ? ಏನೂ ಇಲ್ಲ. ಗುಂಪುಗಾರಿಕೆ, ಸ್ವಾರ್ಥ ಲಾಲಸೆ ಅಷ್ಟೇ.

ಈ ಯಕ್ಷಗಾನ ಹೀಗೆ ನಡೆದಿರುವಾಗಲೇ ಇತ್ತ ಬೀದರ್ ಜಿಲ್ಲೆಯಲ್ಲಿ ಸಾಲದ ಶೂಲಕ್ಕೆ ಇಬ್ಬರು ರೈತರು ಬಲಿಯಾಗಿದ್ದಾರೆ ಬೀದರ್ ತಾಲ್ಲೂಕು ಯದಲಾಪೂರ್ ಗ್ರಾಮದ ಭದ್ರಪ್ಪ ಸಂಗ್ರಾಮ್ (50) ಒಬ್ಬರು. ಕಬ್ಬು ಬೆಳೆಗೆ ಬ್ಯಾಂಕಿನಿಂದ ಸಾಲ ಮಾಡಿದ್ದು ಇವರ ನೇಣಿಗೆ ಕೊರಳೊಡ್ಡಿದ್ದಾರೆ.

ಮತ್ತೊಬ್ಬರು ವಿಲಾಸ್‌ಪುರ್ ಗ್ರಾಮದ ತುಳಸಿರಾಮ ರಾಜನಾ ಮಾನಾಜಿ (65) ಇವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರ ಹೆಸರಿನ ಮೇಲೆ ಪ್ರಮಾಣ ಮಾಡಿ ಅಧಿಕಾರಕ್ಕೇರಿದ ಯಡಿಯೂರಪ್ಪ ಸರ್ಕಾರ ಏನು ಮಾಡುತ್ತಿದೆ. ಅವರ ಸರ್ಕಾರದ ಮಂತ್ರಿಗಳ, ಶಾಸಕ, ಹಿಂಬಾಲಕ, ಮಂದಿ ಮಾಗಧರು ಏನು ಮಾಡುತ್ತಿದ್ದಾರೆ ನೋಡಿ.

ಹೀಗೆ ಇರುತ್ತದೆ...

"ಬಿಜೆಪಿಯ ಅಭ್ಯರ್ಥಿ ನಂಜುಂಡಸ್ವಾಮಿ ಅವರನ್ನು ಗೆಲ್ಲಿಸಿದರೆ ಅವರು ಆಡಳಿತ ಪಕ್ಷದ ಶಾಸಕರಾಗುತ್ತಾರೆ. ಆಗ ಅಭಿವೃದ್ಧಿ ಕೆಲಸ ಮಾಡಿಸಿಕೊಳ್ಳುವುದು ಸುಲಭವಾಗುತ್ತದೆ. ಇಲ್ಲವಾದರೆ ನಿಮ್ಮ ಈ ಅಧ್ವಾನದ ರಸ್ತೆ ಹೀಗೇಯೇ ಇರುತ್ತದೆ.'

ಡಾ: ಬಿ.ಎಸ್.ಯಡಿಯೂರಪ್ಪ

ಬಿಜೆಪಿ ದರ್ಬಾರ್‌ನಲ್ಲಿ

ಜಗದಗಲ

ಶರತ್‌ಚಂದ್ರ

ಕ್ಯೂಬಾದ ವಿರುದ್ಧ ದಿಗ್ಬಂಧನ ಕುಸಿಯುತ್ತಿದೆ

1992 ರಲ್ಲಿ 'ಪ್ಯಾಸ್ಟರ್ಸ್ ಫೋರ್ ಪೀಸ್' (ಶಾಂತಿಗಾಗಿ ಪಾದ್ರಿಗಳು) ಸಂಘಟನೆ ನಡೆಸುವ 'ಕ್ಯೂಬಾ ಕಾರವಾನ್' ಜಾಥಾ ಕ್ಯೂಬಾದ ವಿರುದ್ಧ ದಿಗ್ಬಂಧನ ಮತ್ತು ಭೇಟಿ ಬಗ್ಗೆ ಇದ್ದ ನಿಷೇಧ ಉಲ್ಲಂಘಿಸಲು ಆರಂಭವಾಗಿತ್ತು. ಈ ವರ್ಷ 20 ನೇ 'ಕ್ಯೂಬಾ ಕಾರವಾನ್' ಜಾಥಾ ಆ ಪರಂಪರೆಯನ್ನು ಕಾದುಕೊಂಡು ಮುನ್ನಡೆದಿದೆ. ಕಾರವಾನ್ ಬುಶ್ ಆಡಳಿತದ ಕೊನೆಯ ವರ್ಷಗಳಲ್ಲಿ ಅತ್ಯಂತ ಹೇಯ ದಮನ ಎದುರಿಸಬೇಕಾಗಿತ್ತು. ಕಾರವಾನ್ ಮೆಕ್ಸಿಕೊ ಗಡಿ ದಾಟುವಾಗ ಕ್ಯೂಬಾಗೆ ಒಯ್ಯಲು ಸಂಗ್ರಹಿಸಿದ ಔಷಧಿ ಮುಂತಾದ ಹಲವು ಸಾಮಗ್ರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಈ ಬಾರಿ ಒಬಾಮಾ ಸರ್ಕಾರ ಸ್ವಲ್ಪ ಕಾಲದ ತಪಾಸಣೆ ನಂತರ ಸಾಮಗ್ರಿ ಮತ್ತು 131 ಜಾಥಾ ಪ್ರಯಾಣಿಕರನ್ನು ಮೆಕ್ಸಿಕೊ ಗಡಿ ದಾಟಲು ಬಿಟ್ಟಿತು. ಸಾಮಾನ್ಯವಾಗಿ ಮೆಕ್ಸಿಕೊ ಗಡಿ ದಾಟುವಾಗ ಇತರ ವಾಹನಗಳ ತಪಾಸಣೆ ಸಹ ಮಾಡುವುದಿಲ್ಲ, ಆದರೂ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇದು ಬದಲಾವಣೆ ಎನ್ನಬಹುದು. ಅಮೆರಿಕನ್ ದೇಶಗಳ ಶೃಂಗಸಭೆಯ ಮೊದಲು ಒಬಾಮಾ 'ಸಂಬಂಧಿಕರಿಗೆ ಹಣ ಕಳಿಸಲು ಮತ್ತು ತಾಯಿನಾಡು ಭೇಟಿ' ನೀಡುವಲ್ಲಿ ಕ್ಯೂಬನ್-ಅಮೆರಿಕನ್ನರ ಮೇಲೆ ಇದ್ದ ಹಲವು ಮಿತಿಗಳನ್ನು ಸಡಿಲಿಸಲಾಗಿದೆ. ಆದರೆ ನಿಜವಾಗಿ ಆಗಬೇಕಾದ್ದು ಕ್ಯೂಬಾದ ಮೇಲಿನ ಆರ್ಥಿಕ ದಿಗ್ಬಂಧನವನ್ನು ಸಾರಾಸಗಟಾಗಿ ತೆಗೆದು ಹಾಕಬೇಕಾದ್ದು. ಅದರಲ್ಲೂ ತಕ್ಷಣ ವೈದ್ಯಕೀಯ ಉಪಕರಣಗಳು ಔಷಧಿಗಳ ಮೇಲೆ ಇದ್ದ ನಿರ್ಬಂಧಗಳನ್ನು ಕಿತ್ತು ಹಾಕುವುದು.

ಕ್ಯೂಬಾದಲ್ಲಿ ಜನರಿಗೆ 'ಅಪ್ರಿಯ'ವಾಗಿರುವ ಸರ್ಕಾರವನ್ನು ಬದಲಾಯಿಸಲು, 'ಪ್ರಜಾಪ್ರಭುತ್ವ' ಸ್ಥಾಪಿಸಲು, ಅಮೆರಿಕ ಸರ್ಕಾರದ ದಿಗ್ಬಂಧನ ಬೇಕಾಗುತ್ತದೆ ಎನ್ನುತ್ತದೆ ಅಮೆರಿಕನ್ ಸರ್ಕಾರ. ಆದರೆ 50 ವರ್ಷಗಳಲ್ಲಿ ಸರ್ಕಾರ ಅಪ್ರಿಯವಾಗಿದ್ದರೆ, ಜನರಿಗೆ ವ್ಯವಸ್ಥೆ ಬೇಡ ಎನ್ನಿಸಿದ್ದರೆ, ಪ್ರಜಾಪ್ರಭುತ್ವ ಹಕ್ಕುಗಳು ಇಲ್ಲವಾಗಿದ್ದರೆ ಬದಲಾವಣೆ ಆಗಿರುತ್ತಿತ್ತು. ಆದ್ದರಿಂದ ಅಮೆರಿಕ ಸರ್ಕಾರ ಕ್ಯೂಬಾದಲ್ಲಿ ಜನರಿಗೆ 'ಅಪ್ರಿಯ'ವಾಗಿದೆ ಎಂಬ ಹೆಸರಲ್ಲಿ ಸರ್ಕಾರವನ್ನು ಬದಲಾಯಿಸಲು ಪ್ರಯತ್ನಿಸುವುದು - ನಿರರ್ಥಕ. ಅಂತಹ ಬದಲಾವಣೆಯ ಪ್ರಯತ್ನವನ್ನು ತಕ್ಷಣ ನಿಲ್ಲಿಸಬೇಕು. ಕ್ಯೂಬಾದ ಮೇಲೆ ಎಸಗುತ್ತಿದ್ದ ಹಲವು ದಮನಕಾರಿ ಕ್ರಮಗಳನ್ನು ಬೆಂಬಲಿಸುತಿದ್ದ ಕ್ಯೂಬನ್-ಅಮೆರಿಕನ್ನರ ಧೋರಣೆ ಬದಲಾಗಿದೆ. ಅವರು ಸಹ ದಿಗ್ಬಂಧನದ ಪರವಾಗಿಲ್ಲ. ಅವರು ಎರಡೂ ದೇಶಗಳ ನಡುವೆ ಸಂಬಂಧ ಸಾಮಾನ್ಯ ಆಗಬೇಕು ಎನ್ನುತ್ತಾರೆ. ಇವಲ್ಲದೆ ಒಬಾಮಾ ಆಡಳಿತ ಈ ಕೆಳಗಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಾಂತಿಪ್ರಿಯರ ಆಶೆ:

- 1976 ರಲ್ಲಿ ಕ್ಯೂಬನ್ ವಿಮಾನದ ಮೇಲೆ ಭಯೋತ್ಪಾದಕ ದಾಳಿ ಮಾಡಿ ಈಗ ಅಮೆರಿಕದಲ್ಲಿ ಇರುವ ಭಯೋತ್ಪಾದಕ ಲೂಯಿಸ್ ಕೆರಿಲ್ಲೇಸ್ ನ್ನು ಕ್ಯೂಬಾ ಅಥವಾ ವೆನೆಝುವೆಲಾಕ್ಕೆ ಒಪ್ಪಿಸಬೇಕು
- ಕ್ಯೂಬನ್ 5 ಎಂದು ಕರೆಯಲಾಗುವ ಐವರನ್ನು ತಕ್ಷಣ ಬಿಡುಗಡೆ ಮಾಡಬೇಕು
- ಕ್ಯೂಬಾದಲ್ಲಿಯೇ ಇದ್ದು ಅಮೆರಿಕಾ ಹಿಡಿತದಲ್ಲಿ ಇರುವ ಕುಖ್ಯಾತ ಗ್ವಂತನಮೋ ಜೈಲನ್ನು ಮುಚ್ಚಿ ಆ ಪ್ರದೇಶವನ್ನು ಕ್ಯೂಬಾಕ್ಕೆ ವರ್ಗಾಯಿಸಬೇಕು.

ಯುದ್ಧಕೋರರಿಗೆ 'ಅನುಕಂಪ ಬಜೆಟ್'

ಜಪಾನಿ ಕಮ್ಯುನಿಸ್ಟ್ ಪಕ್ಷ ಸದಸ್ಯ ತೊಗು
ಒಸಾಮಾ ಒಕಿನಾವಾ ಪ್ರಾಂತ್ಯ ಸರ್ಕಾ
ರಾಷ್ಟ್ರೀಯ ಭದ್ರತೆ ಹೆಸರಲ್ಲಿ ಹಣ ಪೋ
ಮಾಡುತ್ತಿದ್ದನ್ನು ಬಯಲು ಮಾಡಿದ್ದಾರೆ. ಅ
ಇರುವ ಅಮೆರಿಕನ್ ಪಡೆಗಳ ಮೇಲೆ ಖರ್ಚು
ಮಾಡುವ ಹಣ ಅದು. ಅದನ್ನು ಸರ್ಕಾ
'ಅನುಕಂಪ' ಬಜೆಟ್ ಎನ್ನುತ್ತ
ಒಕಿನಾವಾದಲ್ಲಿ ಇರುವ ಅಮೆರಿಕನ್ ಪಡೆಗ
ಮೇಲೆ ಪ್ರಾಂತ್ಯ ಸರ್ಕಾರ 10 ಶತಕೋಟಿ ಯೆ
ಖರ್ಚು ಮಾಡಿದೆಯಂತೆ. ಇದು ಇಡೀ ಜಪಾ
ದೇಶದ 2007 ರ ವಿದ್ಯುತ್ ಖರ್ಚಿನ ಸುಮಾ
ಮುಕ್ಕಾಲು ಭಾಗಕ್ಕೆ ಸಮ. ಅದೇ ಸರ್ಕಾ
ಹಣದ ಕೊರತೆ ಇದೆ ಅಂತ ವೃದ್ಧರಿಗೆ ಇ
ಉಚಿತ ವೈದ್ಯಕೀಯ ಸೇವೆ ಸೌಲಭ್ಯವನ್ನು ಕಡಿ
ಮಾಡಿದೆ. ಈ 'ಅನುಕಂಪ ಬಜೆಟ್' ಕಡಿ
ಮಾಡಿದರೆ ವೃದ್ಧರ ಉಚಿತ ವೈದ್ಯಕೀಯ ಸೇ
ಕಡಿತ ಮಾಡಬೇಕಿರಲಿಲ್ಲ ಎಂದಿದ್ದಾರೆ ಅವ
ಇದು ಬರಿಯ ಒಕಿನಾವಾದ ಪ್ರಶ್ನೆ ಮಾತ್ರ ಅ
ಜಪಾನಿನಲ್ಲಿ ಸುಮಾರು 33 ಸಾವಿರ ಅಮೆರಿಕ
ಪಡೆಗಳು ಬೀಡು ಬಿಟ್ಟಿವೆ. ಅದರ ವೆಚ್ಚ ಅಪಾ
ಅದನ್ನೆಲ್ಲ ಜಪಾನಿ ನಾಗರಿಕರೇ ತೆರುತ್ತಾರೆ.
ಬಗ್ಗೆ ಜಪಾನಿನ ಪಾರ್ಲಿಮೆಂಟಿನಲ್ಲಿ ಚ
ಆಗಬೇಕು ಎಂದು ಜಪಾನಿ ಕಮ್ಯುನಿಸ್ಟ್
ಒತ್ತಾಯ ತಂದಿದೆ. ಯುದ್ಧಕೋರ ಅಮೆರಿಕ
ಪಡೆಗಳು ಜಪಾನಿನಲ್ಲಿ ಬೀಡು ಬಿಟ್ಟಿರುವು
ಯಾತಕ್ಕೆ? ಅದರ ವೆಚ್ಚ ಜಪಾನೀಯರು
ತೆರಬೇಕು? ಎಂದು ಪ್ರಶ್ನೆ ಏಳಲಾರಂಭಿ

ಇದು ನಿಮಗೆ ಗೊತ್ತೆ?

'ಆಮ್ ಆದ್ಮಿ'ಯ ಅಭಿವೃದ್ಧಿಯೇ ಪರಮ ಗುರಿ ಅಂತಾ ಹೇಳೋ ಮನಮೋಹನ್‌ಸಿಂಗ್‌ರ ಯುಪಿಎ ಸರ್ಕಾರದಲ್ಲಿ ಅಭಿವೃದ್ಧಿ ಆದವರು ಯಾರೂ ಅಂತೀರಾ?

2004ರಲ್ಲಿ ಟಾಟಾ ಬಿರ್ಲಾ, ರಿಲಯನ್ಸ್, ಅಂಬಾನಿಗಳು, ವಿಪ್ರೋ ಪ್ರೇಮ್ ಜಿ ದೊಡ್ಡ ಬಂಡವಾಳಗಾರರು 9 ಇದ್ದರು

2008ರಲ್ಲಿ ಅವರೀಗ 53. ಸುಮಾರು ಆರು ಪಟ್ಟು!

ಹತ್ತು ಬಹುದೊಡ್ಡ ಕಾರ್ಪೊರೇಟ್ ಮನೆತನಗಳ ಆಸ್ತಿ 2003-04 ರಲ್ಲಿ 3 ಲಕ್ಷ 54 ಸಾವಿರ ಕೋಟಿ ರೂ. ಗಳಿದ್ದರೆ 2008ರಲ್ಲಿ 10 ಲಕ್ಷದ 34ಸಾವಿರ ಕೋಟಿ ರೂಪಾಯಿಗಳು ಅಂದರೆ 'ಅಭಿವೃದ್ಧಿ' ಮೂರು ಪಟ್ಟು

ಹಾಂ! ಆಮ್ ಆದ್ಮಿ ಎಲ್ಲಿ..?
ಪಾ....ತಾ....ಳ....ದಲ್ಲಿ..

★

ಶಿಕ್ಷಣಕ್ಕೆ ಹಣವಿಲ್ಲ

'ಶಿಕ್ಷಣಕ್ಕೆ ಹೆಚ್ಚಿಗೆ ಖರ್ಚು ಮಾಡಲು ಹಣವಿಲ್ಲ, ಖಾಸಗೀಕರಣ ಅನಿವಾರ್ಯ ಅನ್ನುತ್ತಾರೆ ಮಾನವ ಸಂಪನ್ಮೂಲ ಖಾತೆ ಸಚಿವ ಸಿಬಲ್. ಆದರೆ ಕೇಂದ್ರ ಆರ್ಥಿಕ ಸಚಿವರು, ಕಳೆದ ವರುಷ ಇದ್ದುಳ್ಳವರಿಗೆ, ಕೊಟ್ಟ ವಿವಿಧ ತೆರಿಗೆಗಳ ರಿಯಾಯಿತಿ ಎಷ್ಟು ಗೊತ್ತೇ?!

'ಕೇವಲ' 4 ಲಕ್ಷದ 18 ಸಾವಿರ ಕೋಟಿ ರೂಪಾಯಿ. 2009-10 ರಲ್ಲಿಯೂ ಅದು ಮುಂದವರಿದೇ ಇದೆ.

ಯಾಕಂದ್ರೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ 'ಅವರನ್ನು' ಪಾರು ಮಾಡಲಂತೆ.

★

'ಅಭಿವೃದ್ಧಿ ಸರ್ಕಾರ'ದ ಸಾಲದ ಪುರಾಣ

1. ಕರ್ನಾಟಕದ ಒಟ್ಟು ಸಾಲ 65 ಸಾವಿರ ಕೋಟಿ ರೂಪಾಯಿಗಳು ಮಾತ್ರ (2008-09)

ಅಂದರೆ ಆದಾಯದ ಶೇ.28 ರಷ್ಟು ಸಾಲ. ಮರುಪಾವತಿ ಪ್ರಮಾಣ ಶೇ.10ಕ್ಕಿಂತಲೂ ಕಡಿಮೆ.

2. ರಾಜ್ಯದ ಪ್ರತಿಯೊಬ್ಬ ಪ್ರಜೆಯ ತಲೆ ಮೇಲೆ ರೂ.11,000 ಗಳ ಹೊರೆ ಇದೆ. ಕೇಂದ್ರ ಹೊರಿಸಿರುವ ಭಾರ ತಲಾ ರೂ.3 ಸಾವಿರ ರೂಪಾಯಿಗಳು ಮಾತ್ರ.

3. 2008-09ರಲ್ಲಿ ಕರ್ನಾಟಕ ಸರ್ಕಾರ ಎತ್ತಿದ ಸಾಲಗಳ ಮೂಲಗಳು

ಕೇಂದ್ರದಿಂದ ರೂ.596.16 ಕೋಟಿಗಳು
ನಬಾರ್ಡ್‌ನಿಂದ ರೂ.459.60 ಕೋಟಿಗಳು
ಮಾರುಕಟ್ಟೆ ಸಾಲ ರೂ.7482.57 ಕೋಟಿಗಳು
ಸಣ್ಣ ಉಳಿತಾಯದಿಂದ ರೂ.113.73 ಕೋಟಿಗಳು. ಒಟ್ಟು 8652.46 ಕೋಟಿ ರೂಪಾಯಿಗಳು ಮಾತ್ರ ! 2009-10 ರಲ್ಲಿ 8493ಕೋಟಿ ರೂ. ಸಾಲ ಎತ್ತುವ ಉದ್ದೇಶವಿದೆಯಂತೆ. ತೀರಿಸಿದ್ದು 3782.43 ಕೋಟಿ ರೂಪಾಯಿಗಳು ಮಾತ್ರ! ಉದ್ದೇಶವಿದೆಯಂತೆ.

ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ವಸೂಲು ಮಾಡಲಾದ ಸಾಲ ಬಡ್ಡಿ ರೂ.1216.65 ಕೋಟಿ

ಫಲಾನುಭವಿಗಳು 29,989 ಜನ
ಸರ್ಕಾರಕ್ಕೆ ಆದ ನಷ್ಟ ರೂ.33.15 ಕೋಟಿ.

......ರೈತ - ಕೂಲಿಕಾರರ ಗುಳೆ

ಪುಟ 9 ರಿಂದ

ಜಾನುವಾರುಗಳಿಗೆ ಹೊಟ್ಟು, ಮೇವು ಇಲ್ಲದಂತಾಗಿ ಸಾಯುವ ಪರಿಸ್ಥಿತಿ ಬಂದಿದೆ. ಜಾನುವಾರುಗಳನ್ನು ಮಾರಾಟ ಮಾಡಲು ಹೋದರೆ ಸಂಘ ಪರಿವಾರದವರ ಪ್ರಾಣಿ ದಯಾ ಸಂಘದವರ ತಕರಾರು. ಹೀಗಾಗಿ ಜಾನುವಾರುಗಳನ್ನು ಸಾಕಲು ಆಗದೇ ಮಾರಾಟ ಮಾಡಲು ಆಗದೇ ತ್ರಿಶಂಕು ಸ್ಥಿತಿ ನಿರ್ಮಾಣವಾಗಿದೆ.

ಪರಿಹಾರ

ತಕ್ಷಣದಲ್ಲಿ ಕೂಲಿಕಾರರಿಗೆ ಬರಗಾಲ ಕಾಮಗಾರಿ ಆರಂಭಿಸಬೇಕು, ಗೋಶಾಲೆ ಆರಂಭಿಸಬೇಕು. ಕೆಲವೊಂದು ಹಳ್ಳಿಗಳಲ್ಲಿ ವಯಸ್ಸಾದವರಿಗೆ ಗಂಜೀ ಕೇಂದ್ರವನ್ನು ತೆರೆಯಬೇಕು. ಏರುತ್ತಿರುವ ಬೆಲೆಗಳಿಗೆ ಕೂಲಿಕಾರರು ಸ್ಪಂದಿಸುವುದು ಸಾಧ್ಯವಾಗುತ್ತಿಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ರೂ. 2 ಕೆ.ಜಿ. ಅಕ್ಕಿಯಂತೆ ಕೂಲಿಕಾರರಿಗೆ ವಿತರಿಸುವುದಾಗಬೇಕು. ಪ್ರತಿ ತಿಂಗಳು
ಕಡ್ಡಾಯವಾಗಿ ಕನಿಷ್ಠ 20-25 ದಿವಸ
ಸಿಗುವಂತೆ ಕಾರ್ಯಕ್ರಮ ರೂಪಿಸಬೇಕು. ಅ
ಜೊತೆಗೆ ಅಗತ್ಯ ವಸ್ತುಗಳಾದ ಬೇಳೆ, ಎಣ್ಣೆ,
ಸಾಬೂನು ಒದಗಿಸುವಂತಾಗಬೇಕು. ಇಲ್ಲದಿ
ಹಸಿವಿನ ಸಾವುಗಳು ಸಂಭವಿಸುತ್ತವೆ. ಸುಮಾ
ಭೂ ರಹಿತ ಕೂಲಿಕಾರರು ಶೇ.40 ಇರು
ಅವರಿಗಾಗಿ ಸರ್ಕಾರ ಯಾವುದೇ ಕಾರ್ಯ
ರೂಪಿಸಿಲ್ಲ.

ತೀವ್ರಗತಿಯಲ್ಲಿ ಕೊಪ್ಪಳ ಜಿಲ್ಲೆಯ
ಬರಗಾಲವೆಂದು ಘೋಷಣೆ ಮಾಡಬೇಕು.
ಪರಿಹಾರಕ್ಕಾಗಿ ವಿಶೇಷ ಪ್ಯಾಕೇಜ್ ರೂಪಿಸಬ
ಬೆಳೆ ವಿಮೆ ಕಡ್ಡಾಯವಾಗಿ ಎಲ್ಲರಿಗೂ ಕೊಡಬ
ಹೀಗೆ ಸರ್ಕಾರದ ಹೆಚ್ಚಿನ ಗಮನ ಕೊಡಬ
ತಾತ್ಸಾರ ಮಾಡಿದರೆ ಇಡೀ ಜಿಲ್ಲೆಯೇ
ಹೋಗುತ್ತದೆ. ಸರ್ಕಾರ ಕೂಡಲೇ ಸ್ಪಂದಿಸಬೇ

...ೃಷಿಕೂಲಿಕಾರರ ಆಂದೋಲನದ ಘೋಷಣೆ...

...ರಿಂದ

...ಯಾಗದಿರುವುದೇ ನಮ್ಮ ಅನುಭವವಾಗಿದೆ ...ತಿಳಿಸಿದೆ.

...ಉತ್ತರ ಪ್ರದೇಶ, ಬಿಹಾರ ಮತ್ತು ...ಸ್ತಾನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ...ಯುತ್ತಿದ್ದು ಬಂಡವಾಳಶಾಹಿ ರೈತರು, ...ದಾರರು, ಭ್ರಷ್ಟ ಅಧಿಕಾರಿಶಾಹಿಗಳು ಯೋಜನೆ ...ಗೊಳಿಸಲು ಹುನ್ನಾರ ನಡೆಸಿದ್ದಾರೆ ಅಥವಾ ...ಭದ್ರ ಹಿತಾಸಕ್ತಿ ಬಲಗೊಳಿಸಿಕೊಳ್ಳಲು ...ಜನೆಯನ್ನು ದುರುಪಯೋಗ ...ಕೊಳ್ಳಲಾಗುತ್ತಿದೆ. ಈಗ ಕೇಂದ್ರದಲ್ಲಿ ಮತ್ತೆ ...ರಕ್ಕೆ ಬಂದಿರುವ ಯುಪಿಎ ಸರ್ಕಾರ ಹಾಗೂ ...ರ ಬಂಡವಾಳ ಶಾಹಿ ಭೂಮಾಲೀಕ ರಾಜ್ಯ ...ರಗಳು ಈ ಕಾನೂನು ಜಾರಿಗೊಳಿಸಲು ...ತಾಳಿವೆ. ಮುಖ್ಯವಾಗಿ ಯೋಜನೆ ಜಾರಿ ...ದ, ಕಡಿಮೆ ಬಳಸಿದ ಹಾಗೂ ದುರುಪಯೋಗ ...ರ ಅಂಶಗಳ ಬಗ್ಗೆ ಯಾವುದೇ ...ತದಲ್ಲೂ ಪರೀಕ್ಷಿಸುವ ...ಾಶಗಳನ್ನು ಈ ಸರ್ಕಾರಗಳು ...ಡುತ್ತಿಲ್ಲ. ಹೀಗಾಗಿ ಪಂಚಾಯ್ತಿ ...ವ್ಯಸ್ಥ, ಗುತ್ತಿಗೆದಾರ, ಬ್ಯಾಂಕ್ ...ದಿಗಳ ಅಕ್ರಮ ಕೂಟ ವಿವಿಧ ...ು ವ್ಯವಹಾರಗಳ ಮೂಲಕ ಹಣ ...ಚಾಯಿಸಲಾಗುತ್ತಿದೆ ಎಂದು ...ಲ್ ಕೌನ್ಸಿಲ್ ಸಭೆ ಗುರುತಿಸಿದೆ.

...ಈ ಯೋಜನೆಯಲ್ಲಿ ಕೂಲಿಕಾರರು ... ತೋರುತ್ತಿಲ್ಲ. ಹೀಗಾಗಿ ಇದು ...ಗೊಳ್ಳುತ್ತಿಲ್ಲ ಎನ್ನುವುದು ...ರ್ಣ ಸುಳ್ಳು. ಈ ಯೋಜನೆ ...ಲಗೊಳ್ಳಲು ಮುಖ್ಯವಾಗಿ ...ದ್ಯೋಗ ಭತ್ಯೆ ಪಾವತಿಯನ್ನು ...ಸುತ್ತಿರುವುದು, ಕೂಲಿ ನೀಡಲು ಲೇಟು ...ಡುತ್ತಿರುವುದು ಅಥವಾ ಕೂಲಿ ನೀಡದಿರುವುದು ...ಾ ಕಡಿಮೆ ಕೂಲಿ ನೀಡುವುದು ಕಾರಣವಾಗಿದೆ. ...ಾನೂನು ಪ್ರಕಾರವೇ ಪಾವತಿಸಬೇಕಾಗಿರುವ ...ದ್ಯೋಗ ಭತ್ಯೆಯನ್ನು ಪಾವತಿಸಲು ...ಕರಿಸುತ್ತಿರುವುದು. ಕೂಲಿಕಾರರನ್ನು ...ಸಕ್ತಿಗೊಳಿಸುತ್ತಿದೆ ಎಂದು ಜನರಲ್ ಕೌನ್ಸಿಲ್ ...ಬೊಟ್ಟು ಮಾಡಿದೆ.

...ಶಿಷ್ಟ ರಾಜಕೀಯ ಸನ್ನಿವೇಶದಲ್ಲಿ ಸಂಘಟನೆಯ ...ತರ ಹೋರಾಟದಿಂದ ಬಂದಿರುವ ಈ ...ಜನೆ ಜಾರಿ ಮಾಡುವ ಮುಖ್ಯ ಜವಾಬ್ದಾರಿ ...ೂಲಿಕಾರರ ಹೆಗಲ ಮೇಲಿದೆ ಎಂದು ದೃಢವಾಗಿ ...ಾದಿಸಿರುವ ಈ ನಿರ್ಣಯ ಕನಿಷ್ಠ 150 ದಿನಗಳಿಗೆ ...ಸಲು 150 ರೂ. ಕನಿಷ್ಠ ಕೂಲಿ ನಿಗಧಿಮಾಡಲು ...ಾಟ ಮಾಡಲು ರಾಜ್ಯ ಮಟ್ಟದ ಸಮಾವೇಶ ...ಾಗುವುದು ಎಂದು ತಿಳಿಸಿದೆ. ಇದರ ...ಭಾವಿಯಾಗಿ ತಾಲ್ಲೂಕು ಹಾಗೂ ...ಮಟ್ಟದ 'ನರೇಗಾ' ಕೆಲಸಗಾರರ ...ವೇಶಗಳನ್ನು ಸಂಘಟಿಸುವ ಅಗತ್ಯವನ್ನು ಒತ್ತಿ ಹೇಳಿದೆ.

ಹಸಿವಿನೆಡೆಗೆ ತಳ್ಳುವ ಯುಪಿಎ ಸರ್ಕಾರದ ಧೋರಣೆಗಳು ಕೃಷಿ ಕೂಲಿಕಾರರ ಸಂಘದ ತೀವ್ರ ಆತಂಕ

ಅಖಿಲ ಭಾರತ ಜನರಲ್ ಕೌನ್ಸಿಲ್ ಅಂಗೀಕರಿಸಿದ 'ಆಹಾರ ಭದ್ರತೆ' ಮೇಲಿನ ಪ್ರಮುಖ ನಿರ್ಣಯವು ಯುಪಿಎ ಸರ್ಕಾರವು, ಮನಮೋಹನ್‌ಸಿಂಗ್ ಅರ್ಥಮಂತ್ರಿ ಯಾಗಿದ್ದಾಗ ಅನುಸರಿಸಿದ ಹಾಗೂ ಎನ್.ಡಿ.ಎ. ನೀತಿಗಳಿಗೆ ಯಾವುದೇ ಭಿನ್ನವಲ್ಲದ ಜಾಗತಿಕ ಬೀಜ, ರಸಗೊಬ್ಬರ, ಕೃಷಿ ವ್ಯಾಪಾರಿ ಕಾರ್ಪೊರೇಟ್ ಸಂಸ್ಥೆಗಳ ಮರ್ಜಿಗೆ ಭಾರತದ ಆರ್ಥಿಕತೆಯನ್ನು ತಳ್ಳುವ ಮತ್ತದೇ ನೀತಿ ಹಾಗೂ ಧೋರಣೆಗಳಾಗಿವೆ ಎಂದು ಟೀಕಿಸುತ್ತಾ ಇಂತಹ ಜನವಿರೋಧಿ ನೀತಿ ಹಾಗೂ ಧೋರಣೆಗಳು ಹಸಿವೆನೆಡೆಗೆ ತಳ್ಳುತ್ತವೆ ಎಂದು ತೀವ್ರವಾಗಿ ಖಂಡಿಸಿದೆ.



ಆಹಾರ ಬೆಳೆಗಳಿಂದ ವಾಣಿಜ್ಯ ಬೆಳೆಗಳಿಗೆ ಬದಲಾಯಿಸುವ ಲೇವಾದೇವಿಗಾರರ, ದಲ್ಲಾಳಿಗಳ, ರಸಗೊಬ್ಬರ, ಕೀಟನಾಶಕ, ಬಿತ್ತನೆ ಬೀಜದ ಕಾರ್ಪೊರೇಟ್ ಸಂಸ್ಥೆಗಳ ಜೀತಗಾರರನ್ನಾಗಿ ರೈತರನ್ನು ಪರಿವರ್ತಿಸುವ ಈ ಮೂಲಕ ಕೃಷಿಯಲ್ಲಿ ಪ್ರಗತಿ ಸಾಧಿಸಬಹುದು ಎಂಬ ದೋಷಪೂರಿತ ಕಣ್ಣೋಟದಿಂದ ಪ್ರೇರಿತವಾಗಿರುವ ಈ ನೀತಿಗಳು ಕೃಷಿ ಉತ್ಪನ್ನಗಳ ಬೆಲೆಯನ್ನು ಜೂಜುಕೋರ ಬಂಡವಾಳದ ಮರ್ಜಿಗೆ ತಳ್ಳುವುದಲ್ಲದೆ ಸಣ್ಣಪುಟ್ಟ ಕ?ಷಿ ಉತ್ಪತ್ತಿದಾರರನ್ನು ಸರ್ವನಾಶ ಮಾಡಿ ಕೃಷಿಕೂಲಿಕಾರರನ್ನು ನಿರ್ಗತಿಕರನ್ನಾಗಿ ಮಾಡಲಿವೆ. ಬದಕಲು ಬೇಕಾಗಿರುವ ಅತ್ಯಗತ್ಯ ವಸ್ತುಗಳನ್ನು ಲಾಭಕೋರ, ಜೂಜುಕೋರ, ಕಾಳಸಂತೆಕೋರರ ಲಾಭದ ಮರ್ಜಿಗೆ ವಹಿಸುವ ಇಂತಹ ನಾಚಿಕೆಗೇಡಿನ ನೀತಿಗಳಿಂದಾಗಿಯೇ ಜಗತ್ತಿನಾದ್ಯಂತ ಜನರು ಹಸಿವಿನಿಂದ ಬಳಲುವಂತಾಗಿದೆ.

ದಿನಕ್ಕೆ 20 ರೂ.ಗೂ ಕಡಿಮೆ ಆದಾಯದಲ್ಲಿ ಬದುಕುವ 82 ಕೋಟಿ ಜನ ಹಾಗೂ ಸುಮಾರು 24 ಕೋಟಿ ಜನ 9 ರೂ.ನಲ್ಲಿ ಬದುಕುವ ಶೇ. 90 ರಷ್ಟು ರೈತರು 4 ಹೆಕ್ಟೇರ್‌ಗಿಂತ ಕಡಿಮೆ ಭೂಹಿಡುವಳಿ ಹೊಂದಿರುವ, ಕರಾಳ ವಸೂಲಾತಿಯ ನಿಯಮಗಳನ್ನು ಒಳಗೊಂಡಿರುವ, ಕೈಗಾರಿಕೋದ್ಯಮಿಗಳು ಪಾವತಿಸುವ ಸಾಲದ ಮೇಲಿನ ಬಡ್ಡಿಗಿಂತ ಮೂರು ಪಟ್ಟು ಹೆಚ್ಚು ಬಡ್ಡಿ ಪಾವತಿಸಬೇಕಾಗಿರುವ ಸನ್ನಿವೇಶದ ಹಿನ್ನೆಲೆಯಿರುವ ಭಾರತದಂತಹ ಆರ್ಥಿಕತೆಗೆ ಈ ರೀತಿಯ ಕೃಷಿ ನೀತಿಗಳು ಪ್ರಾಯೋಗಿಕವಲ್ಲ ಹಾಗೂ ಕಾರ್ಯಸಾಧವು ಅಲ್ಲ. ಕಳೆದ 10 ವರ್ಷಗಳ ಈಚೆಗೆ 20 ಸಾವಿರಕ್ಕೂ ಹೆಚ್ಚು ಜನರು ಹಸಿವಿನಿಂದ ಸತ್ತಿರುವುದಲ್ಲದೆ 2 ಲಕ್ಷಕ್ಕೂ ಹೆಚ್ಚು ರೈತರು, ಕೃಷಿ ಕೂಲಿಕಾರರು ಆತ್ಮಹತ್ಯೆ ಮಾಡಿಕೊಂಡಿರುವುದು ಇದನ್ನು ದೃಢಪಡಿಸಿದೆ. ಭಾರತದ ಜನರ ಬದುಕು ಮತ್ತು ಭೂಮಿಯನ್ನು ದೊಡ್ಡ ದೊಡ್ಡಕಂಪನಿಗಳ, ಕಾರ್ಪೊರೇಟ್ ವ್ಯಕ್ತಿಗಳ ಹಿಡಿತಕ್ಕೆ ಒಪ್ಪಿಸಲು ನೆರವಾಗುವ ನೀತಿಗಳಿಗೆ ಸರ್ಕಾರ ಪ್ರೋತ್ಸಾಹಿಸುತ್ತಿದೆ. ಭಿಕ್ಷುಕರನ್ನಾಗಿ ಅಥವಾ ನಿರಾಶ್ರಿತರನ್ನಾಗಿ ರೈತಾಪಿ ಸಮೂಹವನ್ನು ಪರಿವರ್ತಿಸುವ ಇಂತಹ ನೀತಿಗಳು ತಪ್ಪು ನೀತಿಗಳಷ್ಟೇ ಅಲ್ಲ, ಕ್ರಿಮಿನಲ್ ನೀತಿಗಳಾಗಿವೆ.

ಈ ರೀತಿಯ ಯು.ಪಿ.ಎ. ಸರ್ಕಾರದ ಕ್ರಿಮಿನಲ್ ನೀತಿಗಳು ಅಂತರಾಷ್ಟ್ರೀಯ ಆಹಾರ ನೀತಿ, ಸಂಶೋಧನಾ ಸಂಸ್ಥೆಯ ಜಾಗತಿಕ ಹಸಿವಿನ ಸೂಚ್ಯಂಕದ 88 ಅಭಿವೃದ್ಧಿ ಶೀಲ ದೇಶಗಳ ಪಟ್ಟಿಯಲ್ಲಿ ಭಾರತವನ್ನು 66ನೇ ಸ್ಥಾನಕ್ಕೆ ಇಳಿಸಿದೆ. ನಮ್ಮದೇಶದ 12 ಕ್ಕೂ ಹೆಚ್ಚು ದೊಡ್ಡ ರಾಜ್ಯಗಳು 'ಜಾಗೃತಿ ವಹಿಸಬೇಕಾದ' ಪಟ್ಟಿಯಲ್ಲಿವೆ. ಅದರಲ್ಲೂ ಮಧ್ಯಪ್ರದೇಶ ಅಪಾಯಕಾರಿ ಪರಿಸ್ಥಿತಿಯ ರಾಜ್ಯ ಎಂದು ಗುರುತಿಸಲ್ಪಟ್ಟಿದೆ. ಒಂದು ದಿನಕ್ಕೆ ಒಬ್ಬ ವ್ಯಕ್ತಿಗೆ 485 ಗ್ರಾಂಗಳಿಷ್ಟಿದ್ದ ಆಹಾರ ಲಭ್ಯತೆ 439.3 ಕ್ಕೆ ಕುಸಿದಿದೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ನಮಗೆ ಉಳಿದಿರುವ ಅವಕಾಶ ಈ ನೀತಿಗಳನ್ನು ಬದಲಾಯಿಸುವುದು ಅಥವಾ ಸಾವನ್ನು ಆಯ್ಕೆ ಮಾಡಿಕೊಳ್ಳುವುದು ಎಂಬುದೇ ಆಗಿದೆ. ಆದ್ದರಿಂದ ನಮ್ಮ ಆಯ್ಕೆ ಇದನ್ನು ಬದಲಾಯಿಸುವುದು ಆಗಬೇಕಾಗಿದೆ ಎಂದು ನಿರ್ಣಯ ಸ್ಪಷ್ಟಪಡಿಸಿದೆ.

1) ಕೇರಳ ಮಾದರಿಯಲ್ಲಿ ಆಹಾರ ಬೆಳೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಮಧ್ಯ ಪ್ರವೇಶಿಸಬೇಕು. 2) ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಗೊಳಿಸಿ ಅತ್ಯಗತ್ಯ 14 ಜೀವಾನಾವಶ್ಯಕ ವಸ್ತುಗಳನ್ನು ಸಾಕಾಗುವಷ್ಟು ನೀಡಬೇಕು. 3) ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣ ಗೊಳಿಸಿ ಎಲ್ಲಾ ಕೃಷಿಕೂಲಿಕಾರರಿಗೆ ಬಿ.ಪಿ.ಎಲ್. ಕಾರ್ಡ್ ನೀಡಿ ತಿಂಗಳಿಗೆ ಕನಿಷ್ಠ 40 ಕೆ.ಜಿ. ದವಸಧಾನ್ಯಗಳನ್ನು ನೀಡಬೇಕು. 4) ಕೇರಳ ಸರ್ಕಾರದ ಮಾದರಿಯಲ್ಲಿ ಲೇವಾದೇವಿಗಾರರ ಸಾಲವು ಸೇರಿದಂತೆ ರೈತರ ಸಾಲ ಮನ್ನಾ ಮಾಡಲುತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಕೃಷಿ ಕೂಲಿಕಾರರ ಎಲ್ಲ ಸಾಲಗಳನ್ನು ಮನ್ನಾ ಮಾಡುವ ಜೊತೆಗೆ ತ್ರಿಪುರಾ ಸರ್ಕಾರದ ಮಾದರಿಯಲ್ಲಿ ಪರಿಣಾಮಕಾರಿಯಾಗಿ 'ನರೇಗಾ' ಮೂಲಕ ಅಗತ್ಯವಿರುವಷ್ಟು ಉದ್ಯೋಗಗಳನ್ನು ಒದಗಿಸಬೇಕು. 5) ಎಡ ಸರ್ಕಾರಗಳಾದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಮಾದರಿಯಲ್ಲಿ ಜನಪರ ಸಮಗ್ರ ಭೂಸುಧಾರಣಾ ನೀತಿ ಜಾರಿಗೆ ತಂದು ಗ್ರಾಮೀಣ ಭೂಹೀನ ಜನರಿಗೆ ಬದಕಲು ಅಗತ್ಯವಾದ ಸಾಧನವನ್ನು ನೀಡುವ ಜೊತೆಗೆ, ಇಳುವರಿ ಹೆಚ್ಚಿಸಬೇಕು. 6) ರೈತರು ಬೆಳೆದ ಬೆಳೆಗಳಿಗೆ ಪ್ರೋತ್ಸಾಹದಾಯಕ ಬೆಲೆ ನೀಡುವುದರ ಜೊತೆ, ರಸಗೊಬ್ಬರ ಬೀಜ, ಇನ್ನಿತರ ಲಾಗುವಾಡುಗಳನ್ನು ಸಬ್ಸಿಡಿ ದರದಲ್ಲಿ ಪೂರೈಸಬೇಕು. 7) ದೇಶದ ಎಲ್ಲ ಭಾಗಗಳಿಂದ ಸಾಕಾಗುವಷ್ಟು ದವಸಧಾನ್ಯ ಉತ್ಪಾದಿಸಿ ಪಡಿತರ ವ್ಯವಸ್ಥೆ ಮೂಲಕ ಕೈಗೆಟುಕುವ ಬೆಲೆಯಲ್ಲಿ ವಿತರಿಸಬೇಕು. 8) ಆಹಾರ ಭದ್ರತೆಯನ್ನು ನಿರ್ವಹಿಸಲು ಅಗತ್ಯವಿರುವ ಹಣಕಾಸನ್ನು ರಾಜ್ಯಗಳಿಗೆ ಕೇಂದ್ರ ನೀಡಬೇಕು ಮತ್ತು ಯಾವುದೇ ಆಹಾರ ಭದ್ರತೆ ಕಾಯ್ದೆ ಮೇಲಿನ ಅತ್ಯಗತ್ಯ ಅಂಶಗಳನ್ನು ನಿರ್ಲಕ್ಷಿಸುವಂತಿರಬಾರದು. ಮೇಲಿನ ಎಲ್ಲವೂ ಭಾರತದ ಜನರ ಆಹಾರದ ಅಗತ್ಯಗಳನ್ನು ಖಾತರಿ ಪಡಿಸುವಂತಹ ಅಂಶಗಳಾಗಿವೆ. ಆದರೆ ಈ ಸರ್ಕಾರದ ನೀತಿಗಳು, ದಲ್ಲಾಳಿಗಳು, ಕಾರ್ಪೊರೇಟ್ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆ ಮಣಿದಿವೆ. ಆದ್ದರಿಂದಲೇ ದೊಡ್ಡ ದೊಡ್ಡ ಸಾಮೂಹಿಕ ಕಾರ್ಯಚರಣೆಗಳ ಮೂಲಕ ಸ್ಥಳೀಯವಾಗಿ ಹಾಗೂ ಅಖಿಲಭಾರತ ಮಟ್ಟದಲ್ಲಿ ಹಾಗೂ ಸಮಾನ ಮನಸ್ಕ ಇನ್ನಿತರ ಸಂಘಟನೆಗಳ ಜೊತೆ ಜಂಟಿ ಹೋರಾಟಗಳ ಮೂಲಕ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಬೇಕು. ಆಹಾರ ಭದ್ರತೆ ಅತ್ಯಗತ್ಯವಾದದು. ಆದರೆ ರೈತರನ್ನು ಸಂರಕ್ಷಿಸದೆ ಆಹಾರ ಭದ್ರತೆ ಸಾಧ್ಯವಿಲ್ಲ ಎಂಬುದನ್ನು ಮರೆಯಲಾಗದು. ಆದ್ದರಿಂದ ಬಳಕೆದಾರರ ಮತ್ತು ರೈತರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟು ಹೋರಾಟ ರೂಪಿಸಿ ಈ ಗುರಿಗಳನ್ನು ಸಾಧಿಸಲಾಗುವುದು ಎಂದು ನಿರ್ಣಯ ತಿಳಿಸಿದೆ.

ಸಾವಿತ್ರಮ್ಮರವರ ಸಾವು-ಕಠಿಣ ಶಿಕ್ಷೆಗೆ ಆಗ್ರಹ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ನೆಲಮಾಕನಹಳ್ಳಿ ಗ್ರಾಮದ ಅಲೆಮಾರಿ ಜನಾಂಗಕ್ಕೆ ಸೇರಿದ ಸಾವಿತ್ರಮ್ಮರವರ ಮೇಲೆ ನಡೆದ ಹಲ್ಲೆ ಸಜೀವ ದಹನವನ್ನು ಉಗ್ರವಾಗಿ ಖಂಡಿಸಿದ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆ ಮೃತ ಸಾವಿತ್ರಮ್ಮರವರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಹಾಗೂ ಮಕ್ಕಳಿಗೆ ಸರ್ಕಾರಿ ಉದ್ಯೋಗ ನೀಡಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ದುಷ್ಕರ್ಮಿಗಳನ್ನು ಕಠಿಣ ಶಿಕ್ಷೆಗೆ ಗುರುಪಡಿಸಬೇಕು ಹಾಗೂ ನೊಂದ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿರುವುದಲ್ಲದೆ ಬೇಡಿಕೆ ಈಡೇರಿಸದಿದ್ದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದೆ ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಮಿತಿ ಸಹ ಈ ಹಲ್ಲೆಯನ್ನು ತೀವ್ರ ಖಂಡಿಸಿ, ಪರಿಹಾರಕ್ಕೆ ಆಗ್ರಹಿಸಿದೆ.

○

JANASHAKTHI KANNADA VARA PATRIKE AUGUST 23, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007



'ಜ್ವರ ಬಂದಿದೆ' ಎಂದು ಮೇಲಿನವರು ಹೇಳಿದರೆ ನಾವು ಹೌಹಾರಿ ಮುಖವಾಡ ಖರೀದಿಸಲು, ಲಸಿಕೆ ಹಾಕಿಸಲು ದೌಡಾಯಿಸುತ್ತೇವೆ. ಮಾಧ್ಯಮಗಳು ಭಯದ ಬೆಂಕಿಗೆ ರೋಚಕ ವರದಿಗಳ ತುಪ್ಪ ಸುರಿಯುತ್ತವೆ. ಜನರ ಜೀವ ಹಿಂಡುತ್ತಿರುವ ಗುನ್ಯ ಮತ್ತು ಡೆಂಗೇಗಳಿಗಿಂತ ಪ್ರಭುತ್ವದ ಆಸಕ್ತಿ ಎಚ್1ಎನ್1ರ ಮೇಲಿರುತ್ತದೆ.

ಹಂದಿ ಜ್ವರ ಅನಗತ್ಯ ಭೀತಿ - ಕಂಪನ ಯಾಕೆ ?

ಜ್ವರ ಮತ್ತು ಬರದ ನಡುವೆ ಭಯೋತ್ಪಾತದ ಅಬ್ಬರ

ಈ ಜ್ವರದ ಭಯ ನಿಜಕ್ಕೂ ಬಹುಬೇಗ ಹಬ್ಬುತ್ತಿದೆ. ಬೆಂಗಳೂರು ಅಂತರರಾಷ್ಟ್ರೀಯ ನಿಲ್ದಾಣದಲ್ಲಿ 'ಹಂದಿ ಜ್ವರ ತಪಾಸಣೆಯ ವ್ಯವಸ್ಥೆಯೇ ಇಲ್ಲ' ಎಂದು ವಿದೇಶೀ ಅತಿಥಿಯೊಬ್ಬ ವಿಡಿಯೋ ಕ್ಯಾಮರಾಕ್ಕೆ ಮುಖಕೊಟ್ಟು ಹೇಳುತ್ತಾನೆ. ಜಗತ್ತಿನ ಎಲ್ಲ ಆಧುನಿಕ ವಿಮಾನ ನಿಲ್ದಾಣಗಳಲ್ಲಿ ಹೈಟೆಕ್ ವ್ಯವಸ್ಥೆಗಳಿವೆ. ಜ್ವರ ಪೀಡಿತರನ್ನು



ದೂರದಿಂದಲೇ ಗುರುತಿಸಬಲ್ಲ 'ಥರ್ಮಲ್ ಸ್ಕ್ಯಾನರ್'ಗಳು ನಿಮ್ಮಲ್ಲೇಕಿಲ್ಲ'? ಎಂದು ಸಚಿವರು ಅಧಿಕಾರಿಗೆ ಕೇಳುತ್ತಾರೆ. ತ್ವರಿತವಾಗಿ ಅಂಥ ನೂರಾರು ಸ್ಕ್ಯಾನರ್‌ಗಳಿಗೆ ಆರ್ಡರ್ ಹೋಗುತ್ತವೆ. ಬೆಲೆ ಚೌಕಾಶಿ, ಗುಣಮಟ್ಟದ ತಪಾಸಣೆ, ಟೆಂಡರ್ ಪ್ರಕ್ರಿಯೆ ಮುಂತಾದ ಎಲ್ಲ ಪಾರದರ್ಶಕತಾ ನಿಯಮಗಳನ್ನು ಪಕ್ಕಕ್ಕೆ ಸರಿಸಿ ತುರ್ತಾಗಿ ಸ್ಕ್ಯಾನರ್, ಕ್ಯಾಮರಾ, ಕಂಪ್ಯೂಟರ್, ರಿಮೋಟ್ ಮಾನಿಟರ್ ಎಲ್ಲವೂ ಬರುತ್ತವೆ.


ಆದರೆ ವಾಸ್ತವ ಸಂಗತಿ ಬೇರೆಯೇ ಇರುತ್ತದೆ. ದೂರದಿಂದಲೇ ಜ್ವರವನ್ನು ಗುರುತಿಸುವುದು ಬರೀ ನಾಟಕ; 'ದೇಹದ ಉಷ್ಣತೆಯಲ್ಲಿ ಯಾವ ವ್ಯತ್ಯಾಸ ಇಲ್ಲದೆಯೂ ಹಂದಿ ಜ್ವರ ಬರಲು ಸಾಧ್ಯ ಇದೆ' ಎಂಬುದು ಚಿಲಿ, ಮೆಕ್ಸಿಕೋ ಮತ್ತು ಕೆನಡಾಗಳಲ್ಲಿನ ವೈದ್ಯಕೀಯ ದಾಖಲೆಗಳಲ್ಲಿ ಕಂಡುಬಂದಿದೆ.

'ಮುಖವಾಡ ಬೇಕು, ಇನ್ನಷ್ಟು ಬೇಕು, ಬೇಗ ತರಿಸಿ' ಎಂದು ಆರೋಗ್ಯ ಇಲಾಖೆಯ ಕಾರ್ಯದರ್ಶಿ ತುರ್ತಾಗಿ ಆಜ್ಞಾಪಿಸುತ್ತಾರೆ. ಅದು ಥ್ರೀ ಮೈಕ್ರಾನ್ ಗಾತ್ರದ ಸೂಕ್ಷ್ಮ ಜೀವಕಣಗಳನ್ನು ಸೋಸುವಂಥದ್ದೇ ಆಗಿರಬೇಕು ಎನ್ನುತ್ತಾರೆ. ಬಳಸಿ ಬಿಸಾಕುವ ಆ ವಸ್ತ್ರಕ್ಕೆ 110 ರೂಪಾಯಿ ಎಂದು ಗೊಣಗಿದರೆ 'ಎಷ್ಟಾದರೂ ಪರವಾಗಿಲ್ಲ ಬೇಗ ತರಿಸಿ' ಎಂಬ ಆದೇಶ ಬರುತ್ತದೆ. ಗುಣಮಟ್ಟ ಪರೀಕ್ಷೆ ಇಲ್ಲ. ಯಾಕಿಷ್ಟು ದುಬಾರಿ ಎಂಬ ಪ್ರಶ್ನೆ ಇಲ್ಲ. ಎಲ್ಲಿಂದ ಬಂತು ಪರಿಶೀಲಿಸಲು ಬಿಡುವಿಲ್ಲ.

ಅಸಲೀ ಸಂಗತಿ ಬೇರೆಯೇ ಇರುತ್ತದೆ. ನೀವು ಬಳಸುವ ಸಾದಾ ಶುಭ್ರ ಕರವಸ್ತ್ರವೂ ಥ್ರೀಮೈಕ್ರಾನ್ ಜೀವಾಣುವನ್ನು ತಡೆಗಟ್ಟುತ್ತದೆ. ಹಂದಿಜ್ವರದ ವೈರಾಣು ನಿಜಕ್ಕೂ ಅಷ್ಟು ಪ್ರಖರವೇ ಆಗಿದ್ದರೆ ಅದು ಏರ್ ಟಿಕೆಟ್ ಮೇಲೆ, ಪಾಸ್‌ಪೋರ್ಟ್ ಪುಸ್ತಕದ ಮೇಲೂ ಕೂತಿರುತ್ತದೆ. ಬಾಗಿಲಿನ ಹಿಡಿಕೆಯ ಮೂಲಕ, ನೀರಿನ ನಲ್ಲಿಯ ಮೂಲಕ, ಕೈಗವಸಿನ ಮೂಲಕ, ಅಷ್ಟೇಕೆ ಕಂಪ್ಯೂಟರ್ ಮೌಸ್ ಮೂಲಕವೂ ಸಾಗಿಬರುತ್ತದೆ. ಎಷ್ಟೇ ದುಬಾರಿಯ ಮುಖವಾಡವೂ ವ್ಯರ್ಥವಾಗಿರುತ್ತದೆ. ಆದರೆ ಈಗಿನ ವೈರುಣುವಿಗೆ ಅಂಥ ಪ್ರಖರ ಗುಣ ಇಲ್ಲವೇ ಇಲ್ಲ. ಮುಖವಾಡ ಅಗತ್ಯವೂ ಇಲ್ಲ.

'ಟೆಸ್ಟ್ ಕಿಟ್ ಬೇಕು, ಟೆಸ್ಟ್ ಇಲ್ಲವೇ'? ಎಂದು ವರದಿಗಾರ ಕೇಳಿದ್ದೇ ತಡ, ಅವೂ ಸಾಲು ಸಾಲಾಗಿ ಬರುತ್ತವೆ. ಪಿಸಿಆರ್ ಕಿಟ್‌ಗಳು ಅಷ್ಟೊಂದು ಸಂಖ್ಯೆಯಲ್ಲಿ ಎಲ್ಲಿಂದಲೋ ಬರುತ್ತವೆ.

'ಟಾಮಿಫ್ಲೂ! ಟಾಮಿಫ್ಲೂ ಲಸಿಕೆ ಬೇಕು. ರೆಲೆನ್ಜಾ ಬೇಕು. ಬೇಗ ತರಿಸುತ್ತೇವೆ' ಎಂದು ಸರ್ಕಾರದ ಮುಖ್ಯಸ್ಥರು ಹೇಳುತ್ತಾರೆ. ಆರೋಗ್ಯ ಸಚಿವರು ದೌಡಾಯಿಸಿ ಬಂದು, 'ಶೀಘ್ರವೇ ದೇಶದ ಎಲ್ಲಾ ಆಸ್ಪತ್ರೆಗಳಿಗೆ ಲಸಿಕೆಯನ್ನು ವಿತರಿಸುತ್ತೇವೆ' ಎಂದು ಆಶ್ವಾಸನೆ ನೀಡುತ್ತಾರೆ.



ವಾಸ್ತವ ಏನೆಂದರೆ, ಲಸಿಕೆ ಉತ್ಪಾದನೆಗೆ ಹಾಗೂ ಅದರ ಗುಣಮಟ್ಟ ಪರೀಕ್ಷೆಗೆ ಕನಿಷ್ಠ ಪಕ್ಷ ಆರು ತಿಂಗಳು ಬೇಕು. ಆರು ದಿನಗಳ 'ಜೀವಂತ' ಕೋಳಿಮೊಟ್ಟೆಗೆ ಸಿರಿಂಜ್ ಮೂಲಕ ವೈರಾಣುವನ್ನು ಚುಚ್ಚಿ, ಮೊಟ್ಟೆಯ ಬಿಳಿಭಾಗದ ತುಂಬೆಲ್ಲ ಅದನ್ನು ಬೆಳೆಸಬೇಕು. ನಂತರ ಅದನ್ನು ಅರೆಜೀವ ಮಾಡಿ... ಅವೆಲ್ಲ ಸುದೀರ್ಘ ವಿವರಣೆಯನ್ನು ವಿಶ್ವ ಸ್ವಾಸ್ಥ ಸಂಸ್ಥೆ (ವಿಸ್ವಾಸಂ) ಜಾಲತಾಣದಲ್ಲಿ ನೋಡಬಹುದು. ಸಾರಾಂಶ ಏನೆಂದರೆ ಮೂರು ವಾರಗಳಲ್ಲಿ ಅದನ್ನು ತಯಾರಿಸಲು ಸಾಧ್ಯವೇ ಇಲ್ಲ.

ಈಗ ಹಂದಿಜ್ವರದ ಪ್ರಖರತೆಗೆ ಬರೋಣ. ಅದು 'ಮಹಾಮಾರಿ ಆಗಿದೆ' ಎಂದು ಜೂನ್ ಮೊದಲ ವಾರದಲ್ಲಿ ಮಾಡಿದ್ದರ ಹಿಂದೆಯೇ ಒಂದು ಭಾರೀ ಸಂಚಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಲಕ್ಷಾಂತರ ಜನರು ಪುತಪುತನೆ ಸಾಯತೊಡಗಿದರೆ ಅದು 'ಮಹಾಮಾರಿ' ಎನಿಸುತ್ತದೆ. ಆದರೆ ವಿಸ್ವಾಸಂ ಘೋಷಣೆ ಮಾಡುವ ಹೊತ್ತಿಗೆ ಕೇವಲ 144 ಜನರು ಜಗತ್ತಿನಾದ್ಯಂತ ಹಂದಿಜ್ವರದಿಂದ ಸತ್ತಿದ್ದರು. ಅಷ್ಟು ಜನರು ಪ್ರತಿದಿನವೂ ಸಾಮಾನ್ಯ ಫ್ಲೂ ಜ್ವರದಿಂದ ಸಾಯುತ್ತಾರೆ. ವರ್ಷಕ್ಕೆ ಐದು ಲಕ್ಷ ಜನರು ಫ್ಲೂ ದಿಂದ ಸಾಯುತ್ತಾರೆ. ಮೆಕ್ಸಿಕೋದ ಹಂದಿಜ್ವರ ಅತ್ಯಂತ ತೀವ್ರ ಸಾಂಕ್ರಾಮಿಕ ಎನಿಸಿಕಂಡರೂ ನಾಲ್ಕೇ ವಾರಗಳಲ್ಲಿ ಇಡೀ ದೇಶ ಶಾಂತವಾಯಿತು.

ವಿಸ್ವಾಸಂ ಎಂಬುದು ಬಲಾಢ್ಯ ಔಷಧಿ ಕಂಪನಿಗಳ ಬಿಗಿಮುಷ್ಠಿಯಲ್ಲಿದೆ ಎಂಬುದು ಈಗೇನೂ ರಹಸ್ಯವಾಗಿ ಉಳಿದಿಲ್ಲ. ಜಗತ್ತಿನ ಎಲ್ಲ 194 ದೇಶಗಳಿಗೆ ಲಸಿಕೆಯನ್ನು ಒದಗಿಸಬೇಕೆಂದು ಅದು ಜೂನ್ 13 ರಂದು ತೀರ್ಮಾನಿಸುವಾಗ ಐದು ಔಷಧ ಕಂಪನಿಗಳ ಪ್ರತಿನಿಧಿಗಳೂ ಅಂದಿನ ರಹಸ್ಯ ಸಭೆಯಲ್ಲಿದ್ದರು.

ಈಗಂತೂ ಲಸಿಕೆಯನ್ನು ತಯಾರಿಸುವ ಎಲ್ಲಾ ಕಂಪನಿಗಳೂ ಲಾಭದ ಸುನಾಮಿಯಲ್ಲಿ ತೇಲುತ್ತಿವೆ. ಬಾಕ್ಸ್‌ಟರ್, ರೋಶ್, ಜಿಎಸ್‌ಕೆ, ಗೈಲೀಡ್, ನೊವಾರ್ಟಿಸ್, ಆಸ್ಟ್ರಾ-ಝೆನೆಕಾ, ಅವಾಂಟಿಸ್ ಎಲ್ಲವೂ, ಅವುಗಳಲ್ಲಿ ಎಲ್ಲಕ್ಕಿಂತ ಮೊದಲು ಲಸಿಕೆ ಸಿದ್ಧಪಡಿಸಿದ ಗೈಲೀಡ್ ಕಂಪನಿಯ ಅಧ್ಯಕ್ಷ ಬೇರಾರೂ ಅಲ್ಲ. ಅಮೇರಿಕಾದ ಮಾಜಿ ರಕ್ಷಣಾ ಸಚಿವ ಡೊನಾಲ್ಡ್ ರಮ್ಸ್‌ಫೆಲ್ಡ್!

ಲಾಭದ ಉದ್ದೇಶದಿಂದಲೇ ಹಂದಿಜ್ವರವನ್ನು ಸೃಷ್ಟಿಸಲಾಗಿದೆ ಎಂದು ಆಸ್ಟ್ರೀಯಾದ ವಿಜ್ಞಾನ ವರದಿಗಾರ್ತಿ ಜೇನ್ ಬರ್ಗ್‌ಮಿಸ್ಟರ್ ಎಂಬಾಕೆ ವಿಸ್ವಾಸಂ. ವಿಶ್ವಸಂಸ್ಥೆ ಮತ್ತು ಅಮೇರಿಕಾದ ಉನ್ನತ ಅಧಿಕಾರಿಗಳ ಮೇಲೆ ಜೈವಿಕ ಭಯೋತ್ಪಾದನೆಯ ದಾವೆ ಹೂಡಿದ್ದಾಳೆ. ಸಾರ್ಸ್, ಹಕ್ಕಿಜ್ವರ, ಏಡ್ಸ್ ಎಲ್ಲದರ ಹಿಂದೆಯೂ ಈ ಸಂಚುಗಳಿವೆ ಎಂದು ಆಕೆ ದಾಖಲೆಗಳ ರಾಶಿಯನ್ನು ಒಡ್ಡುತ್ತಾಳೆ.



'ಜ್ವರ ಬಂದಿದೆ' ಎಂದು ಮೇಲಿನವರು ಹೇಳಿದರೆ ನಾವು ಹೌಹಾರಿ ಮುಖವಾಡ ಖರೀದಿಸಲು, ಲಸಿಕೆ ಹಾಕಿಸಲು ದೌಡಾಯಿಸುತ್ತೇವೆ. ಮಾಧ್ಯಮಗಳು ಭಯದ ಬೆಂಕಿಗೆ ರೋಚಕ ವರದಿಗಳ ತುಪ್ಪ ಸುರಿಯುತ್ತವೆ. ಜನರ ಜೀವ ಹಿಂಡುತ್ತಿರುವ ಗುನ್ಯ ಮತ್ತು ಡೆಂಗೇಗಳಿಗಿಂತ ಪ್ರಭುತ್ವದ ಆಸಕ್ತಿ ಎಚ್1ಎನ್1ರ ಮೇಲಿರುತ್ತದೆ.

('ಪ್ರಜಾವಾಣಿ' ಲೇಖನದ ಆಯ್ದ ಭಾಗ)

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH